ಜೀವನಾಮೃತ-2

ಸಾ. ಕೃ. ರಾಮಚಂದ್ರರಾವ್

ಅಭಿನವಗುಪ್ತ



ಅಭಿನವಗುಪ್ತ

ಅಭಿನವಗುಪ್ತ (ಹತ್ತನೆಯ ಶತಮಾನ) ಮಹಾಪ್ರತಿಭಾಶಾಲಿ; ಕಾಶ್ಮೀರದವನು. ಕವಿ, ವಿಮರ್ಶಕ, ವ್ಯಾಖ್ಯಾನಕಾರ, ದಾರ್ಶನಿಕ, ದ್ರಷ್ಟಾರ, ಆಲಂಕಾರಿಕ, ಭಾವುಕ, ಅನುಭಾವಿ, ಗಾಯಕ, ಯೋಗಿ, ಸಂತ, ಸಿದ್ಧ. ದರ್ಶನ, ತಂತ್ರ, ಅಲಂಕಾರಶಾಸ್ತ್ರ—ಈ ಕ್ಷೇತ್ರಗಳಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದವನು. ಹಲವಾರು ಗುರುಗಳಿಂದ ಅರಿತದ್ದನ್ನು, ಅನೇಕ ಶಾಸ್ತ್ರಗಳಿಂದ ಕಲಿತದ್ದನ್ನು, ತನ್ನ ಅನುಭವದಿಂದ ಗಟ್ಟಿಮಾಡಿಕೊಂಡದ್ದನ್ನು ರಸವತ್ತಾಗಿ ನಿರೂಪಿಸಿದ್ದಾನೆ. ರಸ, ಧ್ವನಿ, ಪ್ರತಿಭೆ, ಸಿದ್ಧಿ, ಸಾಧನೆ, ದರ್ಶನ, ತಂತ್ರಗಳನ್ನು ಕುರಿತಂತೆ ವಿಚಾರ ಮಾಡುವಾಗಲೆಲ್ಲ ಅಭಿನವ ನಮಗೆ ಅನಿವಾರ್ಯ ವಾಗುತ್ತಾನೆ. ನಮ್ಮ ದೇಶದ ಸಂಸ್ಕೃತಿಗೂ, ವಿಶ್ವದ ಅರಿವಿನ ವಿಕಾಸಕ್ಕೂ ಅವನು ನೀಡಿರುವ ಕೊಡುಗೆ ವಿಪುಲವಾದುದು, ಮೌಲಿಕವಾದುದು. ಅಭಿನವಗುಪ್ತನ ಜೀವನ-ಸಾಧನೆ-ಸಿದ್ಧಿಗಳ ಪರಿಚಯ ಪ್ರಕೃತಕೃತಿಯಲ್ಲಿದೆ.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವಾಚಸ್ಪತಿ ಮುಂತಾದ ಸಾರ್ಥಕ ಅಭಿಧಾನಗಳಿಂದ ಅಲಂಕೃತರಾಗಿರುವ ಪ್ರೊ. ಸಾ. ಕೃ. ರಾಮಚಂದ್ರರಾವ್ ಅವರು ನಮ್ಮ ನಾಡಿನ ಬಹುಶ್ರುತ ವಿದ್ವಾಂಸರಲ್ಲಿ ಪ್ರಮುಖರು. ವೇದ, ದರ್ಶನ, ತಂತ್ರ, ಜೈನ, ಬೌದ್ಧ, ಸಂಗೀತ, ಸಾಹಿತ್ಯ, ಚಿತ್ರ, ಶಿಲ್ಪ, ಆಯುರ್ವೇದ ಮುಂತಾದ ಹತ್ತುಹಲವು ಜ್ಞಾನಶಾಖೆಗಳಲ್ಲಿ ಪರಿಣತರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಭಾಷೆಗಳಲ್ಲಿ ಸುಮಾರು 150ಕ್ಕೂ ಹೆಚ್ಚು ಕೃತಿಗಳು ಇವರಿಂದ ಹೊರಹೊಮ್ಮಿವೆ. ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ, ಅನಕೃ ಪ್ರಶಸ್ತಿ, ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿ, ವೇದಸಂಮಾನ—ಹೀಗೆ ಹತ್ತಾರು ಪ್ರಶಸ್ತಿಗಳು ರಾಯರಿಗೆ ಸಂದಿವೆ.

ಅಭಿನವಗುಪ್ತ

ಸಾ. ಕೃ. ರಾಮಚಂದ್ರರಾವ್

2003

ಅಭಿಜ್ಞಾನ

ನಂ. 7-8, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಆವರಣ

ಬಸವನಗುಡಿ ರಸ್ತೆ, ನರಸಿಂಹರಾಜ ಕಾಲೊನಿ

ಬೆಂಗಳೂರು - 560 019

✆ 652 14 14 94484 94949

ABHINAVAGUPTA—(A Survey of the Life and Works of Abhinavagupta) by *Vidyālaṅkāra, Śastracūdāmaṇi, Vedāntanidhi, Saṅgītakalāratna* Prof. S. K. Ramachandra Rao; Published by Abhijñāna, # 7-8, Gokhale Institute of Public Affairs, Bull Temple Road, N. R. Colony, Bangalore - 560 019. INDIA ✆ 080 - 652 14 14
e-mail: abhijnanam@yahoo.co.uk

Price: Rs. 50 Pages: 104

First Edition: July 2003

© Reserved

ISBN 81-88278-05-X

ಪುಟಗಳು: 104

ಪ್ರಥಮಮುದ್ರಣ: ಜುಲೈ 2003

ಬೆಲೆ: ರೂ. 50

ರೇಖಾಚಿತ್ರಗಳು: ಪ್ರೊ. ಸಾ. ಕೃ. ರಾಮಚಂದ್ರರಾವ್

ಮುಖಪುಟವಿನ್ಯಾಸ: ಶ್ರೀಪಾದ

ಅಕ್ಷರಜೋಡಣೆ: ಶ್ರೀಧರ್

ಮುದ್ರಕರು: ಶ್ರೀರಂಗ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಭವಾನಿನಗರ, ಬೆಂಗಳೂರು - 19. ದೂ: 6679333, 6524757

ಪರಿವಿಡಿ

○	ಕೃತಜ್ಞತೆಗಳು	vi
○	ಅಭಿಜ್ಞಾನದ ಮಾತು	vii
○	ಮೊದಲ ಮಾತು	xxxiii
1.	ಕೃತಿಸಂಪ್ರವೇಶಃ	1
2.	ಕಾಶ್ಮೀರಿಕೋಽಭಿನವಗುಪ್ತಪಾದಃ	4
3.	ಗುರುಭ್ಯೋಽಪಿ ಗರೀಯಾಂಸಃ	7
4.	ಸಾಹಿತ್ಯಸಾಂದ್ರರಸಭೋಗಪರೋ	17
5.	ಶಿವಮತಕಮಲೋನ್ಮೀಲನಪ್ರೌಢಭಾಸ್ವಾನ್	27
6.	ಶ್ರೀಮದಭಿನವಗುಪ್ತಪಾದಪದ್ಮೋಪಜೀವಿನಃ	37

ಅನುಬಂಧಗಳು

ಒಂದು - ಅಭಿನವಗುಪ್ತನ ಕೃತಿಗಳು	43
ಎರಡು - ಗುರುನಾಥಪರಾಮರ್ಶ	45
ಮೂರು - ಭಗವದ್ಗೀತಾರ್ಥಸಂಗ್ರಹ	55
ನಾಲ್ಕು - ಅಭಿನವಗುಪ್ತನ ದಾರ್ಶನಿಕ ನೆಲೆ	61

ಕೃತಜ್ಞತೆಗಳು

ನನ್ನ ಕೋರಿಕೆಯನ್ನು ಮನ್ನಿಸಿ 'ಅಭಿನವಗುಪ್ತ'ನನ್ನು ಮಡಿಲಿಗಿಟ್ಟ ಗುರುಗಳಾದ ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವಾಚಸ್ಪತಿ ಪ್ರೊ. ಸಾ. ಕೃ. ರಾಮಚಂದ್ರರಾಯರಿಗೂ,

'ಅಭಿಜ್ಞಾನದ ಮಾತ'ನ್ನು ಸಿದ್ಧಪಡಿಸುವಾಗ ಎದುರಾದ ಕೆಲವೊಂದು ಶಾಸ್ತ್ರೀಯ ತೊಡಕುಗಳನ್ನು ಪರಿಹರಿಸಿ, ಹರಸಿದ ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ ಅವರಿಗೂ,

'ಅಭಿಜ್ಞಾನದ ಮಾತು'ಗಳನ್ನು ಪರಿಶೀಲಿಸಿ ಪರಿಷ್ಕರಣಕ್ಕೆ ಸಹಕರಿಸಿ, ಅರಿವಿನ ಹರವನ್ನು ವಿಸ್ತರಿಸಿದ ಶತಾವಧಾನಿ ಡಾ. ಆರ್. ಗಣೇಶ್, ಡಾ. ಮಹೇಶ ಅಡಕೋಳಿ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ, ಪ್ರೊ. ಕೆ. ಎಸ್. ಕಣ್ಣನ್, ಶ್ರೀ ಸುಧೀರ್ ಕೃಷ್ಣಸ್ವಾಮಿ, ಡಾ. ಬಿ. ವಿ. ವೆಂಕಟಕೃಷ್ಣ, ಡಾ. ಜಿ. ಬಿ. ಹರೀಶ್—ಈ ಎಲ್ಲ ವಿದ್ವಾಂಸರಿಗೂ,

ಶ್ರೀ ಕೆ. ಸಿ. ರಾಮಚಂದ್ರ, ಶ್ರೀ ಬದರಿನಾರಾಯಣ, ಶ್ರೀ ಎಚ್. ವಿ. ವಿಶ್ವನಾಥ್—ಈ ಎಲ್ಲ ಮಿತ್ರರಿಗೂ

ಅಕ್ಷರವನ್ನು ಜೋಡಿಸಿಕೊಟ್ಟ ಶ್ರೀ ಶ್ರೀಧರ್ ದಂಪತಿಗಳಿಗೂ,

ಮುಖಪುಟವನ್ನು ವಿನ್ಯಾಸಗೊಳಿಸಿದ ಮಿತ್ರ ಶ್ರೀ ಶ್ರೀಪಾದ್ ಅವರಿಗೂ,

ಮುದ್ರಣವನ್ನು ಮಾಡಿಕೊಟ್ಟ ಶ್ರೀರಂಗ ಪ್ರಿಂಟರ್ಸ್ ಅವರಿಗೂ,

ಕೊಂಡು ಓದುತ್ತಿರುವ ನಿಮ್ಮೆಲ್ಲರಿಗೂ,

ನನ್ನ ಅನಂತ ನಮನಗಳು.

ಎಂದರೋ ಮಹಾನುಭಾವುಲು ಅಂದಿರಿಕಿ ವಂದನಮುಲು

27.7.2003 | ಬೆಂಗಳೂರು

ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ ಮತ್ತು ಪ್ರಕಾಶಕ

ಅಭಿಜ್ಞಾನದ ಮಾತು

ಯಸ್ಮಿನ್ ಸರ್ವಂ ಯತಃ ಸರ್ವಂ
ಯಃ ಸರ್ವಂ ಸರ್ವತಶ್ಚ ಯಃ ।
ಯಶ್ಚ ಸರ್ವಮಯೋ ನಿತ್ಯಂ
ತಸ್ಮೈ ಸರ್ವಾತ್ಮನೇ ನಮಃ ॥*

—ಮಹಾಭಾರತ

(ಯಾರಲ್ಲಿ ಎಲ್ಲವೂ ಅಡಗಿದೆಯೋ, ಯಾರಿಂದ ಎಲ್ಲವೂ ಉಂಟಾಗಿದೆಯೋ, ಯಾರು ಎಲ್ಲವೂ ಆಗಿದ್ದು ಎಲ್ಲೆಲ್ಲೂ ವ್ಯಾಪಿಸಿರುವನೋ, ಎಲ್ಲದರಲ್ಲೂ ಇದ್ದು ಎಲ್ಲದರ ಆತ್ಮವಾಗಿರುವನೋ ಆ ನಿತ್ಯಸ್ವರೂಪಿಗೆ ನಮನ.)

ಈ ಬರವಣಿಗೆಯೆಂಬ ಅನುಭಾವಕ್ಕೆ ಧನ್ಯತೆಯೇ ವಿಭಾವ; ಒಟ್ಟು ಪ್ರಕ್ರಿಯೆಯಲ್ಲಿ ಸ್ಥಾಯಿಯಾಗಿರುವುದು ಉತ್ಸಾಹ ಎಂಬುದೇನೋ ದಿಟವೆನ್ನಿ; ಆದರೆ ಇದು ಶಾಂತದಲ್ಲಿ ಪರ್ಯವಸಿಸಬೇಕೆಂಬುದು ನನ್ನ ಭಾವ.

'ಅಭಿಜ್ಞಾನದ ಮಾತು'ಗಳ ಹಿಂದಿರುವ ನಿಲವನ್ನು ಇಲ್ಲಿ ಸ್ಪಷ್ಟಪಡಿಸುವುದು ಉಚಿತವೆನಿಸುತ್ತದೆ. ಇಂದು ಜಗತ್ತೆಲ್ಲವೂ ಪತಿತವಾಗಿಬಿಟ್ಟಿದೆ; ಸಮಾಜವನ್ನು ಹಿಡಿದೆತ್ತಿ ಉದ್ಧರಿಸಬೇಕಾದ ಕರ್ತವ್ಯ-ಹೊಣೆಗಾರಿಕೆಗಳು ಅಭಿಜ್ಞಾನದ ಮೇಲಿವೆ—ಎಂಬ ಧೋರಣೆ ಇಲ್ಲಿನದಲ್ಲ. "ಜಗವನುದ್ಧರಿಸುವೆನೆನುವ ಸಖನೆ ನಿನ್ನುದ್ಧಾರವೆಷ್ಟಾಯ್ತು?"—ಎಂಬ ಆತ್ಮಾವಲೋಕನವೇ ಇಲ್ಲಿಯ ಮಾತುಗಳನ್ನು ಎತ್ತಿಹಿಡಿದಿರುವ ಭಿತ್ತಿ. ಈ ಮಹಾನ್ವೇಷಣೆಯಲ್ಲಿ ಎದುರಾದ ಮೈಲುಗಲ್ಲುಗಳು, ಹಿಡಿದ ದಿಕ್ಕು-ದಾರಿಗಳು ಗುರಿಯನ್ನು ಮುಟ್ಟಲು ಎಷ್ಟು ಪ್ರಯೋಜನಕ್ಕೆ ಬಂದಿವೆ, ಒಡಲ ಒಳಿತಿಗೆ ಹೇಗೆ ಒದಗಿಬಂದಿವೆ ಎಂಬುದರ ಅವಲೋಕನವಷ್ಟೆ ಈ ಮಾತುಗಳು. ಇವು ದಿಟವಾಗಿಯೂ ಸ್ವಗತವೇ ಹೌದು. ವಿಶ್ವವೇ ಒಂದು ರಂಗಮಂದಿರವಲ್ಲವೆ? ಹೀಗಾಗಿ, ನಾವು ನಟರು ಸ್ವಗತವನ್ನೂ ಬಹಿರಂಗದಲ್ಲಿಯೇ ಒಪ್ಪಿಸಬೇಕಾದ ಅನಿವಾರ್ಯತೆಯಿದೆ; ಮಾತ್ರವಲ್ಲ, ಇದು ರಂಗಮರ್ಯಾದೆಯೂ ಹೌದಷ್ಟೆ. ಇಷ್ಟು ಮಾತ್ರವಲ್ಲ, ಪಾತ್ರನಿರ್ವಹಣೆಯಷ್ಟೇ ಪಾತ್ರವಿಶ್ಲೇಷಣೆಯೂ ಆನಂದದಾಯಕ ಕೂಡ. ಎಷ್ಟೇ ಆಗಲಿ, ನಾವು ಕಾರಯಿತ್ರೀಪ್ರತಿಭೆ-ಭಾವಯಿತ್ರೀಪ್ರತಿಭೆಗಳ ಅದ್ವೈತವನ್ನು ಕಂಡವರಲ್ಲವೆ? ಹೀಗಾಗಿ, ಈ ಸಹಜಪ್ರಕ್ರಿಯೆಯು ಗುರಿಸೇರಲು ಪಯಣದಲ್ಲಿ ತಲ್ಲೀನವಾಗಿರುವ ನದಿಯಂತೆ; ಇದರ ಗುರಿ ಉದ್ದೇಶಗಳಂತೂ ಸ್ಪಷ್ಟ. ನಡುವೆ ಯಾರಾದರೂ ಮಿಂದರೆ ಇದಕ್ಕೆ ಸಂತಸವಿಲ್ಲ; ತೊಂದರೆ ಎದುರಾದರೆ ಆತಂಕವಿಲ್ಲ. ಆದರೆ ಸಮಾನ

---

* ಈ ಶ್ಲೋಕವನ್ನು ಅಭಿನವಗುಪ್ತನು 'ಪರಾತ್ರೀಶಿಕಾವಿವರಣ'ದಲ್ಲಿ ಉದ್ಧರಿಸಿದ್ದಾನೆ.

ಹೃದಯಿಗಳ ಸಂಗಮದಿಂದ ಹರಿವಿಗೊಂದು ಉಲ್ಲಾಸ, ರಭಸ ಒದಗೀತು.

ಬಾಳಹಾದಿಯಲ್ಲಿ ನಮ್ಮ ಹೆಜ್ಜೆಗಳ ಉರುಪನ್ನು ಆರಿಸಿ ಹುರುಪನ್ನು ಹರಿಸುವ ಮಹನೀಯರ ಸ್ಮರಣೆಯೇ ಮಹಾನಂದಕ್ಕೆ ಕಾರಣವಾಗುವಂಥದ್ದು. ತಮದ ತಳಮಳಗಳಿಂದ ನಮ್ಮನ್ನು ತರಣಮಾಡಿಸಬಲ್ಲ ತತ್ತ್ವದೆಡೆಗೆ ತೋರ್ಬೆರಳನ್ನು ನೆಟ್ಟು ತನು-ಮನಗಳಿಗೆ ತಂಪನ್ನೆರೆಯುವ ತತ್ತ್ವಜ್ಞರು ಹಲವರು ನಮಗೆ ಎದುರಾಗುತ್ತಿರುತ್ತಾರೆ; ಆದರೆ ನಾವು ಅವರನ್ನು ಬರಮಾಡಿಕೊಳ್ಳಲು ಸಿದ್ಧರಿರಬೇಕಷ್ಟೆ. ಬುದ್ಧ, ಶಂಕರ, ರಮಣ, ರಾಮಕೃಷ್ಣ, ಆನಂದ ಕುಮಾರಸ್ವಾಮಿ, ಖಲೀಲ್ ಗಿಬ್ರಾನ್, ಅಲ್ಲಮ, ಡಿವಿಜಿ, ಆ್ಯಲನ್ ವ್ಯಾಟ್ಸ್, ಓಶೋ—ಇವರು, ಇಂಥವರನೇಕರು ನನ್ನ ಪಾಲಿಗೆ ಬದುಕೆಂಬ ಮಹೋತ್ಸವವನ್ನು ಬೆಳಗಿದ ದೀವಟಿಗೆಗಳು. ದೀವಟಿಗೆಗಳ ಬೆಳಕಿಲ್ಲದೆ ಉತ್ಸವದ ಮೂರ್ತಿಯನ್ನಾಗಲೀ ಅದರ ಸವಿ-ಸ್ವಾರಸ್ಯವನ್ನಾಗಲೀ ಕಾಣಲಾಗದಷ್ಟೆ? ಈಚೆಗಷ್ಟೆ ಈ ಮಹಾಯಾನದಲ್ಲಿ ಧ್ರುವತಾರೆಯಂತೆ ತೋರಿಕೊಂಡ ಮಹಾನುಭಾವ ಅಭಿನವಗುಪ್ತ; ಶಾರದಾಪೀಠದಲ್ಲಿ ಶಿವನಾಗಿ ಮೆರೆದು ಅರಿವಿನ ಇರವು-ಹರವುಗಳನ್ನು ಲೋಕಕ್ಕೆ ಅರುಹಿದ ಜೀವನ್ಮುಕ್ತ. ಜಗತ್ತಿನ ಪ್ರತಿ ಕಣದ ಅಲುಗಾಟವೂ ಶಿವನದೇ ಕುಣಿತ; ತೃಣವೊಂದರಿಂದ ಒದಗಬಹುದಾದ ಕ್ಷಣಕಾಲದ ಆನಂದವೂ ಕೂಡ ಶಿವನದೇ ಸ್ವರೂಪ ಎಂದು ಕಾಣಿಸಿದ ದಾರ್ಶನಿಕ ಅವನು. ಹೊರಗಣ ಸಂಭ್ರಮದಲ್ಲಿಯೇ ಮುಳುಗಿದ್ದೂ ಒಳಗಣ ಧ್ಯಾನಸ್ಥಿತಿಯನ್ನು ಹಿಡಿದಿಟ್ಟುಕೊಳ್ಳುವ ಉಪಾಯವನ್ನು ಬೋಧಿಸಿದ ಮಹಾಗುರು. ಶಬ್ದದಲ್ಲಿರುವ ನಿಶ್ಶಬ್ದವನ್ನು ಕೇಳಿಸಿದ ಅನುಭಾವಿ; ಅನಿತ್ಯವಾದರೂ ನಿತ್ಯವೆನಿಸಿರುವ ಸಂಸಾರದ ಸಾರ-ಸಾಮರಸ್ಯವನ್ನು ತೋರಿಸಿದ ಋಷಿ ಅವನು. ವಿಶ್ವವೆಂಬ ಸ್ವಾತ್ಮಮಹಾಭಿತ್ತಿಯ ಮೇಲೆ, ಆ ಭಿತ್ತಿಯನ್ನೂ ಮೀರಿನಿಂತ ಶಿವನೆಂಬ ಪೂರ್ಣಕಲಾವಿದನು ಭಿತ್ತಿಯೊಳಗೇ ಒಂದಾಗಿ ಮೂಡಿಸಿರುವ ಮಹಾಕಲೆಯ ವ್ಯಾಪ್ತಿಯನ್ನೂ ರಸಮೀಮಾಂಸೆಯನ್ನೂ ಸ್ಥಾಪಿಸಿದ ರಸಯೋಗಿ ಅವನು. ಇಂಥವನನ್ನು ಕುರಿತ ಕೃತಿಯೊಂದನ್ನು ಲೋಕಾರ್ಪಣೆಮಾಡುವುದು ಧನ್ಯತೆಗೆ ಕಾರಣವಾಗದಿದ್ದೀತೆ?

ಜೀವನದ ಸ್ವಾರಸ್ಯವನ್ನು ಕಂಡುಕೊಳ್ಳಲು ಕಾವ್ಯ ಒಂದು ಮಹೋಪಾಯ ಎನ್ನುವುದು ನನ್ನ ವಿಶ್ವಾಸ. ಕಾವ್ಯ, ಗದ್ಯ, ನಾಟ್ಯ, ನಾಟಕ, ಶಿಲ್ಪ, ಚಿತ್ರ ಮುಂತಾದವು ನಿಜಾನಂದಕ್ಕೆ ಕಾರಣವಾಗಬಲ್ಲಂಥ ಕಲಾಪ್ರಕಾರಗಳು; ಇವೆಲ್ಲವನ್ನೂ ನಮ್ಮವರು ಒಂದೇ ಎಂದು ಎಣಿಸಿದ್ದಾರೆ. ರಸ-ಧ್ವನಿ- ಔಚಿತ್ಯವೆಂಬ ಕಾವ್ಯಗಾಯತ್ರಿ[1]ಯ ಮೂಲಕ ಸಾಕ್ಷಾತ್ಕಾರವಾಗುವ ಕಲಾಸರಸ್ವತಿಯ ಉಪಾಸನೆಯು ನಮಗೆ ನಮ್ಮ ದಿಟವಾದ ಅರಿವನ್ನು ಅನುಭವಕ್ಕೆ ಎಟುಕಿಸಬಲ್ಲದು. ಹೀಗೆ ಮಹಾತತ್ತ್ವವನ್ನು ಬೊಗಸೆಯಲ್ಲಿ ಹಿಡಿದು ಅದರ ಸಾರವನ್ನು ಉಣಿಸುವ ಕಾವ್ಯಕ್ಕೂ ಬದುಕಿಗೂ ಹತ್ತಿರದ ನಂಟು;[2] ಇದು ರುದ್ರಯಾಮಳತತ್ತ್ವದಂತೆ ನಿತ್ಯಸಂಬಂಧಾತ್ಮಕವಾದದ್ದು.

---

1. *ಭಾರತೀಯಕಾವ್ಯಮೀಮಾಂಸೆ*, ತೀನಂಶ್ರೀ, ಪು. 47, 1973

2. 'It is not the tongue, but our very life that sings the new song' (St. Augustine), *Christian and Oriental Philosophy of Art*—Ananda K. Coomaraswamy, 1994

ಕಾವ್ಯದ ತಾಯಿಬೇರು ಜೀವನ; ಕಾವ್ಯಮೀಮಾಂಸೆಯ ತಾಯಿಬೇರು ಜೀವನಮೀಮಾಂಸೆ.[3] ಹೀಗಾಗಿ ನನಗೆ ಕಾವ್ಯವೆಂದರೂ ಕಾವ್ಯಮೀಮಾಂಸೆಯೆಂದರೂ ಪ್ರೀತಿ. ಸುಮಾರು ಒಂದು ವರ್ಷದ ಹಿಂದಿನ ಮಾತು. ಶತಾವಧಾನಿ ಡಾ. ಆರ್. ಗಣೇಶ್ ಅವರು ತಮ್ಮ ಕೆಲವರು ಶಿಷ್ಯರಿಗೆ 'ಧ್ವನ್ಯಾಲೋಕ'ದ ಪಾಠವನ್ನು ನಡಸುವರೆಂಬ ಸುದ್ದಿ ತಿಳಿದುಬಂದಿತು. ಈ ಮೊದಲೇ ಧ್ವನ್ಯಾಲೋಕದ ಹೂರಣವನ್ನು ಕುರಿತು ಬಿಡಿಮಾತುಗಳನ್ನು ಅಲ್ಲಿ-ಇಲ್ಲಿ ಕೇಳಿದ್ದೆನಾಗಿ ಈಗ ಕುತೂಹಲ ಮೂಡಿತು. ಕಾವ್ಯಾರಾಧನೆಗೆಂದು ತೋರಣ ಕಟ್ಟಿದ್ದ ಶಾರದಾಮಂದಿರಕ್ಕೆ ಪ್ರವೇಶಾವಕಾಶವೂ ಒದಗಿತೆನ್ನಿ! ಕ್ರಮವಾಗಲ್ಲದಿದ್ದರೂ ಆಗಾಗ ಅಲ್ಲಿ ಸೇರುತ್ತಿದ್ದೆ. 'ಧ್ವನ್ಯಾಲೋಕಲೋಚನ'ದ ಒಂದೆರಡು ತುಣುಕುಮಾತುಗಳು ಈ ಸಂದರ್ಭಗಳಲ್ಲಿ ನನ್ನ ಕಿವಿಯಲ್ಲಿ ಬೀಳುವುದಾಯಿತು; ಅಭಿನವಗುಪ್ತನ ಹಿರಿಮೆಯಲ್ಲಿಯ ಎಳೆಯೊಂದು ಗೋಚರಕ್ಕೆ ಬಂದಿತು. ಅಭಿನವಗುಪ್ತನೊಂದಿಗೆ ಮೊದಲಬಾರಿಗೆ ನನ್ನ ಮುಖಾಮುಖಿಯಾದದ್ದು ಹೀಗೆ.

ಹೀಗೆಯೇ ಒಂದು ಸಂದರ್ಭದಲ್ಲಿ ಅಭಿನವಗುಪ್ತನ ವಿಷಯವಾಗಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಬೇಕಾದ ಅನಿವಾರ್ಯತೆ-ಒತ್ತಡಗಳು ಮೂಡಿಕೊಂಡವು. ಬಳಿಯಲ್ಲಿಯೇ ಪುಸ್ತಕಗಳ ದಾಸ್ತಾನು ಇದ್ದಿತು; ಓದಲು ತೊಡಗಿದೆ. ಅಭಿನವ ನನ್ನನ್ನು ಪೂರ್ಣವಾಗಿ ಆವರಿಸಿಕೊಂಡುಬಿಟ್ಟ. ಮತ್ತಷ್ಟು ವಿಶದವಾಗಿ ಅವನನ್ನು ಅರಿಯುವ ಉತ್ಸಾಹ ತುಂಬಿಕೊಂಡಿತಾದರೂ ಈ ಅಧ್ಯಯನಕ್ಕೆ ನನ್ನದೇ ಮಿತಿಗಳಿದ್ದುವು. ಅಭಿನವನ ಗುಂಗಿನಲ್ಲೇ ಇದ್ದ ನಾನು ಅವನನ್ನು ತಲಪಲು ಆಣವೋಪಾಯವೊಂದರ ಅನ್ವೇಷಣೆಯಲ್ಲಿದ್ದೆ. ಆಗ ನನಗೆ ಎದುರಾದದ್ದು ಒಂದು 'ಸಾಹಸ'.[4] ಗುರುಗಳಾದ ಪ್ರೊ. ಸಾ. ಕೃ. ರಾಮಚಂದ್ರರಾಯರು ಕಾಶ್ಮೀರಶೈವದರ್ಶನದಲ್ಲಿ ಆಗಮಪ್ರಾಮಾಣ್ಯವಿರುವ 'ಶಿವಸೂತ್ರ'ವನ್ನು ಕುರಿತು ಈಗಾಗಲೇ ಪಾಠವನ್ನು ಆರಂಭಿಸಿರುವ ವಿಷಯ ತಿಳಿದುಬಂದಿತು; ಮಾತ್ರವಲ್ಲ, ಈ ಜ್ಞಾನಸತ್ರದಲ್ಲಿ ಭಾಗಿಯಾಗಲು ಗುರುಗಳ ಅನುಮತಿಯೂ ನನಗೆ ಪ್ರಾಪ್ತವಾಯಿತು. ಅದುವರೆಗೂ 'ಶಿವಸೂತ್ರ'ದ ಹೆಸರನ್ನೇ ಕೇಳದಿದ್ದವನಿಗೆ ಈಗ ಅದರ ಅಧ್ಯಯನಕ್ಕೆ ಅವಕಾಶ; ಇದು ಸಾಹಸವಲ್ಲದೆ ಮತ್ತೇನು? ವಿಸ್ಮಯ ಎಂದರೆ ಇದೇ ಅಲ್ಲವೆ? ಆ ಸಂದರ್ಭದಲ್ಲಿ ನನಗಾದ ಆನಂದಕ್ಕೆ ಪಾರವೇ ಇಲ್ಲವೆನ್ನಿ. ವಿಸ್ಮಯಕ್ಕೂ ಆನಂದಕ್ಕೂ ಇರುವ ನಂಟನ್ನು 'ಶಿವಸೂತ್ರ'ವೇ ಎತ್ತಿಹಿಡಿಯುವುದಷ್ಟೆ.[5] ರಾಯರು ನಡಸುತ್ತಿರುವ 'ಸೂತ್ರ'ಗಳ ಮತ್ತು 'ಅಭಿನವಭಾರತಿ'ಯ ಪರಾಮರ್ಶೆಯ ಯಜ್ಞಕಾಲದಲ್ಲಿ ಅಭಿನವನ ಪ್ರತಿಭೆಯ ಮಹಾದರ್ಶನವೇ ಸಾಕ್ಷಾತ್ಕಾರ ವಾಗುತ್ತದೆ.

---

3. ಭಾರತೀಯಕಾವ್ಯಮೀಮಾಂಸೆ, ಪು. 96
4. 'ಸಾಹಸ' ಎನ್ನುವುದಕ್ಕೆ ಕಾಶ್ಮೀರಶೈವದರ್ಶನದಲ್ಲಿ ವಿಶೇಷವಾದ ಅರ್ಥಸ್ವಾರಸ್ಯವಿದೆ. ಅನಿರೀಕ್ಷಿತವಾಗಿ ಎದುರಾಗುವ ಘಟನೆಗೆ, ದರ್ಶನಕ್ಕೆ ಇಲ್ಲಿ ಸಾಹಸವೆಂಬ ಅಭಿಧಾನ.
5. ವಿಸ್ಮಯೋ ಯೋಗಭೂಮಿಕಾಃ, I. 12

ಅಭಿನವನಲ್ಲಿ ಆದರ ಹೆಚ್ಚಿದಂತೆ ಅವನನ್ನು ಕುರಿತ ಗ್ರಂಥಗಳನ್ನು ಪ್ರಕಾಶಪಡಿಸಬೇಕೆಂಬ ಅದಮ್ಯ ಬಯಕೆಯೂ ಮನದಲ್ಲಿ ಬಲಿಯುತ್ತಿತ್ತು. ಕೋರಿಕೆಯನ್ನು ಗುರುಗಳಲ್ಲಿ ನಿವೇದಿಸಿಕೊಂಡಾಗ ಅವರು ಸಂತೋಷದಿಂದಲೇ ಒಪ್ಪಿಕೊಂಡರು. ಈಗ ನಿಮ್ಮ ಕೈಯನ್ನು ಅಲಂಕರಿಸಿರುವ ಕೃತಿಯೇ ಇದರ ಫಲ. ತಮ್ಮ ಬಿಡುವಿಲ್ಲದ ಕಾರ್ಯಗಳ ನಡುವೆಯೇ ಈ ಪುಸ್ತಕವನ್ನು ರಚಿಸಿಕೊಟ್ಟು ಅನುಗ್ರಹಿಸಿರುವ ರಾಯರಿಗೆ ಹೇಗೆ ಕೃತಜ್ಞತೆ ಸಲ್ಲಿಸುವುದು? ನನಗೆ ತಿಳಿದಿರುವುದೆಲ್ಲ ತಲೆಬಾಗಿ ನಮಿಸುವುದಷ್ಟೆ. ಅಭಿನವನನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಸುವ ಈ ಪುಸ್ತಕಕ್ಕೆ ಹೊಂದಿಕೊಂಡಂತೆ ಇನ್ನೂ ಎರಡು ಕೃತಿಗಳನ್ನು 'ಅಭಿಜ್ಞಾನ' ಹೊರತರಲಿದೆ. ಈ ಎರಡು ಗ್ರಂಥಗಳನ್ನೂ ರಚಿಸಿಕೊಡಲು ಒಪ್ಪಿರುವ ರಾಯರಿಗೆ ಸಾರಸ್ವತಪ್ರಪಂಚವು ಎಂದೆಂದಿಗೂ ಋಣಿಯಾಗಿರುವುದು.

ಅಭಿನವಗುಪ್ತನ ದರ್ಶನವನ್ನೂ ಕೊಡುಗೆಯನ್ನೂ ಸಮಗ್ರವಾಗಿ ಅಧ್ಯಯನ ಮಾಡಿರುವವರ ಸಂಖ್ಯೆಯೇ ಕಡಮೆಯೆನ್ನಬಹುದು. ಇಂಥ ವಿರಳರ ಪಂಕ್ತಿಯಲ್ಲಿರುವವರಲ್ಲಿ ಪ್ರೊ. ಸಾ. ಕೃ. ರಾಮಚಂದ್ರರಾಯರೂ ಒಬ್ಬರು. ಇದುವರೆಗೂ ಅಭಿನವನನ್ನು ಕುರಿತಂತೆ ನಡೆದಿರುವ ವಿಶ್ಲೇಷಣೆ-ಅಧ್ಯಯನಗಳಲ್ಲಿ ಹಲವು ಮಿತಿಗಳಿರುವುದನ್ನು ವಿದ್ವಾಂಸರೇ ಒಪ್ಪಿಕೊಂಡಿದ್ದಾರೆ. ಅಭಿನವನಂಥ ಮಹಾಪ್ರತಿಭಾಶಾಲಿಯನ್ನು ಪೂರ್ಣವಾಗಿ ಅರ್ಥೈಸಿಕೊಳ್ಳಲು ಮತ್ತೊಬ್ಬ ಸಮಾನಪ್ರತಿಭೆಯ ಋಷಿಯೊಬ್ಬನಿಗಷ್ಟೆ ಸಾಧ್ಯವಾದೀತು. ಅಭಿನವನನ್ನು ನೋಡುವ ದೃಷ್ಟಿಯು ವಿಶಾಲವಾಗಲಿ, ಅವನ ಬಗ್ಗೆ ಅಧ್ಯಯನಗಳು ತೀವ್ರವಾಗಲಿ, ಜಗತ್ತಿನಲ್ಲಿ ಅರಿವಿನ ವಿಕಾಸ ನಡೆಯಲಿ ಎಂಬುದು ಈ ಪ್ರಕಟನೆಯ ಹಿನ್ನೆಲೆಯಲ್ಲಿರುವ ಆಶಯ.

ಅಭಿನವನನ್ನು ಕುರಿತು ಇಲ್ಲಿ ಮೂಡಿಕೊಂಡಿರುವ 'ಅಭಿಜ್ಞಾನದ ಮಾತು'ಗಳಿಗೆ ಆಧಾರವಾಗಿರುವುದು ಹಲವರು ಗುರುಗಳ ಕಾಣ್ಕೆ. ನೇರವಾಗಿಯೇ ಅಭಿನವದರ್ಶನವನ್ನು ಕಾಣಿಸುತ್ತಿರುವ ಆಚಾರ್ಯ ರಾಮಚಂದ್ರರಾಯರು ಇದರಲ್ಲಿ ಪ್ರಧಾನರು. ಹಲವಾರು ಗ್ರಂಥಗಳು[6] ನೆರವನ್ನಿತ್ತು ಅರಿವಿನ ವಿಕಾಸಕ್ಕೆ ಕಾರಣವಾಗಿವೆ. ಈ ಕೃತಿಗಳೂ ಕೂಡ ನನಗೆ ಗುರುಸಮಾನವಾದುವೇ ಹೌದು. ಹೀಗಾಗಿ ಇಲ್ಲಿಯ ನುಡಿಗಳು ಅಭಿನವನ ಬಗ್ಗೆ ನಿಮ್ಮಲ್ಲೊಂದು ಕುತೂಹಲವನ್ನಾಗಲೀ ಗೌರವಬುದ್ಧಿಯನ್ನಾಗಲೀ ನಿರ್ಮಿಸಿದರೆ, ಇದರ ಶ್ರೇಯಸ್ಸು ನನ್ನ ಈ ಎಲ್ಲ ಗುರುಗಳಿಗೇ ಸೇರತಕ್ಕದ್ದು; ಅವನ ಬಗ್ಗೆ ಅಸಮಾಧಾನವೋ ಗೊಂದಲವೋ ತೋರಿಕೊಂಡರೆ ಇದಕ್ಕೆ ಕಾರಣ ನನ್ನ ಮಿತಿಗಳೇ ಸರಿ. ಋಷಿಗಳ

6. ಈ ಬರವಣಿಗೆಯಲ್ಲಿ ಉಪಕಾರ ಪಡೆದಿರುವ ಗ್ರಂಥಗಳಲ್ಲಿ ಕೆಲವು—

1) *ಅಭಿನವಗುಪ್ತ*— ಪಾದೆಕಲ್ಲು ನರಸಿಂಹಭಟ್ಟ, 1998; 2) *ಅಭಿನವಗುಪ್ತ*— ಜಿ. ಟಿ. ದೇಶಪಾಂಡೆ (ಅನು: ಎನ್. ಬಾಲಸುಬ್ರಹ್ಮಣ್ಯ), 2000; 3) *ಭಾರತೀಯಕಾವ್ಯಮೀಮಾಂಸೆ*— ತೀ. ನಂ. ಶ್ರೀಕಂಠಯ್ಯ, 1973; 4) *ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ*— ಕೆ. ಕೃಷ್ಣಮೂರ್ತಿ, 1990; 5) *ಭರತಮುನಿಯ*

(ಮುಂದಿನ ಪುಟಕ್ಕೆ...,)

ಮಾತು-ಕೃತಿಗಳು ವಿಶ್ವದ ಸಾಮರಸ್ಯವನ್ನು ಕದಡುವುದಿಲ್ಲವೆಂಬುದು ನನ್ನ ಅಚಲವಾದ ನಂಬಿಕೆ.

ಅಭಿನವಗುಪ್ತ ನಮಗೆ ಪ್ರಿಯವಾಗುವುದಾದರೂ ಏಕೆ? ಈ ಪ್ರಶ್ನೆಯನ್ನು ಹಲವು ಬಾರಿ ಎದುರಿಸಿದ್ದೇನೆ. ನಮ್ಮ ಮುಂದಿರುವ ವ್ಯಕ್ತಿ-ವಿಷಯಗಳನ್ನು ಕುರಿತು ಔದಾರ್ಯದಿಂದೇನೂ ನಮ್ಮಲ್ಲಿ ಪ್ರೀತಿಭಾವ ಉದಯಿಸದು; ನಮ್ಮ ಒಳಗಣ ನೆಲೆಯಲ್ಲಿ, ಅದೂ ತನ್ನನ್ನು ತಾನೇ ಕೇಂದ್ರವಾಗಿಸಿಕೊಂಡು ಮೂಡಿಕೊಳ್ಳುವ ಬಯಕೆಗಳ ತರಂಗಗಳಿಂದಲೇ ರಂಗುರಂಗಿನ ನಮ್ಮ ಕಾಮನೆಗಳೂ ಅಭಿವ್ಯಕ್ತವಾಗುತ್ತವೆಯಷ್ಟೆ.[7] ಆದುದರಿಂದ ಅಭಿನವಗುಪ್ತನಲ್ಲಿರುವ ವಿವರಗಳೆಂದು ನಾವು ಸಂತಸಪಡುವ ಸಂಗತಿಗಳು ದಿಟವಾಗಿಯೂ ನಮ್ಮ ಅಂತರಂಗದ ಪದರಗಳ ಚರ್ವಣವೆಂದೇ ನನ್ನ ಎಣಿಕೆ. ಇವು ನಮ್ಮನ್ನು ನಮಗೆ ಪರಿಚಯಿಸುವುದರಿಂದ ಅವುಗಳಲ್ಲಿ ನಮ್ಮ ಪ್ರೀತಿ.[8]

ವ್ಯಕ್ತಿಯೊಬ್ಬ ತತ್ತ್ವವೊಂದಕ್ಕೆ ಎಷ್ಟರ ಮಟ್ಟಿಗೆ ತನ್ನನ್ನು ತಾನು ಎರಕವಾಗಿಸಿಕೊಂಡಿದ್ದಾನೆ ಎಂಬುದರಿಂದ ಅವನು ಆ ತತ್ತ್ವದ ಮೂರ್ತರೂಪವಾಗಿ ಬೆಳಗಬಲ್ಲ.[9] ಈ ಹಿನ್ನೆಲೆಯಲ್ಲಿ ಅಭಿನವನ ಮಾತುಗಳು—ಅದು ಅವನ ಕಾವ್ಯಮೀಮಾಂಸೆಯಿರಬಹುದು ಅಥವಾ ದಾರ್ಶನಿಕಪ್ರತಿಪಾದನೆಯಿರಬಹುದು—ಅನುಭವದ ಎರಕದಲ್ಲಿ ಸಿದ್ಧವಾದಂಥವು ಎಂಬುದು ಮನದಟ್ಟಾಗದಿರದು. ತನ್ನ ನಿರೂಪಣೆಗೆ ತಾನೇ ಅಳತೆಗೋಲಾಗಿ ನಿಂತ ಸಿದ್ಧಪುರುಷ ಅಭಿನವ. ಆದುದರಿಂದಲೇ ಅವನ ಅನುಭವದ ಬೆಳಕು ಅವನನ್ನು ಮಾತ್ರವೇ ಬೆಳಗಿಸಲಿಲ್ಲ,

---

ನಾಟ್ಯಶಾಸ್ತ್ರ—ಸಾ. ಕೃ. ರಾಮಚಂದ್ರರಾವ್, 2000; 6) *Abhinavagupta—An Historical and Philosophical Study*—K.C. Pandey, 1935; 7) *Comparative Aesthetics*, Vol. I & II—K.C. Pandey, 1950 & 1956; 8) *Paratrisika-Vivarana*—Jaidev Singh, 2002; 9) *Sivasutras*—Jaidev Singh, 2000, 10) *The Aphorisms of Siva*; Mark S.G. Dyczkowski, 1992; 11) *Santarasa and Abhinavagupta's Philosophy of Aesthetics*—J.L. Masson, M.V. Patavardhan, 1985; 12) *The Doctrine of Vibration*—Mark S.G. Dyczkowski, 2000; 13) *Natyashastram*—Parasanatha Dwivedi, (3 vols), 1996; 14) *Tantrasarah*—Paramahamsa Misra, 2002; 15) *Bhaskari*—Ed: K.P. Subramnia Iyer, K.C. Pandey (3 vols), 1998; 16) *The Isvarapratyabhijna-Vivriti-Vimarsini*—Ed: Pandit Madhusudan Kaul Shastri (3 vols), 1987, 17) *Tantraloka*—KSS 18) ಧ್ವನ್ಯಾಲೋಕಮು —ಪುಲ್ಲೆಲ ಶ್ರೀರಾಮಚಂದ್ರುಡು, 1998, 19) ಭರತಮುನಿ ವಿರಚಿತ ನಾಟ್ಯಶಾಸ್ತ್ರ —ಕೆ. ಎಲ್. ನರಸಿಂಹಶಾಸ್ತ್ರೀ, 1977

7 ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ—ಬೃಹದಾರಣ್ಯಕೋಪನಿಷತ್ತು, *4.5.6*

8 Love is the recognition of identity—Ananda K. Coomaraswamy, *Dance of Shiva*, 1957

9\. ರಾಮನನ್ನು 'ವಿಗ್ರಹವಾನ್ ಧರ್ಮಃ' ಎಂದು ವಾಲ್ಮೀಕಿ ಒಕ್ಕಣಿಸಿರುವ ಸ್ವಾರಸ್ಯವನ್ನು ಇಲ್ಲಿ ಮೆಲುಕು ಹಾಕಬಹುದು.

ನಮ್ಮನ್ನೂ ಬೆಳಗಿಸಬಲ್ಲದು; ಅದರ ಕಾವು ಅವನಿಗೆ ಮಾತ್ರವೇ ಭೈರವಾವೇಶವನ್ನು ಒದಗಿಸಲಿಲ್ಲ, ನಮಗೂ ಅಂಥದೊಂದು ಆವೇಶಸ್ಥಿತಿಯನ್ನು ಕಲ್ಪಿಸಬಲ್ಲದು. ಅನುಭವದ ನೆಲೆಯಲ್ಲಿ ಏರ್ಪಡುವ ಇಂಥ ತಾದಾತ್ಮ್ಯವೇ ಅಭಿನವನನ್ನು ಕುರಿತ ಅಧ್ಯಯನದ ಸಾರ್ಥಕ್ಯ. ಇದೇ ಅಲ್ಲವೆ ದರ್ಶನವೊಂದರ ಜೀವಂತಿಕೆ ಹಾಗೂ ಅನಿವಾರ್ಯತೆಗಳ ಸಂಕೇತ!

ಅಭಿನವನನ್ನು ನಮ್ಮಲ್ಲಿಯೇ ಒಬ್ಬನನ್ನಾಗಿಸಿಕೊಳ್ಳಬಲ್ಲಂಥ ಸಾಂಗತ್ಯವನ್ನು ಅವನ ನುಡಿಗಳಲ್ಲಿ ನಾವು ಕಾಣಬಹುದು. ಪಯಣದಲ್ಲಿ ನಮಗಿಂತ ಮುಂದಿರುವವರಿಗೆ ನಾವು ಬೇಕಿರುವುದಿಲ್ಲ, ನಮಗಿಂತ ಹಿಂದಿರುವವರು ನಮಗೇ ಬೇಕಿರುವುದಿಲ್ಲ; ನಮ್ಮ ಜೊತೆ-ಜೊತೆಯಲ್ಲಿ ಹೆಜ್ಜೆಗಳನ್ನು ಹಾಕುವವರಿಂದಷ್ಟೆ ನಮಗೆ ಪ್ರಯಾಣದ ಪ್ರಯೋಜನ ಒದಗೀತು. ಇಂಥವರಷ್ಟೆ ನಮ್ಮ ಪಾಲಿಗೆ ಆಪ್ತರು, ಆತ್ಮೀಯರು ಎನಿಸಬಲ್ಲರು. ಹೀಗೆ ನಮ್ಮ ಜೊತೆಗಾರನಾಗಬಲ್ಲವನು ಅಭಿನವ. ಅಭಿನವನು ಭಿನ್ನ-ವಿಭಿನ್ನ ಶ್ರುತಿಗಳಲ್ಲಿ, ಸ್ವರಗಳಲ್ಲಿ ಮೂಡಿಸುವ ಗಾನವೈವಿಧ್ಯವು ನಮ್ಮ ಅಂತರಂಗದ ಮೌನರಾಗದೊಂದಿಗೆ ಸಾಮರಸ್ಯವನ್ನು ಸಾಧಿಸಿಕೊಂಡು ಅವನ ಗಾನವನ್ನೇ ನಮ್ಮದನ್ನಾಗಿಸುವುದು. ಭಾವುಕನಾಗಿ, ಕವಿಯಾಗಿ, ಶಾಸ್ತ್ರಕಾರನಾಗಿ, ವ್ಯಾಖ್ಯಾನಕಾರನಾಗಿ, ಸಾಧಕನಾಗಿ, ಗುರುವಾಗಿ, ಶಿಷ್ಯನಾಗಿ, ಅನುಭಾವಿಯಾಗಿ, ತಾಂತ್ರಿಕನಾಗಿ, ಸಿದ್ಧನಾಗಿ, ದಾರ್ಶನಿಕನಾಗಿ ಅವನು ಬೇರೆ ಬೇರೆ ಸ್ತರಗಳಲ್ಲಿ ನಿಂತು ಕಾಣಿಸುವ ಕಾಣ್ಕೆಯಿಂದ ನಾವು ಪಡೆಯಬಹುದಾದ ಫಲಗಳು ಹತ್ತಾರು; ಆದರೆ ಅವುಗಳ ಸವಿ ಮಾತ್ರ ಒಂದೇ. ಇರುವ ಒಂದೇ ಗೌರೀಶಂಕರಶಿಖರವನ್ನು ಹತ್ತುಹಲವು ದಿಕ್ಕುಗಳಿಂದ ನೇರವಾಗಿ ಕಂಡು, ಅನಂತರ ತನ್ನ ಪ್ರತಿಭೆಯ ಕುಂಚದಿಂದ ಅದರ ಸ್ವಾರಸ್ಯವನ್ನು ಕಾಣಿಸಿದ ಕಲಾಯೋಗಿ ಅಭಿನವಗುಪ್ತ.

ಅಭಿನವಗುಪ್ತ ತನ್ನ ಮಹಾನ್ವೇಷಣೆಯಲ್ಲಿ ಹಿಡಿದ ಮಾರ್ಗಗಳು ಸ್ವಾರಸ್ಯಕರವಾದುವು. ಅಮೂರ್ತವಾದ ಶಬ್ದದ ಪರಾಶಕ್ತಿಯಿಂದ ವಿಕಾಸವಾಗುವ ಮೂರ್ತರೂಪದ ಕಾವ್ಯಪ್ರಪಂಚದಲ್ಲಿ ವಿಹರಿಸಿ ಶುದ್ಧಸ್ಥಿತಿಯ ರಸಾನುಭವದಲ್ಲಿ ಮುಳುಗಿ, ತನ್ನ ಯಾತ್ರೆಯ ಅಂತಿಮ ಲಕ್ಷ್ಯದ ಮಾದರಿಯನ್ನು ಸಿದ್ಧಿಸಿಕೊಂಡು ಪಯಣಕ್ಕೆ ಅವನು ಸಜ್ಜುಗೊಂಡಿದ್ದಿರಬಹುದು. ಅನಂತರ ಹೊರಗೆ ಎದುರಾದ ಪ್ರತಿಯೊಂದು ತತ್ತ್ವದಲ್ಲೂ ಶಿವನ ಕುಣಿತವನ್ನು ಕಂಡು ನಲಿದು, ಇವೆಲ್ಲವನ್ನೂ ಮೀರಿದ ಶಿವನ ಅನುತ್ತರರೂಪದಲ್ಲಿ ವಿರಮಿಸಿದ್ದಿರಬಹುದು. ಗುರಿಯನ್ನು ಮುಟ್ಟುವ ತಂತ್ರವಾಗಿ ಕುಲಕಲಾಪಗಳಲ್ಲಿ ಕರಣಗಳನ್ನು ತೊಡಗಿಸಿದ್ದಿರಬೇಕು. ಇಲ್ಲೂ ಶಿವ-ಶಕ್ತಿಯರ ಅಭೇದಾನುಭವದ ಫಲವಾಗಿ ಒದಗಿದ ಶಿವತಾದಾತ್ಮ್ಯದಿಂದ ಆತ್ಮಸಂಯಮವನ್ನು ಸಿದ್ಧಿಸಿಕೊಂಡು ಪುಷ್ಟನಾಗಿದ್ದಿರಬಹುದು. ಕೊನೆಗೆ, ದಾರಿಯಲ್ಲದ ದಾರಿಯೊಂದರಲ್ಲಿ ಸಾಮರಸ್ಯದಿಂದ ಮುನ್ನಡೆದು ತನ್ನ ನೆಲೆಯನ್ನು ತಲಪಿ ಶಿವನಾಗಿ ಕಂಗೊಳಿಸಿದವನು ಅಭಿನವ. ಅವನ ಧ್ವನ್ಯಾಲೋಕಲೋಚನ, ಅಭಿನವಭಾರತೀ, ತಂತ್ರಾಲೋಕ, ತಂತ್ರಸಾರ, ಪರಾತ್ರೀಶಿಕಾವಿವರಣ, ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ,

ಈಶ್ವರಪ್ರತ್ಯಭಿಜ್ಞಾವಿವೃತಿವಿಮರ್ಶಿನೀ ಮುಂತಾದವೆಲ್ಲವೂ ಆತ್ಮಮಂದಿರದಲ್ಲಿ ನೆಲಸಿರುವ ಶಿವನನ್ನು ತಲಪಲು ಆರಾಧಕನೊಬ್ಬ ಬಳಸಿ ಬಂದ ಬೆಳಕಿನ ಬಾಗಿಲುಗಳಷ್ಟೆ.

ಸಂಸ್ಕೃತಲಕ್ಷಣಸರಸ್ವತಿಯ ಎರಡು ಕಣ್ಣುಗಳಂತಿರುವ ಭರತನ ನಾಟ್ಯಶಾಸ್ತ್ರ ಮತ್ತು ಆನಂದವರ್ಧನನ ಧ್ವನ್ಯಾಲೋಕ[10]—ಈ ಎರಡು ಮಹಾಕೃತಿಗಳಿಗೆ ತಾನು ಬರೆದಿರುವ ವ್ಯಾಖ್ಯಾನಗಳಿಂದಲೇ ಅಭಿನವಗುಪ್ತ ಇಂದು ಹೆಚ್ಚು ಪರಿಚಿತನಾಗಿರುವುದು; ಮೊದಲನೆಯದು ಅಭಿನವಭಾರತೀ, ಎರಡನೆಯದು ಧ್ವನ್ಯಾಲೋಕಲೋಚನ.

ನಾಟ್ಯ, ಕಾವ್ಯ ಮೊದಲಾದ ಸಮಸ್ತಕಲೆಗಳ ಹೃದಯವೂ ಒಂದೇ ಎಂಬುದನ್ನು ಸ್ಥಾಪಿಸಲು ಧ್ವನಿಪ್ರಸ್ಥಾನತತ್ತ್ವವನ್ನು ಜಗತ್ತಿಗೆ ಮೊದಲು ಸಾರಿದ ಕೃತಿ 'ಧ್ವನ್ಯಾಲೋಕ'.[11] ಧ್ವನಿಯೇ ಕಾವ್ಯದ ಆತ್ಮ (ಕಾವ್ಯಸ್ಯಾತ್ಮಾ ಧ್ವನಿಃ) ಎಂದು ಧ್ವನ್ಯಾಲೋಕವೇನೋ ಘೋಷಿಸಿತು. ಆದರೆ ಅಭಿನವನಿಗೆ ಇಷ್ಟರಿಂದಲೇ ತೃಪ್ತಿಯಾಗಲಿಲ್ಲವೆನಿಸುತ್ತದೆ. ಶಬ್ದಾರ್ಥಗಳಂಥ ಹೊರಗಣ ವಿವರಗಳ ಆಲಂಬನದ ಮೇಲೆ ನಿಂತಿರುವ ವಸ್ತುಧ್ವನಿ-ಅಲಂಕಾರಧ್ವನಿಗಳು ದಿಟವಾಗಿ ಕಾವ್ಯದ ಆತ್ಮವಲ್ಲ; ಶುದ್ಧಾನುಭವದಲ್ಲಿ ನೆಲೆಕಾಣುವ ರಸವೇ ಕಾವ್ಯದ ಆತ್ಮ—ಎಂದು ಅವನು ತೀರ್ಮಾನ ಕೊಡುತ್ತಾನೆ.[12] ಸಂಸ್ಕೃತದ ಕಾವ್ಯನಾಟಕಮೀಮಾಂಸೆಯಲ್ಲಿ ರಸಪ್ರಾಶಸ್ತ್ಯವಾದವು ಕೇವಲ ಒಂದು ಪ್ರಸ್ಥಾನವಲ್ಲ; ಅದು ಎಲ್ಲ ಪ್ರಸ್ಥಾನಗಳ ಗಮ್ಯಸ್ಥಾನ. ಕಾವ್ಯವನ್ನು ಒಂದು ಗುಡಿಗೆ ಹೋಲಿಸಿದರೆ, ಅಲಂಕಾರಪ್ರಸ್ಥಾನದವರು ಅದರ ಹೊರಗೋಡೆಯನ್ನು ಸುತ್ತುವುದರಲ್ಲೇ ಕಾಲ ಕಳೆದರು; ರಸವನ್ನು ಕೂಡ ಆ ಹೊರಗೋಡೆಯ ಮೇಲೆ ಕೆತ್ತಿರುವ ಅನೇಕ ವಿಗ್ರಹಗಳಲ್ಲಿ ಒಂದಾಗಿ ಅವರು ಭಾವಿಸಿದ್ದರು. ಈ ಒಂದು ವಿಗ್ರಹವು ಮುಕ್ಕಾದರೂ ಮುರಿದು ಬಿದ್ದರೂ ಗುಡಿಗೆ ಯಾವ ಭಂಗವೂ ತಟ್ಟುವಂತೆ ಅವರಿಗೆ ತೋರಲಿಲ್ಲ. ರೀತಿಪ್ರಸ್ಥಾನದಲ್ಲಿ ರಸವು ಗುಡಿಯೊಳಕ್ಕೆ ಬಂದಿತು; ಕಾವ್ಯಕ್ಕೆ ನಿಯತವಾದ ಅಂಗವಾಯಿತು; ಆದರೆ ಪ್ರಾಮುಖ್ಯವನ್ನು ಇನ್ನೂ ಪಡೆಯಲಿಲ್ಲ. ಅದನ್ನು ಇಲ್ಲಿ ಗರ್ಭಗುಡಿಯ ದ್ವಾರಪಾಲಕನಿಗೆ ಹೋಲಿಸಬಹುದೋ ಏನೋ. ಧ್ವನಿಕಾರನು ಬಂದು ರಸದ ಮಹತ್ತ್ವವನ್ನರಿತು ಒಳಪೀಠದ ಮೇಲೆ ನಿಲ್ಲಿಸಿದಾಗ ಇದೇ ಕಾವ್ಯಮಂದಿರದ ಅಧಿದೈವವೆಂದು ಗೊತ್ತಾಯಿತು. ಆದರೂ, ಈ ವಿಗ್ರಹಕ್ಕೆ ಪ್ರಾಣಪ್ರತಿಷ್ಠಾಪನೆ ಮಾಡಿದವನು ಅಭಿನವಗುಪ್ತ.[13]

---

10. ಭಾರತೀಯಕಾವ್ಯಮೀಮಾಂಸೆ, ಪು. 53
11. ಅದೇ, ಪು. 35
12. "ರಸ ಏವ ವಸ್ತುತಃ ಆತ್ಮಾ; ವಸ್ತ್ವಲಂಕಾರಧ್ವನೀ ತು ಸರ್ವಥಾ ರಸಂ ಪ್ರತಿ ಪರ್ಯವಸ್ಯೇತೇ ಇತಿ ವಾಚ್ಯಾದುತ್ಕೃಷ್ಟೌ ತಾವಿತ್ಯಭಿಪ್ರಾಯೇಣ ಧ್ವನಿಃ ಕಾವ್ಯಸ್ಯಾತ್ಮಾ ಇತಿ ಸಾಮಾನ್ಯೇನೋಕ್ತಂ"
—ಧ್ವನ್ಯಾಲೋಕಲೋಚನ, ಮೊದಲನೆಯ ಉದ್ಯೋತ ಐದನೆಯ ಕಾರಿಕೆಯ ವ್ಯಾಖ್ಯಾನ.
13. ಭಾರತೀಯಕಾವ್ಯಮೀಮಾಂಸೆ, ಪು. 93
(ಅಲಂಕಾರಪ್ರಸ್ಥಾನವನ್ನೋ ಮತ್ತೊಂದನ್ನೋ ಆಕ್ಷೇಪಿಸುವುದು ನಮ್ಮ ಸದ್ಯದ ಉದ್ದೇಶವಲ್ಲ. ರಸತತ್ತ್ವವೇ ಭಾರತೀಯಕಾವ್ಯಮೀಮಾಂಸೆಯ ಒಳತಿರುಳೆಂದೂ, ಈ ತತ್ತ್ವವನ್ನು ಜ್ಞಾಪಕಕ್ಕೆ ಎತ್ತಿಹಿಡಿದ ಶ್ರೇಯಸ್ಸು ಆನಂದವರ್ಧನನಿಗೆ, ಅದಕ್ಕೂ ಪ್ರಧಾನವಾಗಿ ಅಭಿನವಗುಪ್ತನಿಗೆ ಸಲ್ಲತಕ್ಕದ್ದೆಂದೂ ಇಲ್ಲಿಯ ಧ್ವನಿ.

(ಮುಂದಿನ ಪುಟಕ್ಕೆ...,

ಯಾವುದೇ ಒಂದು ವಿದ್ಯೆ ಅಥವಾ ಶಾಸ್ತ್ರ ತನ್ನ ಪರಮಗುರಿಯನ್ನೂ ಸಾರ್ಥಕ್ಯವನ್ನೂ ಕಾಣುವುದು ಅದು ದರ್ಶನದ ಮಟ್ಟಕ್ಕೆ ಏರಿದಾಗಲೇ; ಇಲ್ಲಿಯೇ ಅದರ ಸಾರ್ವತ್ರಿಕ ಮೌಲ್ಯಗಳೂ ಸಾರ್ವಕಾಲಿಕವಾದ ಸ್ಪಂದನೆಗಳೂ ಸ್ಥಾಪಿತವಾಗುವುದು; ಮಾತ್ರವಲ್ಲ, ಅದು ವೈಶ್ವಿಕಸ್ತರದಲ್ಲಿ ಸಾಮರಸ್ಯವನ್ನು ಸಿದ್ಧಿಸಿಕೊಳ್ಳುವುದೇ ದರ್ಶನದ ಈ ನೆಲೆಯಲ್ಲಿ. ತಾನು ಆಯ್ದುಕೊಳ್ಳುವ ಪ್ರತಿವಿಷಯವನ್ನೂ ಒಂದು ದರ್ಶನವನ್ನಾಗಿ ಕಾಣಿಸುವುದು ಅಭಿನವಗುಪ್ತನ ವಿಶೇಷತೆ; ಇದರಲ್ಲಿ ಅವನದು ಪಳಗಿದ ಕೈಯೆನ್ನಿ. ಇಡಿಯ ವಿಶ್ವವನ್ನೇ ಶಿವಮಯವಾಗಿ ಕಂಡವನಿಗೆ ಅದರ ಪದರಗಳನ್ನು ಶಿವನಾಗಿ ಕಾಣಲು ಯಾವ ಸಂಕೋಚವಿದ್ದೀತು? ದಿಟವಾಗಿ ನೋಡಿದರೆ, ಜಗತ್ತಿನ ಪ್ರತಿ ವಿವರವನ್ನೂ ಶಿವನ ಶಕ್ತಿ ಎಂದು ಸ್ಥಾಪಿಸುವುದೇ ಅಭಿನವನ ವ್ರತ ಎಂದರೂ ತಪ್ಪಾಗದು. ಪ್ರಕಾಶ-ವಿಮರ್ಶದ ಚಮತ್ಕಾರವನ್ನೂ ಶಿವ-ಶಕ್ತಿಯ ಮಹಾರ್ಥವನ್ನೂ ಸಂಕೋಚ-ವಿಕಾಸನಿಯಮದ ಸಾಮರಸ್ಯವನ್ನೂ ಕಂಡುಕೊಂಡ ಅಭಿನವನಿಗೆ

(ಹಿಂದಿನ ಪುಟದಿಂದ)

ಕಾವ್ಯದ ಶರೀರವೇ ಮಾತು ಎಂಬುದನ್ನು ಯಾರೂ ನಿರಾಕರಿಸಲಾರರು; ಹೀಗೆಯೇ, ರಸವೇ ಕಾವ್ಯದ ಆತ್ಮ ಎಂಬುದನ್ನು ಕೂಡ. ಶಬ್ದಾರ್ಥಗಳನ್ನು ಕೂಡಿಕೊಂಡೇ ಕಾವ್ಯ. ಕಾವ್ಯದಲ್ಲಿ ಶಬ್ದದ ಅನಿವಾರ್ಯತೆಯನ್ನು ನಿರಾಕರಿಸಲಾದೀತೆ? ಶರೀರದ ಸೊಬಗನ್ನು ಮೆರೆಯಿಸುವ ಅಲಂಕಾರಗಳನ್ನು ಉಪೇಕ್ಷಿಸಲಾದೀತೆ? ಆದರೆ ಶಬ್ದ-ಅರ್ಥ-ಅಲಂಕಾರಗಳೆಲ್ಲವೂ ರಸಮಂದಿರಕ್ಕೆ ಅಭಿಮುಖವಾಗಿ ನಿಂತ ಸೋಪಾನಗಳಾಗಿರಬೇಕೆಂಬುದು ಕಾವ್ಯಾನುಭವದ ದೃಷ್ಟಿಯಿಂದ ಅಪೇಕ್ಷಣೀಯ; ಇದೇ ಔಚಿತ್ಯ ಕೂಡ. ದೇಹಾಭಿಮಾನವು ಆತ್ಮನಿರಾಕರಣೆಯಲ್ಲಿ ಪರ್ಯವಸಿಸಬಾರದಷ್ಟೆ. ಧ್ವನಿಕಾರನೇ ಅಲಂಕಾರಗಳನ್ನು ನಿರಾಕರಿಸಿಲ್ಲ ಎಂಬುದನ್ನೂ ನಾವು ಮರೆಯುವಂತಿಲ್ಲ; ಅದಕ್ಕೂ ಯುಕ್ತವಾದ ಸ್ಥಾನವನ್ನೇ ಕಲ್ಪಿಸಿದ್ದಾನೆ; ಜೊತೆಗೆ ಎಚ್ಚರಿಕೆಗಳನ್ನೂ ಕೊಟ್ಟಿದ್ದಾನೆ:

ವಿವಕ್ಷಾ ತತ್ಪರತ್ವೇನ ನಾಂಗಿತ್ವೇನ ಕದಾಚನ ।
ಕಾಲೇ ಚ ಗ್ರಹಣತ್ಯಾಗೌ ನಾತಿನಿರ್ವಹಣೈಷಿತಾ ॥
ನಿರ್ವ್ಯೂಢಾವಪಿ ಚಾಂಗತ್ವೇ ಯತ್ನೇನ ಪ್ರತ್ಯವೇಕ್ಷಣಂ ।
ರೂಪಕಾದೇರಲಂಕಾರವರ್ಗಸ್ಯಾಂಗತ್ವಸಾಧನಂ ॥ II. 18-19

ತಾತ್ಪರ್ಯ: ರಸಕ್ಕೆ ಪೋಷಕವಾಗಿರುವಂತೆಯೇ ಅಲಂಕಾರವನ್ನು ರಚಿಸಬೇಕು; ತಾನೇ ಪ್ರಧಾನವಾಗುವಂತೆ ಕಲ್ಪಿಸಬಾರದು. ಸಮಯವರಿತು ತರಬೇಕು, ಸಮಯವರಿತು ಬಿಡಬೇಕು. ಅದನ್ನು ತಂದಾಗಲೂ ಅತಿಯಾಗಿ ಬೆಳೆಸಬಾರದು. ಒಂದು ವೇಳೆ ವಿಸ್ತರಿಸಿದರೂ ರಸಕ್ಕೆ ಅಂಗವಾಗಿಯೇ ನಿಲ್ಲುವಂತೆ ನೋಡಿಕೊಳ್ಳಬೇಕು.

ಅಲಂಕಾರಪ್ರಯೋಗದ ವಿಷಯದಲ್ಲಿ ಧ್ವನಿಕಾರನ ಉಪದೇಶವೂ ಇಲ್ಲಿ ಉಲ್ಲೇಖಾರ್ಹ; ನಮ್ಮ ಒಲವು ಇತ್ತ ಕಡೆಯೇ ಹೌದೆನ್ನಿ:

ರಸಾಕ್ಷಿಪ್ತತಯಾ ಯಸ್ಯ ಬಂಧಃ ಶಕ್ಯಕ್ರಿಯೋ ಭವೇತ್ ।
ಅಪೃಥಗ್ಯತ್ನನಿರ್ವರ್ತ್ಯಃ ಸೋಽಲಂಕಾರೋ ಧ್ವನೌ ಮತಃ ॥ II. 16

ತಾತ್ಪರ್ಯ: ಕವಿಯು ರಸಮಗ್ನವಾಗಿರುವ ಸ್ಥಿತಿಯಲ್ಲಿಯೇ ಯಾವುದರ ರಚನೆ ಶಕ್ಯವೋ, ಯಾವುದನ್ನು ನಿರ್ಮಿಸಲು ಪ್ರತ್ಯೇಕವಾದ ಪ್ರಯತ್ನ ಬೇಕಿಲ್ಲವೋ, ಅದೇ ಧ್ವನಿಕಾವ್ಯದಲ್ಲಿ ಅಲಂಕಾರವೆನಿಸಿಕೊಳ್ಳುವುದು.

ಈ ನೆಲೆಯಲ್ಲಿ ಸೃಷ್ಟಿಯಾದ ಅಲಂಕಾರಗಳು ಯಾರಿಗೆ ತಾನೆ ಬೇಡವೆನಿಸೀತು!?)

ಈ ವಿವರಗಳನ್ನು ವರ್ಣಿಸುವುದೆಂದರೂ ಆರಾಧಿಸುವುದೆಂದರೂ ಉತ್ಸಾಹ. ಅವನು ಚಂದ್ರನನ್ನು ಕಂಡವನಷ್ಟೆ ಅಲ್ಲ, ಬೆಳುದಿಂಗಳ ಸವಿಯನ್ನೂ ಉಂಡವನು.

ಹೀಗಾಗಿ, ಕಾವ್ಯಸೃಷ್ಟಿಯಲ್ಲಿ ಅಡಗಿರುವ ಶಿವ-ಶಕ್ತಿಯ ತತ್ತ್ವವನ್ನು ಗುರುತಿಸಿ ಆನಂದಿಸುವುದು ಅಭಿನವನಿಗೇನೂ ಕಷ್ಟವಾಗಲಿಲ್ಲ. ಅವನು 'ಲೋಚನ'ದಲ್ಲಿ 'ಧ್ವನ್ಯಾಲೋಕ'ದ ನಾಲ್ಕು ಉದ್ಯೋತಗಳ ಸಮಾಪನಶ್ಲೋಕಗಳಲ್ಲಿ ನಿರೂಪಿಸುವ ಕಾವ್ಯಸೃಷ್ಟಿಯ ತತ್ತ್ವ ಸ್ವಾರಸ್ಯವಾಗಿದೆ. ಇಲ್ಲಿ ಅವನು ವಾಕ್ಕಿನ ನಾಲ್ಕು ಹಂತಗಳನ್ನು—ಪರಾ, ಪಶ್ಯಂತೀ, ಮಧ್ಯಮಾ, ವೈಖರೀ—ವಿವರಿಸುವ ವ್ಯಾಜದಲ್ಲಿ ಶಿವ-ಶಕ್ತಿಯ ವಿಲಾಸವನ್ನು ಅದ್ಭುತವಾಗಿ ಕಂಡರಿಸಿ, ಅದಕ್ಕೆ ಮಣಿಯುತ್ತಾನೆ.[14] ಇದರ ಮತ್ತಷ್ಟು ಎಳೆಗಳನ್ನು ವಿಶದವಾಗಿ ತನ್ನ 'ಪರಾತ್ರೀಶಿಕಾವಿವರಣ'ದಲ್ಲಿ ಒದಗಿಸಿದ್ದಾನೆ.

ಹೀಗೆಯೇ, 'ಅಭಿನವಭಾರತಿ'ಯಲ್ಲೂ ದಾರ್ಶನಿಕತೆಯ ಹೊಳಹುಗಳನ್ನು ಧಾರಾಳವಾಗಿಯೇ ಚಿಮ್ಮಿಸಿದ್ದಾನೆ. ನಾಟ್ಯಶಾಸ್ತ್ರದ ಮೂವತ್ತಾರು ಅಧ್ಯಾಯಗಳನ್ನು ಶಿವನ ಮೂವತ್ತಾರು ತತ್ತ್ವಗಳನ್ನಾಗಿ ಕಂಡು ಅವನು ಧನ್ಯನಾಗಿದ್ದಾನೆ; ಮೂವತ್ತೇಳನೆಯದನ್ನಾಗಿ ಶಿವನ ಅನುತ್ತರತತ್ತ್ವವನ್ನು ಕಾಣಿಸಿರುವುದು ಅವನ ಕಾಣ್ಕೆಯ ವಿಶೇಷತೆ. ಅಭಿನವನು ಸಹಜವಾಗಿ ಸಿದ್ಧಿಸಿಕೊಂಡಿರುವ ಪ್ರಕಾಶ-ವಿಮರ್ಶಗಳ ಸಾಮರಸ್ಯಕ್ಕೊಂದು ಉದಾಹರಣೆಯಾಗಿ ಅಭಿನವಭಾರತಿಯ ಸ್ತುತಿಪದ್ಯವೊಂದನ್ನು ಇಲ್ಲಿ ನೋಡಬಹುದು—

ಸಂಸಾರನಾಟ್ಯನಿರ್ಮಾಣೇ ಯಾಽವಕಾಶವಿಧಾನತಃ ।
ಪೂರ್ವರಂಗಾಯತೇ ವ್ಯೋಮಮೂರ್ತಿಂ ತಾಂ ಶಾಂಕರೀಂ ನುಮಃ ॥

(ಪ್ರಪಂಚವೆಂಬ ನಾಟ್ಯನಿರ್ಮಾಣಕ್ಕೆ ಅವಕಾಶವನ್ನು ಒದಗಿಸುವ ಪೂರ್ವರಂಗದಂತಿರುವ ಶಿವನ ಆಕಾಶಸ್ವರೂಪಕ್ಕೆ ನಮಿಸುವೆನು.)

---

14. ಯದುನ್ಮೀಲನಶಕ್ತ್ಯೈವ ವಿಶ್ವಮುನ್ಮೀಲತಿ ಕ್ಷಣಾತ್ ।
ಸ್ವಾತ್ಮಾಯತನವಿಶ್ರಾಂತಾಂ ತಾಂ ವಂದೇ ಪ್ರತಿಭಾಂ ಪರಾಂ ॥ ೧ ॥

ಪ್ರಾಜ್ಯಂ ಪ್ರೋಲ್ಲಾಸಮಾತ್ರಂ ಸತ್‌ಭೇದೇನಾಸೂತ್ರ್ಯತೇ ಯಯಾ ।
ವಂದೇಽಭಿನವಗುಪ್ತೋಽಹಂ ಪಶ್ಯಂತೀಂ ತಾಮಿದಂ ಜಗತ್ ॥ ೨ ॥

ಆಸೂತ್ರಿತಾನಾಂ ಭೇದಾನಾಂ ಸ್ಫುಟತಾಪತ್ತಿದಾಯಿನೀಂ ।
ತ್ರಿಲೋಚನಪ್ರಿಯಾಂ ವಂದೇ ಮಧ್ಯಮಾಂ ಪರಮೇಶ್ವರೀಮ್ ॥ ೩ ॥

ಸ್ಫುಟೀಕೃತಾರ್ಥವೈಚಿತ್ರ್ಯಬಹಿಃಪ್ರಸರದಾಯಿನೀಂ ।
ತುರ್ಯಾಂ ಶಕ್ತಿಮಹಂ ವಂದೇ ಪ್ರತ್ಯಕ್ಷಾರ್ಥನಿದರ್ಶಿನೀಂ ॥ ೪ ॥

ಯಾರು ಎಚ್ಚೆತ್ತರೆ ಇಡಿಯ ವಿಶ್ವವೇ ಒಂದು ಕ್ಷಣದಲ್ಲಿ ಎಚ್ಚರಗೊಳ್ಳುವುದೋ, ಯಾರು ತನ್ನ ಆಯತನದಲ್ಲಿಯೇ ವಿರಮಿಸಿರುವಳೋ ಆ ಪರಾಪ್ರತಿಭೆಗೆ ನಮಸ್ಕಾರ (೧); ಭೇದಗಳು ಕಾಣಿಸಿಕೊಳ್ಳುತ್ತಿರುವಂತೆ ಯಾರು ಅವನ್ನು ಸೂತ್ರಬದ್ಧಗೊಳಿಸಿ ಈ ಜಗತ್ತನ್ನು ನೋಡುತ್ತಾಳೆಯೋ ಅವಳಿಗೆ ಅಭಿನವಗುಪ್ತನು ನಮಸ್ಕರಿಸುತ್ತಾನೆ (೨); ಸೂತ್ರಬದ್ಧವಾದ ಭೇದಗಳನ್ನು ಸ್ಫುಟಗೊಳಿಸುವ ತ್ರಿಲೋಚನಪ್ರಿಯೆಯಾದ ಆ ಪರಮೇಶ್ವರಿ ಮಧ್ಯಮೆಗೆ ನಮಸ್ಕಾರ (೩); ಸುಂದರಗೊಳಿಸಿದ ವಿವಿಧ ಅರ್ಥರೂಪಗಳನ್ನು ಹೊರಪ್ರಪಂಚಕ್ಕೆ ತನಗಿಂತ ಭಿನ್ನವಾಗಿರುವಂತೆ ತೋರಿಸುವ ಪ್ರತಿಭೆಯ ತುರೀಯಶಕ್ತಿಗೆ ನಮಸ್ಕಾರ (೪).

ಇಲ್ಲಿ ಸಂಸಾರ(ಜಗತ್ತು)ವನ್ನೇ ನಾಟ್ಯಕ್ಕೆ ಹೋಲಿಸಲಾಗಿದೆ. ಶಿವನೆಂಬ ಕವಿಯೇ ಈ ಸಂಸಾರವೆಂಬ ನಾಟ್ಯದ ರಚನೆಕಾರ; ನಾಟ್ಯದಲ್ಲಿ ಪೂರ್ವರಂಗವೆಂಬುದು ಪ್ರಥಮ ವಿಧಿಯಷ್ಟೆ; ಹೀಗೆಯೇ, ಶಿವನ ಆಕಾಶಸ್ವರೂಪವು ಇಡಿಯ ಸೃಷ್ಟಿಕಾರ್ಯದ ಪ್ರಥಮ ಪ್ರಕ್ರಿಯೆ. ಮಾತ್ರವಲ್ಲ, ಅನಂತರದ ಎಲ್ಲ ಸೃಷ್ಟಿಸರಣಿಗೆ ಅವಕಾಶ ಒದಗುವುದು ಈ ಆಕಾಶದಲ್ಲಿಯೇ ಎನ್ನುವುದೂ ಇಲ್ಲಿ ಗಮನಿಸಬೇಕಾಗಿರುವ ಸ್ವಾರಸ್ಯ.

ಈಗ ಮತ್ತೊಂದು ಸ್ತುತಿಪದ್ಯವನ್ನು ನೋಡೋಣ—

ಸ್ಥಾಯೀ ಪ್ರಬುದ್ಧಹೃದಯೇ ವ್ಯಭಿಚಾರಿಭೂತಃ
ಕಾಮಾಕುಲಾಸು ಜನತಾಸು ಮಹಾನುಭಾವಃ ।
ಅಂತರ್ವಿಭಾವವಿಷಯೋ ರಸಮಾತ್ರಮೂರ್ತಿಃ
ಶ್ರೀಮಾನ್ಪ್ರಸನ್ನಹೃದಯೋಽಸ್ತು ಮಮ ತ್ರಿಣೇತ್ರಃ ॥

(ಪ್ರಬುದ್ಧರ ಸ್ಥಾಯಿಯಾಗಿಯೂ ಕಾಮನೆಗಳಲ್ಲಿ ನಿರತರಾಗಿರುವ ಸಾಮಾನ್ಯಜನರ ವ್ಯಭಿಚಾರಭಾವದಲ್ಲಿಯೂ ನೆಲಸಿರುವ ಮಹಾನುಭಾವನೂ, ಅಂತರಂಗದ ಭಾವಗಳಿಗೆ ಕಾರಣನಾದ ಕೇವಲ ರಸಮೂರ್ತಿಯೂ ಆದ ತ್ರಿನೇತ್ರನು ಪ್ರಸನ್ನಹೃದಯಿಯಾಗಲಿ.)

ಇಲ್ಲಿ ಪ್ರಬುದ್ಧರೆಂದರೆ ತತ್ತ್ವನಿಶ್ಚಯವನ್ನು ಹೊಂದಿರುವವರು; ಇವರಲ್ಲಿ ಭಾವವೊಂದು ನೆಲೆಯನ್ನು ಕಂಡುಕೊಂಡು ಸ್ಥಾಯಿಯಾಗಿ ನಿಂತಿರಲು ಸಾಧ್ಯ. ಕಾಮನೆಗಳ ಗಾಳಿಗೆ ಸಿಕ್ಕಿರುವ ಸಾಮಾನ್ಯರು ಅಲುಗಾಟದಲ್ಲಿರುವವರು; ಇವರು ಹಿಡಿಯುವ ಭಾವವೂ ನೆಲೆಯೆನ್ನುವುದಿಲ್ಲದೆ ಸಂಚಾರದಲ್ಲಿಯೇ ಮಗ್ನವಾಗಿರುವುದು ಸಹಜವೇ. ಆದರೆ ಪ್ರಬುದ್ಧರ ಗಟ್ಟಿತನವಾಗಲೀ ಸಾಮಾನ್ಯರ ಅಲ್ಲಾಟವಾಗಲೀ ತೋರಿಕೊಳ್ಳುವುದು ಶಿವನಿಂದಲೇ. ಇಡಿಯ ಜಗತ್ತು ಶಿವನಿಗೆ ಒಂದು ಲೀಲೆ, ಕ್ರೀಡೆ, ವಿನೋದ. ಎಷ್ಟೇ ಆಗಲಿ, ಅವನು ಆನಂದ(ರಸ)ಮೂರ್ತಿಯಲ್ಲವೆ? ಹೀಗಾಗಿಯೇ ಅವನು ಒಳಗಣ ಅನುಭವಕ್ಕಷ್ಟೆ ತೋರಿಕೊಳ್ಳುವನೇ ಹೊರತು ಹೊರಗಣ ವಿವರಗಳಿಗಲ್ಲ. ರಸವೇ ಅವನಾದುದರಿಂದ ಈ ಆನಂದಾನುಭವದಲ್ಲಿ ತಾರತಮ್ಯಕ್ಕೆ ಎಡೆಯಿರದು; ಮಾತ್ರವಲ್ಲ, ಶಿವನ ಸ್ವಾತಂತ್ರ್ಯಶಕ್ತಿಯ ಅರಿವು ಒಳಗೆ ಬಲವಾಗಿ ಮೂಡಿಕೊಂಡು ಹೃದಯವು ನಿರ್ಮಲವಾದಾಗ ಜಗದಾನಂದವನ್ನು ಸವಿಯಲು ಅಡ್ಡಿಯೇನಿರದು. ಆದರೆ ಅಂತರಂಗದ ಪ್ರಸನ್ನತೆ ಒದಗಬೇಕಾದದ್ದೂ ಶಿವನಿಂದಲೇ. ಇದು ಅಭಿನವನ ದರ್ಶನ. ವಿಭಾವಾನುಭಾವ-ಸಂಚಾರಿ-ಸ್ಥಾಯಿಭಾವಗಳ ಸಂಯೋಗದಿಂದಲೇ ರಸಸಿದ್ಧಿಯಾಗುವುದೆಂದು ಅವನು ಇಲ್ಲಿ ನಿರೂಪಿಸಿರುವ ಕಾವ್ಯಮೀಮಾಂಸೆಯ ತತ್ತ್ವ. ಜಗದಾನಂದಕ್ಕೆ ಕಾರಣನಾಗುವವನು ಶಿವನಾದರೆ ಕಾವ್ಯಪ್ರಪಂಚದಲ್ಲಿ ಇದನ್ನು ಒದಗಿಸಿ ಕೊಡುವವನೇ ಕವಿ. ಹೀಗಾಗಿ, ಇಲ್ಲಿ ಅಭಿನವನು ಶಿವನ ತ್ರಿನೇತ್ರರೂಪವನ್ನು ಸ್ತುತಿಸಿರುವುದು ಗಮನಾರ್ಹ. ಕವಿಯೆಂಬ ಶಿವನಿಗೆ ಪ್ರತಿಭೆಯೆಂಬ ಮೂರನೆಯ ಕಣ್ಣು ಆವಶ್ಯಕ, ಅದೇ ಅವನಿಗೆ ಭೂಷಣ ಎಂಬುದನ್ನು ಅಭಿನವನು ಧ್ವನಿಸಿದ್ದಾನೆ.

ಪ್ರತಿಭೆ-ದರ್ಶನ-ಚಮತ್ಕಾರ[15]ಗಳು ತುಂಬಿರುವ ಇಂಥ ಸಂಗಮಸ್ಥಾನಗಳನ್ನು ನಾವು ಅಭಿನವನಲ್ಲಿ ಹೆಜ್ಜೆ ಹೆಜ್ಜೆಗೂ ಸಂದರ್ಶಿಸಬಹುದೆನ್ನಿ. ಇವುಗಳಲ್ಲಿ ಮೀಯುವುದನ್ನು ಶಿವಸಾಕ್ಷಾತ್ಕಾರ ಎನ್ನೋಣವೆ? ಆನಂದಾನುಭವ ಎನ್ನೋಣವೆ? ರಸಾಸ್ವಾದ ಎನ್ನೋಣವೆ? ಸ್ವರೂಪದರ್ಶನ ಎನ್ನೋಣವೆ? ಅಭಿನವನಲ್ಲಂತೂ ಇವುಗಳ ನಡುವೆ ಭೇದಗಳ ಗೊಡವೆಯಿಲ್ಲವಷ್ಟೆ.

ಭಾರತೀಯಕಲಾಲೋಕಕ್ಕೆ ಭರತಮುನಿಯ ನಾಟ್ಯಶಾಸ್ತ್ರ ಒಂದು ಶಾಶ್ವತನಿಧಿ; ಇದನ್ನು ನಮಗಾಗಿ ಕಾಪಿಟ್ಟುಕೊಂಡು ಬಂದವನು, ಶೇಷಮುನಿ-ಪತಂಜಲಿಯ ಅವತಾರ ಎಂಬುದಾಗಿಯೇ ಕೀರ್ತಿತನಾಗಿರುವ ಅಭಿನವಗುಪ್ತಪಾದ. ಅಭಿನವಭಾರತಿಯಲ್ಲಿ ಅವನು ನೀಡಿರುವ ವಿವರಣೆಗಳು ಅದನ್ನು ಒಂದು ಸ್ವತಂತ್ರವಿಶ್ವಕೋಶದಂತೆಯೇ ಮೆರೆಯಿಸಿವೆ. ನಾಟ್ಯಶಾಸ್ತ್ರ ಮತ್ತು ಅಭಿನವಭಾರತೀ—ಇವೆರಡೂ ಒಂದಾಗಿ ಕೂಡಿಕೊಂಡು ಕಲಾಪ್ರಪಂಚದ ಬೇಡಿಕೆಗಳನ್ನೆಲ್ಲ ಈಡೇರಿಸಬಲ್ಲ ಕಾಮಧೇನುವಿನಂತೆ ಕಲಾಮೃತಧಾರೆಯನ್ನು ಹರಿಸುತ್ತಿದೆ; ಕಲಾಜಗತ್ತಿನ ಸಾರಮಯತೆಗೆ ಅನಿವಾರ್ಯವಾದ ಸೂತ್ರಗಳನ್ನೆಲ್ಲ ಹೊಮ್ಮಿಸಬಲ್ಲ ಚಿಂತಾಮಣಿಯಂತೆ ಕಂಗೊಳಿಸುತ್ತಿದೆ; ಕಲಾಯೋಗಿಗಳಿಗೆ ಆನಂದಫಲವನ್ನು ಉಣಿಸುವ ಕಲ್ಪವೃಕ್ಷದಂತೆ ರಸಪೋಷಕವಾಗಿ ಕಲಾಪರಂಪರೆಯನ್ನು ಎತ್ತಿಹಿಡಿದಿದೆ.

ಅಭಿನವನಿಗೆ ಶಿವ, ಆನಂದ, ರಸ—ಇವೆಲ್ಲವೂ ಒಂದೇ. ಆದುದರಿಂದಲೇ ಅವನು ರಸ, ರಸಾಸ್ವಾದ, ರಸನಿರೂಪಣೆಗಳ ಸಂದರ್ಭಗಳಲ್ಲಿ ಯೋಗಿಯಂತೆ, ದಾರ್ಶನಿಕನಂತೆ, ಅನುಭಾವಿಯಂತೆ, ಸಿದ್ಧನಂತೆ ವ್ಯವಹರಿಸುವುದು. ರಸ ಎನ್ನುವುದು ನಮ್ಮ ಅಂತರಂಗದಲ್ಲಿಯೇ ಇರುವ ಭಾವತರಂಗಗಳ ವಿಶ್ರಾಂತಸಾಗರ; ಇದು ವಿಭಾವ-ಅನುಭಾವ-ಸಂಚಾರಿಭಾವಗಳ ಸಂಚಾರದಿಂದ ನಾವು ತಲಪುವ ನಮ್ಮ ದಿಟವಾದ ನೆಲೆಯೇ ಹೌದು. ರಸನಿಷ್ಪತ್ತಿ ಎಂಬುದು ದಿಟವಾಗಿ ರಸನಾನಿಷ್ಪತ್ತಿಯೇ ಸರಿ. (ಇಲ್ಲಿ 'ರಸನಾ' ಎಂದರೆ ರಸವನ್ನು ಸವಿಯುವುದು; ರಸಾನುಭವ ಎಂದರ್ಥ.) ರಸ ಇರುವುದು ಅನುಭವದಲ್ಲಿಯೇ ಹೊರತು ಅನುಭವಕ್ಕೆ ಎಡೆಮಾಡಿಕೊಡುವ ವಸ್ತುವಿನಲ್ಲಲ್ಲ. ರಸವು ಆನಂದವೆಂದಾಗ ಅದು ವಸ್ತುನಿಷ್ಠವಾಗಿರುವುದಿಲ್ಲ, ವ್ಯಕ್ತಿನಿಷ್ಠವಾಗಿರುವುದು. ಲೋಕವ್ಯವಹಾರದಲ್ಲಿ ಪ್ರತ್ಯಕ್ಷ, ಅನುಮಾನ, ಸ್ಮೃತಿ ಮೊದಲಾದ ತಿಳಿವಳಿಕೆಗಳೆಲ್ಲ ವಸ್ತುನಿಷ್ಠವಾಗಿರುತ್ತವೆ; ಆದರೆ ರಸಾಸ್ವಾದವಾದರೋ ಅಲೌಕಿಕವಾದ ಚಮತ್ಕಾರ. ಇದು ಇಂದ್ರಿಯಗಳಿಂದ ಒದಗುವ ಅರಿವುಗಳಂತೆ ಅಲ್ಲ; ಇದನ್ನು ಒಂದು ಮಾನಸವ್ಯಾಪಾರ ಎಂದೂ ನಿರ್ದೇಶಿಸುವಂತಿಲ್ಲ. ರಸಾನುಭವ ಎಂಬುದು ಅಂತರಂಗದಲ್ಲಿ ತೋರಿಕೊಳ್ಳುವ ಒಂದು ವಿಶೇಷವಾದ ಸಂವೇದನೆ, ಸ್ವ-ಸಂವೇದನೆ; ಇದು ನಮ್ಮ ಅರಿವನ್ನು (ಆನಂದ) ನಮಗೆ ಎಟುಕಿಸಿಕೊಡುವಂಥದ್ದು. ರಸಾಸ್ವಾದವನ್ನು ಅಭಿನವನು ರಸಚರ್ವಣ ಎಂದಿರುವುದು ಸ್ವಾರಸ್ಯವಾಗಿದೆ. ಈ ಅನುಭವವನ್ನು ಅವನು ಆನಂದಘನ

---

15. ಚಮತ್ಕಾರ ಎಂಬುದು ಆನಂದಾವಸ್ಥೆಯನ್ನು ತಲಪಿದ ಅನುಭವ. ಅಭಿನವನ ಪ್ರಕಾರ 'ಚಮತ್ಕಾರ' ಎಂದರೆ ವಿಮರ್ಶ-ಶಕ್ತಿಯ ಹಂತದಲ್ಲಿಯ ಅನುಭವ. ಇದು 'ರಸ', 'ಆನಂದ', 'ಪರಮಭೋಗ'ಗಳಿಗೂ ಸಮಾನಾರ್ಥಪದ ಎನ್ನಬಹುದು.

ಎಂದಿರುವುದೂ ಗಮನಾರ್ಹ. ಪುರುಷಾರ್ಥಗಳಲ್ಲಿ ಅಂತಿಮವಾದುದು ಮೋಕ್ಷ, ಎಂದರೆ ಆನಂದವಷ್ಟೆ; ಹೀಗೆಯೇ ಕಾವ್ಯದ ಅಂತಿಮ ಪ್ರಯೋಜನವೂ ಆನಂದವೇ ಸರಿ ಎಂಬುದು ಅವನ ಖಚಿತ ನಿಲವು. ಜಗದಲ್ಲಿ ರಸವಲ್ಲದ ಅನುಭವವೇ ಇಲ್ಲ ಎಂದು ಹೇಳಿ ಶಿವನು ವಿಶ್ವಮಯನಷ್ಟೆ ಅಲ್ಲ, ಆನಂದವೇ ಅವನು ಎಂದು ಸ್ಥಾಪಿಸುತ್ತಾನೆ. ಮಾತ್ರವಲ್ಲ, ರಸಾನುಭವ ಒಂದು ಅಲೌಕಿಕಾನುಭವ ಎನ್ನುವುದೇ ನಮಗೆ ಭೂಷಣ[16] ಎಂದು ಸಂಭ್ರಮಿಸಿ, ಶಿವನು ವಿಶ್ವೋತ್ತೀರ್ಣನೂ ಹೌದೆಂದು ನೆನಪಿಸುತ್ತಾನೆ. ಶಾಂತರಸದ ಬಗ್ಗೆ ಮಾತನಾಡುವಾಗಲಂತೂ ಅವನು ಕಾವ್ಯತ್ವದಿಂದ ಭೂಮತ್ವದೆಡೆಗೆ[17] ಜಿಗಿದು ಆನಂದದಲ್ಲಿ ಒಂದಾಗಿಬಿಡುತ್ತಾನೆ.

ಆನಂದವರ್ಧನನು ತನ್ನ 'ಧ್ವನ್ಯಾಲೋಕ'ದಲ್ಲಿ ಅರ್ಥಾಂತರಸಂಕ್ರಮಿತವಾಚ್ಯಧ್ವನಿಗೆ ಉದಾಹರಣೆಯಾಗಿ ಕೊಟ್ಟಿರುವ ಶ್ಲೋಕ[18] ಮತ್ತು ಅದಕ್ಕೆ ಅಭಿನವಗುಪ್ತನ ವ್ಯಾಖ್ಯಾನವನ್ನು ಇಲ್ಲಿ ಗಮನಿಸುವುದು ಉಚಿತವೆನಿಸುತ್ತದೆ; ಆನಂದವರ್ಧನನದೇ ಈ ರಚನೆ ಎನ್ನುವುದೂ ಸಹ ಗಮನಾರ್ಹ.

ಯಾ ವ್ಯಾಪಾರವತೀ ರಸಾನ್ ರಸಯಿತುಂ ಕಾಚಿತ್ಕವೀನಾಂ ನವಾ
ದೃಷ್ಟಿರ್ಯಾ ಪರಿನಿಷ್ಠಿತಾರ್ಥವಿಷಯೋನ್ಮೇಷಾ ಚ ವೈಪಶ್ಚಿತೀ ।
ತೇ ದ್ವೇ ಅಪ್ಯವಲಂಬ್ಯ ವಿಶ್ವಮನಿಶಂ ನಿರ್ವರ್ಣಯಂತೋ ವಯಂ
ಶ್ರಾಂತಾ ನೈವ ಚ ಲಬ್ಧಮಬ್ಧಿಶಯನ! ತ್ವದ್ಭಕ್ತಿತುಲ್ಯಂ ಸುಖಮ್ ॥[19]

ವ್ಯಾಖ್ಯಾನಕಾರರ ಮಕುಟಮಣಿ ಅಭಿನವಗುಪ್ತ 'ಲೋಚನ'ದಲ್ಲಿ ಇದನ್ನು ವಿವರಿಸುತ್ತ ಹೀಗೆನ್ನುತ್ತಾನೆ—'ಕೃತಿಕಾರ (ಆನಂದವರ್ಧನ) ಮೊದಲಿಗೆ ದೈವಭಕ್ತನೇ ಆಗಿದ್ದವನು. ಆದರೆ ಕುತೂಹಲಮನಸ್ಸಿನಿಂದ ಕವಿ ಮತ್ತು ವಿದ್ವಾಂಸರ ದಾರಿ ಹಿಡಿದು ನಿರಾಶೆಹೊಂದಿದ; ದೈವಭಕ್ತಿಯೇ ಅನಿವಾರ್ಯವೆಂದು ಅರಿತು ಪುನಃ ಅದರಲ್ಲೇ ನೆಲಸಿದ... ರಸಾಸ್ವಾದವು ಪರಮೇಶ್ವರನಲ್ಲಿ ವಿಶ್ರಾಂತವಾಗಿರುವ ಆನಂದ(ಆತ್ಮಾನಂದ)ದ ಒಂದು ಹನಿಯ ತೋರಿಕೆಯಷ್ಟೆ..."[20]

---

16. ಭೂಷಣಮೇತದಸ್ಮಾಕಮಲೌಕಿಕತ್ವಸಿದ್ಧೌ—ಅಭಿನವಭಾರತೀ, ಆರನೆಯ ಅಧ್ಯಾಯ
17. ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ, ಭೂಮೈವ ಸುಖಂ, ಭೂಮಾ ತ್ವೇವ ವಿಜಿಜ್ಞಾಸಿತವ್ಯಃ—*ಛಾಂದೋಗ್ಯೋಪನಿಷತ್ತು, 7.23.1*
18. III. 122
19. "ವಿಶ್ವವನ್ನು ನವೋನವವಾದ ರಸೈಕದೃಷ್ಟಿಯಿಂದೊಮ್ಮೆ, ಪರಿನಿಷ್ಠಿತವಾದ ವಿದ್ವದ್ದೃಷ್ಟಿಯಿಂದೊಮ್ಮೆ ಎಷ್ಟೆಷ್ಟು ವಿವೇಚಿಸಿದರೂ, ಚಿತ್ತಕ್ಕೆ ಆಯಾಸವಾಯಿತೇ ಹೊರತು, 'ಭಗವಂತನೆ! ನಿನ್ನ ಭಕ್ತಿಗೆ ಸಮಾನವಾದ ಸೌಖ್ಯ ದೊರೆಯಲಿಲ್ಲ'!"—ಕೆ. ಕೃಷ್ಣಮೂರ್ತಿಗಳ ಅನುವಾದ.
20. ಮೇಲೆ ಒದಗಿಸಿರುವ ಅನುವಾದ ಭಾವಾನುವಾದವಷ್ಟೆ; ಮೂಲಪಾಠ ಹೀಗಿದೆ—
"ಏವಂ ಪ್ರಥಮಮೇವ ಪರಮೇಶ್ವರಭಕ್ತಿಭಾಜಃ ಕುತೂಹಲಮಾತ್ರಾವಲಂಬಿತಕವಿಪ್ರಮಾಣಕೋಭಯವೃತ್ತೇಃ ಪುನರಪಿ ಪರಮೇಶ್ವರಭಕ್ತಿವಿಶ್ರಾಂತಿರೇವ ಯುಕ್ತೇತಿ ಮನ್ವಾನಸ್ಯೇಯಮುಕ್ತಿಃ । .... ಪರಮೇಶ್ವರ ವಿಶ್ರಾಂತ್ಯಾನಂದಃ ಪ್ರಕೃಷ್ಯತೇ ತದಾನಂದವಿಪ್ರುಣ್ಮಾತ್ರಾವಭಾಸೋ ಹಿ ರಸಾಸ್ವಾದ ಇತ್ಯುಕ್ತಂ ಪ್ರಾಗಸ್ಮಾಭಿಃ।..."

ರಸಾನಂದವು ಲೋಕೋತ್ತರವಾದುದು, ಅನಿರ್ವಚನೀಯವಾದುದು, ಬ್ರಹ್ಮಾನಂದ ಸದೃಶವಾದುದು ಎಂಬುದನ್ನು ಸ್ಥಾಪಿಸಲು ತವಕಿಸಿದ ಅಭಿನವ ಅದರ ಸ್ಥಾನ-ಮೌಲ್ಯಗಳನ್ನು ಇಲ್ಲಿ ನಿರ್ದೇಶಿಸಿರುವುದು ವಿಚಾರಾರ್ಹವಾಗಿದೆ. ಆದರೆ ಕಾವ್ಯ-ಶಾಸ್ತ್ರಗಳೆರಡರಲ್ಲೂ ಪ್ರತಿಭೆಯನ್ನು ಸಿದ್ಧಿಸಿಕೊಂಡು ಸವ್ಯಸಾಚಿಗಳೆನಿಸಿದವರಷ್ಟೆ ಅಲ್ಲ, ಆತ್ಮಾನುಭವವನ್ನೂ ಪಡೆದ ಯೋಗಿಗಳಷ್ಟೆ ಆಡಬಹುದಾದ, ವಿಮರ್ಶಿಸಬಹುದಾದ ಮಾತುಗಳು ಇವು. ನಮ್ಮ ಅಭಿನವ ಇಂಥವರಲ್ಲೊಬ್ಬ. ಇಂಥವರು ನುಡಿದಾಗಲಷ್ಟೆ ಈ ಸೂಕ್ತಿಗಳಿಗೂ ಮರ್ಯಾದೆ ದೊರಕುವುದೆನ್ನಿ. ರಸಾನಂದವಾಗಲೀ ಬ್ರಹ್ಮಾನಂದವಾಗಲೀ ಕೇವಲ ಆ ಶಬ್ದಗಳನ್ನು ನಾಲಗೆಯ ಮೇಲೆ ಕುಣಿಸುವುದರಿಂದ ಎಟುಕುವ ಸವಿಯೆ?[21] ಈಫಿಲ್‌ಗೋಪುರದ ಮೇಲೆ ನಿಂತು 'ಅಹಂ ಬ್ರಹ್ಮಾಸ್ಮಿ'[22], 'ಜಗತ್ತು ಮಿಥ್ಯೆ'[23] ಎಂದು ಅರಚಿ ಕೋಣಾಘಾತ

---

21. 'ಕನಸಿನಲ್ಲಿ ಕೂಡ ರಸವು ಸ್ವಶಬ್ದವಾಚ್ಯವಲ್ಲ ಎನ್ನುತ್ತಾನೆ, ಅಭಿನವ: "ಸ್ವಪ್ನೇಽಪಿ ನ ಸ್ವಶಬ್ದವಾಚ್ಯಃ" *(ಲೋಚನ)*

22. ವಿಜ್ಞಾತಂ ವಿದಿತಂ ಬ್ರಹ್ಮ ಅವಿಜಾನತಮ್ ಅಸಮ್ಯಗ್ದರ್ಶಿನಾಮ್,
ಇಂದ್ರಿಯಮನೋಬುದ್ಧಿಷ್ವೇವಾತ್ಮದರ್ಶಿನಾಮ್ ಇತ್ಯರ್ಥಃ ।
(ಬ್ರಹ್ಮವನ್ನು ಸರಿಯಾಗಿ ಬಲ್ಲವರಿಗೆ ಬ್ರಹ್ಮವು ತಿಳಿವಿಗೆ ವಿಷಯವಲ್ಲವೆಂದು ತಿಳಿದಿರುತ್ತದೆ. ನಿಜವನ್ನು ಅರಿಯದವರಿಗೆ, ಎಂದರೆ, ಸರಿಯಾದ ತಿಳಿವಳಿಕೆಯಿಲ್ಲದೆ,—ನಿಜವನ್ನು ಕಾಣದೆ—ಇಂದ್ರಿಯ, ಮನಸ್ಸು, ಬುದ್ಧಿ—ಇವುಗಳಲ್ಲಿಯೇ ಆತ್ಮನನ್ನು ಕಾಣುವವರಿಗೆ "ಬ್ರಹ್ಮವನ್ನು ಅರಿತುಕೊಂಡಿರುವೆವು" ಎಂಬ ಭ್ರಾಂತಿಯುಂಟಾಗಬಹುದಾಗಿದೆ—*ಕೇನೋಪನಿಷತ್, ಶಾಂಕರಭಾಷ್ಯ, 2.3*)

23. 'ಜಗತ್ತು ಮಿಥ್ಯೆ', 'ಜಗತ್ತು ಇಲ್ಲವೇ ಇಲ್ಲ'—ಎಂಬಂಥ ಉದ್ಗಾರಗಳನ್ನು ಕೆಲವರು ಮೊಳಗಿಸುತ್ತಿರುತ್ತಾರೆ! ಆಚಾರ್ಯಶಂಕರರೇ ಹೀಗೆ ಘೋಷಿಸಿಬಿಟ್ಟಿದ್ದಾರೆಂದೂ ಇವರ ಆರ್ಭಟ!! ಅತ್ಯದ್ಭುತವಾದ ಈ ಜಗತ್ತನ್ನು ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನೇ ಸೃಷ್ಟಿಸಿದ್ದಾನೆಂದೂ, ಆತ್ಮನೇ ಈ ಜಗತ್ತೆಂಬ ಕಾರ್ಯಕ್ಕೆ ನಿಮಿತ್ತಕಾರಣನೂ ಉಪಾದಾನಕಾರಣನೂ ಎಂದೂ ವೇದ-ಶಾಸ್ತ್ರಗಳೇ ಹೇಳುತ್ತಿವೆ. ಶಂಕರರು ಕೂಡ ಈ ಸಿದ್ಧಾಂತವನ್ನೇ ಎತ್ತಿಹಿಡಿದಿದ್ದಾರೆ. 'ಸರ್ವಜ್ಞಂ ಬ್ರಹ್ಮ ಜಗತಃ ಕಾರಣಮ್' (ಸರ್ವಜ್ಞನಾದ ಬ್ರಹ್ಮವೇ ಈ ಜಗತ್ತಿಗೆ ಕಾರಣ—*ಬ್ರಹ್ಮಸೂತ್ರಶಾಂಕರಭಾಷ್ಯ, I.1.10*); 'ಬ್ರಹ್ಮ ಸ್ವಭಾವೋಹಿ ಪ್ರಪಂಚಃ ನ ಪ್ರಪಂಚಸ್ವಭಾವಂ ಬ್ರಹ್ಮ' (ಪ್ರಪಂಚವು ಬಹ್ಮಸ್ವಭಾವವಾದದ್ದು; ಬ್ರಹ್ಮವು ಪ್ರಪಂಚಸ್ವಭಾವವಾದದ್ದಲ್ಲ —*ಬ್ರಹ್ಮಸೂತ್ರಶಾಂಕರಭಾಷ್ಯ, III.2.21*); " 'ಆನಂದೇನ ಜಾತಾನಿ ಜೀವಂತಿ। ಆನಂದಂ ಪ್ರಯಂತ್ಯಭಿಸಂವಿಶಂತೀತಿ ।।' ಅನ್ಯಾನ್ಯಪಿ ಏವಂಜಾತೀಯಕಾನಿ ನಿತ್ಯಶುದ್ಧಬುದ್ಧಮುಕ್ತಸ್ವಭಾವ ಸರ್ವಜ್ಞಸ್ವರೂಪಕಾರಣವಿಷಯಾಣಿ ಉದಾಹರ್ತವ್ಯಾನಿ।।" ('ಆನಂದದಿಂದಲೇ ಈ ಭೂತಗಳು ಹುಟ್ಟುತ್ತವೆ; ಹುಟ್ಟಿ ಆನಂದದಿಂದಲೇ ಬದುಕಿರುವವು; ಆನಂದವನ್ನೇ ಒಳಹೊಕ್ಕುವವು.' ನಿತ್ಯಶುದ್ಧಬುದ್ಧಮುಕ್ತ ಸ್ವಭಾವವುಳ್ಳದ್ದಾಗಿಯೂ ಸರ್ವಜ್ಞವಾಗಿಯೂ ಇರುವ ಸ್ವರೂಪವುಳ್ಳ ಬ್ರಹ್ಮವೇ ಜಗತ್ತಿನ ಕಾರಣವೆಂದು ಹೇಳುವ ಇದೇ ಜಾತಿಯ ಬೇರೆಯ ವಾಕ್ಯಗಳನ್ನೂ ಉದಾಹರಿಸಬಹುದು—*ಬ್ರಹ್ಮಸೂತ್ರಶಾಂಕರಭಾಷ್ಯ, I.1.2*) ಮುಂತಾದ ಮಾತುಗಳನ್ನು ಗಮನಿಸಿದಾಗ ಶಂಕರರು ಜಗತ್ತನ್ನು ನಿರಾಕರಿಸಿಲ್ಲವೆಂಬುದು

(ಮುಂದಿನ ಪುಟಕ್ಕೆ...,)

ಮಾಡುವುದರಿಂದ ದೊರೆಯುವ ಲಾಭವಾದರೂ ಏನು? 'ಅವತಾರಪುರುಷ' ಎಂಬ ಹಣೆಪಟ್ಟಿಯನ್ನಂತೂ ಅಂಟಿಸಿಕೊಳ್ಳಬಹುದೆನ್ನಿ!

ಇಂದು ನಮ್ಮ ಸುತ್ತಲಿನ ಪರಿಸರವನ್ನು ಗಮನಿಸಿದಾಗ, ಎಲ್ಲೆಲ್ಲೂ ಅಧ್ಯಾತ್ಮದ ಹಸಿವು ತೀವ್ರವಾಗುತ್ತಿರುವಂತೆ ಭಾಸವಾಗದಿರದು. ಇದು ದಿಟವಾಗಿಯೂ ಆಧ್ಯಾತ್ಮಿಕತೆಯ ತುಡಿತವೆ?—ಎಂಬ ಪ್ರಶ್ನೆಯನ್ನು ಎತ್ತಿಕೊಳ್ಳುವುದು ಇಲ್ಲಿ ಅನುಚಿತವಾಗದು. ಇದಕ್ಕೂ ಮೊದಲು 'ಅಧ್ಯಾತ್ಮ' ಎಂದರೇನೆಂದೂ ಸ್ಥಾಪಿತವಾಗಬೇಕಷ್ಟೆ. 'ಅಧ್ಯಾತ್ಮ' (ಅಧಿ + ಆತ್ಮ) ಎಂದರೆ 'ಆತ್ಮವನ್ನು ಕುರಿತದ್ದು', 'ಆತ್ಮಕ್ಕೆ ಸಂಬಂಧಪಟ್ಟದ್ದು', 'ಆತ್ಮದ ವಿಚಾರ' ಎಂದರ್ಥ. ಆತ್ಮ ಎಂದರೆ ಏನು? ಆತ್ಮವೆಂಬುದು 'ಜೀವ' ಎಂಬ ವಸ್ತುವಿನ ಒಳಗಡೆ ಇರುವ ಮೂಲಚೈತನ್ಯ; ಮೂಲಸ್ವರೂಪ ಎನ್ನಲೂಬಹುದು. ಇದೇ ನಮ್ಮ ಅರಿವು-ಇರವು. ಈ ಪರತತ್ತ್ವವನ್ನು ವ್ಯಷ್ಟಿಯಲ್ಲಿ ವ್ಯವಹರಿಸುವಾಗ 'ಆತ್ಮ' ಎಂದೂ, ಸಮಷ್ಟಿಯಲ್ಲಿ ವ್ಯವಹರಿಸುವಾಗ 'ಬ್ರಹ್ಮ', 'ಪರಬ್ರಹ್ಮ' ಎಂದೂ ಕರೆಯುವುದು ವಾಡಿಕೆ. ನಮ್ಮ ಸ್ವರೂಪವನ್ನು ಕಂಡುಕೊಂಡು, ಅಲ್ಲಿಯೇ ಆ ಅನುಭವದಲ್ಲಿಯೇ ಒಂದಾಗಿ ನೆಲಸುವುದನ್ನು ಆತ್ಮಜ್ಞಾನ, ಆತ್ಮಾನುಭವ, ಬ್ರಹ್ಮಾನುಭವ, ಮೋಕ್ಷ—ಎಂದು ಸರಳವಾಗಿ ಸಮೀಕರಿಸಬಹುದು. ಆದರೆ ಈಗ ನಾವು 'ಅಧ್ಯಾತ್ಮ', 'ಆಧ್ಯಾತ್ಮಿಕತೆ' ಎಂದು ಕುಣಿಯುತ್ತಿರುವುದು ವಾಸ್ತವದಲ್ಲಿ ನಮ್ಮ ಅರಿವು- ಇರವುಗಳನ್ನು ಅರಿಯುವ ಪ್ರಯತ್ನವಾಗಿದೆಯೆ? ಇದು ನಮ್ಮ ಅವಲೋಕನಕ್ಕೆ ಒಳಪಡಬೇಕಾದ ಮಾತು. ಈಚಿನ ದಿನಗಳಲ್ಲಿ ಅಧ್ಯಾತ್ಮಮಂದಿರಗಳೂ ಅಧ್ಯಾತ್ಮಶಿಬಿರಗಳೂ ಧಾರಾಳವಾಗಿಯೇ ತಲೆಯೆತ್ತುತ್ತಿವೆ; ಗುರುಗಳ[24] ಸಂಖ್ಯೆಯೂ

(ಹಿಂದಿನ ಪುಟದಿಂದ)

ಸ್ಪಷ್ಟವಾಗದಿರದು. 'ಮಿಥ್ಯೆ' ಎಂದರೆ ತಪ್ಪುತಿಳಿವಳಿಕೆ ಎಂದರ್ಥ. ಅನಾತ್ಮವಾದ ವಿವರ್ತಗಳಲ್ಲಿ ಆತ್ಮತ್ವಾರೋಪವನ್ನು ಮಾಡುವುದು ಮಿಥ್ಯಾಜ್ಞಾನದಿಂದ ಎನ್ನುವುದು ಶಾಸ್ತ್ರದ ಒಕ್ಕಣೆ. ಹೀಗೆ, ಜಗತ್ತನ್ನೇ ಪರಮಾರ್ಥ ಎಂದು ತಿಳಿಯುವುದು ಮಿಥ್ಯೆ, ಮಿಥ್ಯಾಜ್ಞಾನ ಎಂಬುದು ಶಂಕರರ ನಿಲವು. ಪರಮಾರ್ಥ ದೃಷ್ಟಿಯಿರುವ ಜ್ಞಾನಿಗೆ ಈ ಜಗತ್ತು ಬ್ರಹ್ಮವೇ ಹೌದೆಂದೂ, ವ್ಯಾವಹಾರಿಕಜಗತ್ತೆಂಬುದು ಹುಸಿತೋರಿಕೆಯೆಂದೂ ಗೊತ್ತಾಗುವುದು ಎಂಬುದು ದರ್ಶನದ ಮಾತು. ಇದು ಹೇಗೆಂದರೆ, ಚಿನ್ನದ ಒಡವೆಗಳ ಬೆಲೆಯನ್ನು ಕಟ್ಟುವಾಗ ಅಕ್ಕಸಾಲಿಗನು ಒಟ್ಟು ತೂಕಮಾಡಿ ಚಿನ್ನದ ಮೌಲ್ಯವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತಾನೆ; ಒಡವೆಗಳ ನಾಮರೂಪಗಳು ಮಿಥ್ಯೆಯೆಂಬುದು ಅವನ ತೀರ್ಮಾನ. ಹೀಗೆಯೇ, ಜಗತ್ತು ವ್ಯವಹಾರದಲ್ಲಿ ಸತ್; ಪರಮಾರ್ಥದಲ್ಲಿ ಅಸತ್. ಇದು ವೇದಾಂತದರ್ಶನ.

24. I am often asked the question, ''Is it really necessary to have a guru?'' I can answer that only by saying, ''It is necessary if you think so''...., if you are in need of someone to tell you how to practice meditation, or to attain a state

(ಮುಂದಿನ ಪುಟಕ್ಕೆ...,)

ವರ್ಧಿಸುತ್ತಿದೆ; ದೀಕ್ಷೆಗಳ ಸಂಭ್ರಮವೂ ಹೆಚ್ಚಾಗುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ; ಎಲ್ಲೆಲ್ಲೂ ಹಸುರಂತೂ ರಾರಾಜಿಸುತ್ತಿದೆ; ಪ್ರಶ್ನೆಯಿರುವುದು ಅದು ಕಳೆಯೋ ಬೆಳೆಯೋ ಎಂದಷ್ಟೆ.

ನಮ್ಮ ಕಾಲದ ಶ್ರೇಷ್ಠ ಚಿಂತಕರಲ್ಲಿ ಒಬ್ಬರೆಂದು ಗಣ್ಯರಾಗಿರುವ ಜಿಡ್ಡು ಕೃಷ್ಣಮೂರ್ತಿಯವರ ಸೂಕ್ತಿಯೊಂದನ್ನು ಇಲ್ಲಿ ಉಲ್ಲೇಖಿಸಬೇಕೆನಿಸುವುದು; ಅವರೆನ್ನುತ್ತಾರೆ— "The primary cause of disorder in ourselves is the seeking of reality provided by another; we mechanically follow somebody who will assure us a comfortable spiritual life."[25] ನಮ್ಮ ಆತ್ಮನಿರೀಕ್ಷಣೆಯನ್ನು ಅವಲಂಬಿಸಿಯೇ ಈ ಮಾತಿನ ಪ್ರಸ್ತುತತೆ-ಮೌಲಿಕತೆಗಳು ತೆರೆದುಕೊಂಡಾವು. ಅಧ್ಯಾತ್ಮವನ್ನು ನಮ್ಮಿಂದ ಬೇರೆಯಾಗಿ ನಿಂತಿರುವ, ಹೊರಗಣ ಒಂದು ವಿವರವಾಗಿ ಕಾಣುವಂಥ ಪ್ರತ್ಯೇಕತೆಗೆ, ದ್ವೈಧಭಾವಕ್ಕೆ

(ಹಿಂದಿನ ಪುಟದಿಂದ)

of liberation, nirvana, *moksha*, or whatever it may be called, and if you feel that necessity very strongly, then you must do it because, as the poet William Blake said, "The fool who persists in his folly will become wise." However, I do want to ask you, what is the source of a guru's authority? He can tell you that he speaks from experience, that he has experienced states of consciousness that have made him profoundly blissful, understanding, compassionate or whatever. You have his word for it and you may have the word of other people who likewise agree with him. But each one of them, and you in turn, agrees with him from out of your own opinion, and by your own judgement. So it is you who are the source of the teacher's authority. That is true whether he speaks as an individual or as the representative of a tradition or a church.

— Alan Watts, *Myth and Religion*, 1996

ಅಭಿನವನೂ 'ಗುರು'ಗಳ ಅಬ್ಬರಗಳಿಂದ ತ್ರಾಸಗೊಂಡಿದ್ದವನೇ! " 'ನಾನೇ ಶಿವ' ಎಂದು ಪಟ್ಟವೇರಿದ ಸ್ವಯಂಘೋಷಿತ ಗುರುಗಳನ್ನು ಹಿಂಬಾಲಿಸಿ ಗೊಂದಲದಲ್ಲಿ ಬಿದ್ದೆ; ತ-ತ್ತ್ವ ಎಂಬ ಪದಗಳನ್ನೂ ಇವರ ನಾಲಗೆ ಮುಟ್ಟಿರಲಿಲ್ಲ"—ಎಂದು ತನ್ನ ದಣಿವನ್ನು ತೋಡಿಕೊಂಡಿದ್ದಾನೆ: 'ಬಹುಭಿರಪಿ ಸೋಽಹಮೇವ ಭ್ರಮಿತಸ್ತತ್ತ್ವೋಪದೇಶಕಮನ್ಯೈಃ । ತತ್ತ್ವಮಿತಿ ವರ್ಣಯುಗಮಪಿ ಯೇಷಾಂ ರಸನಾ ನ ಪಸ್ಪರ್ಶ॥'

—ಪರಾತ್ರೀಶಿಕಾವಿವರಣ

25. *Freedom from the Known*—J. Krishnamurti, 1973, p. 11

ನಾವು ಒಗ್ಗಿಕೊಂಡಿರುವುದು ರಹಸ್ಯವೇನಲ್ಲ.[26] ಹೀಗಾಗಿ ಗುರಿ ಮತ್ತು ಮಾರ್ಗಗಳನ್ನು ಬಾಹ್ಯಪ್ರಪಂಚದಲ್ಲಿಯೇ ಅರಸುವಂಥ ಅನಿವಾರ್ಯ ದುರಂತಕ್ಕೆ ಪಕ್ಕಾಗಿಬಿಟ್ಟಿದ್ದೇವೆ. ಯಾರೋ ಬಳಸಿ ಎಸೆದಿರುವ ತೋರಿಕೆಯ ಹಾಸಿಗೆಯ ಮೇಲೆ ಶವದಂತೆ ಮಲಗಿ, ಆಧ್ಯಾತ್ಮಿಕತೆಯೆಂದರೇನೆಂದು ನಾವೇ ಊಹಿಸಿಕೊಂಡ ಕನಸುಗಳನ್ನು ಕಾಣುವುದೇ ಮೋಕ್ಷ, ಆತ್ಮಾನುಭವ ಎಂಬಂಥ ಪರಪ್ರತ್ಯಯನೇಯಬುದ್ಧಿ ನಮ್ಮಲ್ಲಿ ಆಳವಾಗಿ ಬೇರೂರಿರುವುದು ಒಗಟೆಯಾಗೇನೂ ಉಳಿದಿಲ್ಲ. ನಮಗೆ ಊರನ್ನು ತಲಪುವಂಥ ಧನ್ಯತೆಗಿಂತಲೂ ಮೈಲುಗಲ್ಲಿಗೆ ಕಾಯೊಡೆದು ದೀಪ ಬೆಳಗಿಸಿ ತೃಪ್ತಿಪಡುವ ತೂಕಡಿಕೆಯೇ ಹೆಚ್ಚು ಪ್ರಿಯ. ನಮಗೆ

---

26. ನೋಡಿ: Again, Mahamati, what is meant by non-duality? It means that light and shade, long and short, black and white, are relative terms, Mahamati, and not independent of each other; as Nirvana and Samsara are, all things are not-two. There is no Nirvana except where is Samsara; there is no Samsara except where is Nirvana; for the conditions of existence is not of a mutually exclusive character. Therefore it is said that all things are non-dual as are Nirvana and Samsara.

—Lankavatara-Sutra, II. 28

(Trans. by D.T. Suzuki)

ನ ಸಂಸಾರಸ್ಯ ನಿರ್ವಾಣಾತ್ ಕಿಂಚಿದಸ್ತಿ ವಿಶೇಷಣಂ ।
ನ ನಿರ್ವಾಣಸ್ಯ ಸಂಸಾರಾತ್ ಕಿಂಚಿದಸ್ತಿ ವಿಶೇಷಣಂ ॥
ನಿರ್ವಾಣಸ್ಯ ಚ ಯಾ ಕೋಟಿಃ ಕೋಟಿಃ ಸಂಸರಣಸ್ಯ ಚ ।
ನ ತಯೋರಂತರಂ ಕಿಂಚಿತ್ ಸುಸೂಕ್ಷ್ಮಂ ಅಪಿ ವಿದ್ಯತೇ ॥

—ಮಾಧ್ಯಮಿಕಕಾರಿಕಾ, xxv. 19-20

(ಸಂಸಾರಕ್ಕೂ ನಿರ್ವಾಣಕ್ಕೂ ವ್ಯತ್ಯಾಸವೇನಿಲ್ಲ; ಹಾಗೆಯೇ, ನಿರ್ವಾಣಕ್ಕೂ ಸಂಸ್ಕಾರಕ್ಕೂ ವ್ಯತ್ಯಾಸವೇನಿರದು. ನಿರ್ವಾಣಕ್ಕೆ ಎಲ್ಲೆಯಾಗಿರುವುದು ಸಂಸಾರಕ್ಕೂ ಎಲ್ಲೆಯೇ; ಈ ಎರಡರ ನಡುವೆ ಸ್ವಲ್ಪವೂ ಭೇದವಿರದು.)

"The eye with which I see God, is the same eye which god sees me. My eye and God's eye is one eye and one sight, and one knowledge, and one love."

—Eckhart

Not knowing how near Truth is,
People seek it far away....
They are like him who, in the midst of water
Cries out in thirst so imploringly.

—Hakuin

ಬೇಕಿರುವುದೆಲ್ಲ ಒಂದು, ಆಲಂಬನ—ಇದು ನಮ್ಮ ಸದ್ಯದ ನೋವನ್ನು ಮರೆಯಿಸುವ ಮಾದಕತೆ; ಮತ್ತೊಂದು, ಪಲಾಯನ—ಇದು ನಮ್ಮನ್ನು ನಾವೇ ಎದುರಿಸಲಾರದೆ ಕಂಡುಕೊಂಡ ಕಳ್ಳದಾರಿ. ಇಂಥ ಗಾಂಜಾ-ಅಫೀಮುಗಳ ಅಮಲನ್ನು ಅಧ್ಯಾತ್ಮ ಎಂಬ ಲೇಪನದಲ್ಲಿ ಚಲಾವಣೆಗೆ ತರಬಲ್ಲ ಜಾಣತನಕ್ಕೇನು ನಮ್ಮಲ್ಲಿ ಕೊರತೆಯೆ?

ಇತರರು ನಮ್ಮ ಅವಿವೇಕಗಳಿಗನುಸಾರವಾಗಿ ತಲೆಗೆ ತುರುಕಿರುವ ಅಧ್ಯಾತ್ಮದ ರಂಗುರಂಗಿನ ಚಿತ್ರಗಳು ಒಂದು ಕಡೆ; ಯಾರದೋ ಅಧ್ಯಾತ್ಮಪ್ರಯೋಗಮಂದಿರಗಳಲ್ಲಿ ನಮ್ಮತನವನ್ನು ಕಳೆದುಕೊಳ್ಳುತ್ತಿರುವ ಮಂಗಗಳು ನಾವೆಂಬ ತಿಳಿವಳಿಕೆಯೇ ನಮಗೆ ಮೂಡದಿರುವುದು ವಿಪರ್ಯಾಸವೇ ಸರಿ. ಹಾಗೆಯೇ, ನಮ್ಮ ಸದ್ಯದ ಆಸೆ-ಆಶಯ, ಇತಿ-ಮಿತಿಗಳಿಂದ ನಾವೇ ಕಟ್ಟಿಕೊಳ್ಳುವ ಅಧ್ಯಾತ್ಮಕಲ್ಪನೆಗಳ ಮೇಲಾಟ ಮತ್ತೊಂದು ಕಡೆ; ಇವೆಲ್ಲವೂ ನಾವೇ ಎಬ್ಬಿಸಿಕೊಂಡ ಅರಮನೆ-ಸೆರಮನೆಗಳೆಂಬ ತಥ್ಯವನ್ನೇ ಮರೆತುಬಿಟ್ಟಿರುತ್ತೇವೆ. ಪ್ರತಿದಿನ ಎದುರುಗೊಳ್ಳುವ ಅಧ್ಯಾತ್ಮಸೂತ್ರಗಳ ಆಟಾಟೋಪಗಳಾದರೂ ಎಷ್ಟು! ಜನ್ಮವೆತ್ತಿರುವ ಜಾತಿ ಯಾವುದು, ಹುಟ್ಟಿರುವ ದೇಶ ಯಾವುದು ಎಂಬುದರಿಂದ ಅಧ್ಯಾತ್ಮದ ಅರ್ಹತೆಯನ್ನು ಗಮನಿಸುವುದು; ತೊಟ್ಟಿರುವ ಬಟ್ಟೆಯ ಬಣ್ಣ ಕಾಷಾಯವೋ ಬಿಳಿಯೋ ಕರಿಯೋ ಎಂಬುದರಿಂದ ಅಧ್ಯಾತ್ಮದ ಸ್ತರವನ್ನು ಗುರುತಿಸುವುದು; ಇರುವ ತಾಣವು ಮಠವೋ ಮನೆಯೋ ಮಂದಿರವೋ ಎಂಬುದರಿಂದ ಅಧ್ಯಾತ್ಮದ ನಂಟನ್ನು ಕಲ್ಪಿಸುವುದು; ಆಡುವ ಭಾಷೆ ಯಾವುದು, ಉಲಿಯುವ ಮಾತು ಯಾವ ಶಾಸ್ತ್ರದ್ದು ಎಂಬುದರಿಂದ ಆಧ್ಯಾತ್ಮಿಕಾನುಭವವನ್ನು ನಿರ್ಧರಿಸುವುದು; ಸಂನ್ಯಾಸಿಯೋ ಸಂಸಾರಿಯೋ, ಜಗತ್ತನ್ನು ಮಿಥ್ಯೆ ಎಂದು ಡೊಳ್ಳು ಹೊಡೆಯುತ್ತಿದ್ದಾನೆಯೋ ಸತ್ಯ ಎಂದು ನಗಾರಿ ಬಾರಿಸುತ್ತಿದ್ದಾನೆಯೋ ಎಂಬುದರಿಂದ ಅಧ್ಯಾತ್ಮದ ಯಾಜಮಾನ್ಯವನ್ನು ಆರೋಪಿಸುವುದು; ದೇಹ ಬೆವರುತ್ತಿದೆಯೋ ಇಲ್ಲವೋ, ಹಸಿವಾಗುತ್ತಿದೆಯೋ ಇಲ್ಲವೋ, ಮುಖದಲ್ಲಿ ಸದಾ ಮಂದಹಾಸ ಮಿಂಚುತ್ತಿದೆಯೋ ಇಲ್ಲವೋ, ನುಡಿಯಲ್ಲಿ ಪ್ರೀತಿಯೆಂಬ[27] ಜೇನು ಒಸರುತ್ತಿದೆಯೋ ಇಲ್ಲವೋ ಎಂಬುದರಿಂದ ಆತ್ಮಾನುಭವವನ್ನು ಪರೀಕ್ಷಿಸುವುದು—ಇಂಥವು ನಾವಿಂದು ಕಾಣುತ್ತಿರುವ ಆಧ್ಯಾತ್ಮಿಕತೆಯ ಪ್ರಮಾಣಪತ್ರಗಳು! ಇವು ಅಧ್ಯಾತ್ಮವನ್ನು ಕಾಡುತ್ತಿರುವ ಪಂಚಮಹಾ'ಭೂತ'ಗಳೇ ಸರಿ; ಇವುಗಳ ಸಂಖ್ಯೆಯನ್ನು ಸಾವಿರಕ್ಕೂ ಮುಟ್ಟಿಸಬಹುದೆನ್ನಿ!

---

27. ''God would not have given us a commandment to love him, and to love our neighbours, if we could obey it, yes, but the commandment was not given in order for it to be obeyed. God never expected that it would be obeyed, because we were incapable of loving anyone but ourselves.''

—Saint Augustine

ಅಧ್ಯಾತ್ಮಮಾರ್ಗದಲ್ಲಿ ಆವರಿಸಿರುವ ಇಂಥ ಮಲಗಳ ನಿವಾರಣೆಗೆ ನೆರವಾಗಬಲ್ಲವರು ಅಭಿನವನಂಥ ದಾರ್ಶನಿಕರು.

ಅಭಿನವನ ದಾರ್ಶನಿಕ ಹೊಳಹುಗಳಲ್ಲಿ ಒಂದೆರಡನ್ನು ಈಗ ಮೆಲುಕು ಹಾಕೋಣ.

ಮೋಕ್ಷವನ್ನು ಅಭಿನವ ಹೇಗೆ ಕಂಡಿದ್ದಾನೆ? 'ಸ್ವಸ್ವರೂಪದ ದಿಟವಾದ ಅರಿವೇ ಮೋಕ್ಷ; ಮತ್ತೊಂದಲ್ಲ'[28]—ಇದು ಮುಕ್ತಿಯನ್ನು ಕುರಿತು ಅವನ ಸ್ಪಷ್ಟೋಕ್ತಿ. ಆದರೆ ಅವನು ಬೇರೆ ಬೇರೆ ಸಂದರ್ಭಗಳಲ್ಲಿ ಇದಕ್ಕೆ ಹಲವು ಪರ್ಯಾಯಪದಗಳನ್ನು ಬಳಸುತ್ತಾನೆ—ಶಿವಾನುಭವ, ಭೈರವಾವೇಶ, ಅನುತ್ತರ, ಸತ್ತರ್ಕ, ಸ್ವಾತಂತ್ರ್ಯ, ಆನಂದ, ಹೀಗೆ; ಆದರೆ ಈ ಎಲ್ಲವುಗಳ ಧ್ವನಿ ಒಂದೇ ಎಂಬುದನ್ನು ನಾವು ಮರೆಯಬಾರದಷ್ಟೆ. 'ಪರಾತ್ರೀಶಿಕಾವಿವರಣ' ದಲ್ಲಿ ಮುಕ್ತಿಯ ಬಗ್ಗೆ ಅವನ ವಿವರಣೆಯನ್ನು ಅಭಿನವದರ್ಶನದ ಕೇಂದ್ರಬಿಂದುವಾಗಿ ಸ್ವೀಕರಿಸಬಹುದು; ಅವನೆನ್ನುತ್ತಾನೆ—

.... ಪರಶಕ್ತಿಪಾತಾನುಗ್ರಹವಶೋತ್ಪನ್ನೈತಾವದನುತ್ತರಜ್ಞಾನಭಾಜನಭಾವಾನಾಮ್ ಇತ್ಥಂ ನಿಜಸ್ವರೂಪಹೃದಯಂಗಮೀಭಾವೇನ ನಿಜಾಮೋದಭರಕ್ರೀಡಾಭಾಸಿತಭೇದಸ್ಯ ನಿಖಿಲಬಂಧಾಭಿಮತತತ್ತ್ವವ್ರಾತಸ್ಯ ಸ್ವಾತ್ಮಚಮತ್ಕಾರಪೂರ್ಣಾಹಂತಾತಾದಾತ್ಮ್ಯಭೈರವಸ್ವರೂಪಾಭೇದಸಮಾವೇಶಾತ್ಮಿಕಾ ಜೀವತ ಏವ ಮುಕ್ತಿಃ । ಪ್ರಾಣದೇಹಾದಿಭೂಮಾವೇವ ಹಿ ಅಂತರ್ಬಹಿಷ್ಕರಣವಿಷಯಾಯಾಂ ಪ್ರೇರಣಾಪ್ಯಾಯಾಯಾಂ ಉದ್ಯೋಗಬಲಜೀವನಾದಿರೂಪಾಯಾಂ ರೂಢಸ್ಯ ಬಂಧಾಭಿಮತೇಭ್ಯೋ ಮುಕ್ತಿಃ । ... —ಇತಿ ಗೀಯತೇ!..... ತದುಕ್ತಂ ಶ್ರೀಸ್ಪಂದೇ

ಇತಿ ವಾ ಯಸ್ಯ ಸಂವಿತ್ತಿಃ ಕ್ರೀಡಾತ್ವೇನಾಖಿಲಂ ಜಗತ್ ।
ಸ ಪಶ್ಯನ್ ಸತತಂ ಯುಕ್ತೋ ಜೀವನ್ಮುಕ್ತೋ ನ ಸಂಶಯಃ ॥ ಇತಿ ॥[29]

---

28. 'ಮೋಕ್ಷೋ ಹಿ ನಾಮ ನೈವಾನ್ಯಃ ಸ್ವರೂಪಪ್ರಥನಂ ಹಿ ತತ್', —*ತಂತ್ರಾಲೋಕ, I. 156*
ಹೋಲಿಸಿ: 'ಬ್ರಹ್ಮಭಾವಶ್ಚ ಮೋಕ್ಷಃ' —*ಶಾಂಕರಬ್ರಹ್ಮಸೂತ್ರಭಾಷ್ಯ, I. 1.4*

29. ಇದರ ಒಟ್ಟು ತಾತ್ಪರ್ಯ—
ಶಕ್ತಿಪಾತದಿಂದ ಅನುತ್ತರಜ್ಞಾನವನ್ನು ಪಡೆದು ನಿಜಸ್ವರೂಪವನ್ನು ಅರಿತುಕೊಂಡು ಭೈರವಾವೇಶದಲ್ಲಿ ಒಂದಾಗಿ ತನ್ನ ಪೂರ್ಣಸ್ವರೂಪದಲ್ಲಿ ನೆಲಸುವುದೇ ಮುಕ್ತಿ. ಹೀಗೆ ಸ್ವಸ್ವರೂಪದಲ್ಲಿ ತಾದಾತ್ಮ್ಯ ಸಾಧಿಸಿದವನು ಎಲ್ಲ ಬಂಧಗಳನ್ನೂ ತನ್ನ ಶುದ್ಧಪ್ರಕಾಶದ ಅಭಿವ್ಯಕ್ತಿಯಾದ ಆನಂದಾತ್ಮಕವಾದ ಕ್ರೀಡೆಗಿಂತಲೂ ಬೇರೆಯಾದುವು ಎಂಬುದನ್ನು ಅರಿಯುತ್ತಾನೆ. ಒಳಗಣ-ಹೊರಗಣ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸುವ ವಿವರಗಳಿಂದ ದೂರ ಸರಿಯುವುದೇ ಮುಕ್ತಿ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಇದನ್ನೇ 'ಸ್ಪಂದಕಾರಿಕೆ'ಯಲ್ಲೂ "ಯಾವನು ಈ ಜಗತ್ತನ್ನು ತನ್ನ ಅರಿವಿಗಿಂತ ಬೇರೆಯಾದುದಲ್ಲವೆಂದೂ ಇಡಿಯ ಜಗತ್ತು ಚೈತನ್ಯದ ಕ್ರೀಡೆಯೆಂದೂ ತಿಳಿದು ಆ ಶುದ್ಧಚೈತನ್ಯದೊಂದಿಗೆ ಒಂದಾಗುವನೋ ಅವನು ದಿಟವಾಗಿಯೂ ಜೀವನ್ಮುಕ್ತ ಎಂಬುದರಲ್ಲಿ ಸಂಶಯವಿಲ್ಲ"—ಎಂದಿದೆ.

ಅಭಿನವನಿಗೆ ಶಿವನೇ ಬ್ರಹ್ಮ, ಶಿವನೇ ಆತ್ಮ, ಶಿವನೇ ಚೈತನ್ಯ, ಶಿವನೇ ಆನಂದ, ಶಿವನೇ ಜಗತ್ತು[30], ಶಿವನೇ ಅರಿವು[31], ಶಿವನು ಎಲ್ಲೆಲ್ಲೂ ಇದ್ದಾನೆ, ಎಲ್ಲದರಲ್ಲೂ ಇದ್ದಾನೆ;[32] ಶಿವನಿಲ್ಲದ ತಾಣವೂ ಇಲ್ಲ, ಕಣವೂ ಇಲ್ಲ—ಎಂದವನು ಅವನು. ಆದುದರಿಂದಲೇ ಅವನು ಜಗತ್ತು 'ಮಿಥ್ಯೆ' ಎಂದು ಬೊಬ್ಬೆ ಹೊಡೆದು ಜಗತ್ತಿನ ಅಸ್ತಿತ್ವವನ್ನೇ ತಳ್ಳಿಹಾಕಿದವನಲ್ಲ. ಅವನಿಗೆ ಈ ಜಗತ್ತು ಶಿವನ ಒಂದು ವಿನೋದ, ಕ್ರೀಡೆಯಾಗಿಯೇ ಕಂಡಿತು;[33] ಅವನು ಇದರಲ್ಲಿ ಉತ್ಸಾಹದಿಂದಲೇ ಪಾಲ್ಗೊಂಡು ನಲಿದವನು. ಮೂವತ್ತಾರು ತತ್ತ್ವಗಳನ್ನು ಶಿವನಾಗಿ ಆರಾಧಿಸಿದಿರುವುದಿರಲಿ, ಯಾರಾದರೂ ಮುನ್ನೂರರವತ್ತು ತತ್ತ್ವಗಳ ಪಟ್ಟಿಯನ್ನು ಒದಗಿಸಿಕೊಟ್ಟರೂ ಅವುಗಳಲ್ಲಿ ಅಡಗಿರುವ ಶಿವತತ್ತ್ವವನ್ನು ಕಾಣಲು ಅಭಿನವನ ವಿಶ್ವಾತ್ಮಭಾವಕ್ಕೂ ದಾರ್ಶನಿಕಸಾಮರಸ್ಯಕ್ಕೂ ಕಷ್ಟವಾಗದೆನ್ನಿ. ಶಿವನು 'ಸಹಸ್ರಶೀರ್ಷಾ ಸಹಸ್ರಾಕ್ಷಃ ಸಹಸ್ರಪಾತ್'; ಹೀಗಾಗಿ ಅವನು ವಿಶ್ವಮಯ. ಮಾತ್ರವಲ್ಲ, ಶಿವನು 'ಅತ್ಯತಿಷ್ಠದ್ದಶಾಂಗುಲಮ್' ಸಹ ಹೌದು; ಹೀಗಾಗಿಯೇ ಅವನು ವಿಶ್ವೋತ್ತೀರ್ಣ, ಅನುತ್ತರ. ಈ ಅರಿವು ಅಭಿನವನಿಗೆ ಒಂದು ಶೈಕ್ಷಣಿಕ ಸಿದ್ಧಾಂತವಾಗಿರಲಿಲ್ಲ; ಅವನಿಗೆ ಇದು ಅನುಭವದಿಂದಲೇ ಎಟುಕಿದ್ದ ಶಿವಸಾಕ್ಷಾತ್ಕಾರ. ಹೀಗೆಂದು ಅವನು ಜಗತ್ತಿನ ಸಾಪೇಕ್ಷತೆಯ[34] ಬಗ್ಗೆ ಮಾತನಾಡುವುದೇ ಇಲ್ಲವೆಂದು ಊಹಿಸುವುದು ಧಾರ್ಷ್ಟ್ಯವಾದೀತು. 'ಪ್ರತಿಯೊಂದು ವಸ್ತು-ವಿವರವೂ ಅದು ತೋರಿಕೊಳ್ಳುವ ನೆಲೆಯಲ್ಲಿ ದಿಟವಾದುದೇ; ನಮ್ಮ ಪ್ರತ್ಯಕ್ಷಾನುಭವಕ್ಕೆ ಬೆಲೆಯಿಲ್ಲವೆಂದು ತಳ್ಳಿಹಾಕಲಾಗದು. ಆದರೆ ಆ ವಸ್ತುವಿನ ಶುದ್ಧಚೈತನ್ಯಸ್ವಭಾವವನ್ನು ಅರಿಯಲು ಅವುಗಳ ಒಳಹೊಕ್ಕು ನೋಡುವ ಪ್ರಯತ್ನವನ್ನು ಮಾಡಬೇಕು; ಗ್ರಹಿಕೆಯ ಬೇರೆ ಬೇರೆ ಸ್ತರಗಳಲ್ಲಿ ತೆರೆದುಕೊಳ್ಳುವ ಅರಿವಿನ ರೀತಿಯೇ ಭಿನ್ನವಾಗಿರುತ್ತದೆ' ಎಂದು ಅವನು ವಿವರವಾಗಿ ಮಾತನಾಡುತ್ತಾನೆ.[35] ಕೊನೆಗೆ, ಈ ಎಲ್ಲವೂ ಶಿವಶಕ್ತಿಯ ಪ್ರಕಟೀಕರಣವಲ್ಲದೆ ಬೇರೆಯಲ್ಲ ಎಂದು ಶಿವನಲ್ಲಿ ಕೂಡಿಕೊಳ್ಳುತ್ತಾನೆ.

---

30. ಹೋಲಿಸಿ: This very earth is the Lotus Land of Purity
And the body is body of Buddha. —Hakuin

31. ಹೋಲಿಸಿ: ಪ್ರಜ್ಞಾನಮ್ ಬ್ರಹ್ಮ—*ಐತರೇಯೋಪನಿಷತ್ತು, 3.1.3*

32. ಹೋಲಿಸಿ: ಸರ್ವಂ ಖಲ್ವಿದಂ ಬ್ರಹ್ಮ—*ಛಾಂದೋಗ್ಯೋಪನಿಷತ್ತು, 3.14.1*

33. ಹೋಲಿಸಿ: ಲೋಕವತ್ತು ಲೀಲಾಕೈವಲ್ಯಂ —*ಬ್ರಹ್ಮಸೂತ್ರ, III. I. 33*

34. ದ್ವೇ ಸತ್ಯೇ ಸಮುಪಾಶ್ರಿತ್ಯ ಬುದ್ಧಾನಾಂ ಧರ್ಮದೇಶನಾ ।
ಲೋಕಸಂವೃತಿಸತ್ಯಂ ಚ ಸತ್ಯಂ ಚ ಪರಮಾರ್ಥತಃ ॥ —*ಮಾಧ್ಯಮಿಕಕಾರಿಕಾ, XXIV.8*
(ವ್ಯಾವಹಾರಿಕಸತ್ಯ ಮತ್ತು ಪಾರಮಾರ್ಥಿಕಸತ್ಯ—ಈ ಎರಡೂ ಸತ್ಯಗಳನ್ನು ಸ್ಥಾಪಿಸಿಯೇ ಬುದ್ಧರು ಧರ್ಮವನ್ನು ಉಪದೇಶಿಸುತ್ತಾರೆ.)

35. ಈ ಬಗ್ಗೆ ಆಸಕ್ತರು 'ಈಶ್ವರಪ್ರತ್ಯಾಭಿಜ್ಞಾವಿವೃತಿವಿಮರ್ಶಿನಿ'ಯನ್ನು ನೋಡಬಹುದು.

ಎಲ್ಲ ಶಾಸ್ತ್ರಗಳ, ಎಲ್ಲ ಸಾಧನೆಗಳ, ಎಲ್ಲ ವಿದ್ಯೆಗಳ ಅಂತಿಮಲಕ್ಷ್ಯ ನಮ್ಮ ಅರಿವನ್ನು ಅರಿತುಕೊಂಡು ಶಿವಸ್ವರೂಪದಲ್ಲಿ ಒಂದಾಗುವುದೇ ಎಂದು ಸಾರಿದವನು ಅಭಿನವ. ಈ ಗುರಿಯ ಸಿದ್ಧಿಗಾಗಿ ಅವನು ಹತ್ತುಹಲವು ಉಪಾಯಗಳನ್ನು ಸೂಚಿಸಿದ. ಎಲ್ಲವೂ ಶಿವಮಯವೇ ಆಗಿರುವಾಗ ಯಾವುದೂ ಸಹ ಶಿವಾನುಭವಕ್ಕೆ ಕಾರಣವಾಗಬಲ್ಲದು ಎನ್ನುವುದು ಅವನ ನಿಲವಾಗಿತ್ತೆನ್ನಬಹುದು. ಮಾತ್ರವಲ್ಲ, ಈಗಾಗಲೇ ಜನಮಾನಸದಲ್ಲಿ ರೂಢವಾಗಿರುವಂಥ ಕಲಾಪಗಳನ್ನು ಒಮ್ಮೆಲೆ ಸಾರಾಸಗಟಾಗಿ ತಿರಸ್ಕರಿಸಿ ಜನಮಾನಸದಲ್ಲಿ ಗೊಂದಲವನ್ನುಂಟುಮಾಡುವಂಥ ಬಂಡಾಯಬಾವುಟವನ್ನು ಜ್ಞಾನಿಯಾದವನು ಹಾರಿಸಲಾರ ನಲ್ಲವೆ?[36] ಹೀಗಾಗಿಯೇ ಅವನು ಹಲವು ವಿವರಗಳಿಗೆ ಸಾಮರಸ್ಯದಿಂದಲೇ ಮನ್ನಣೆಯನ್ನು ನೀಡಿದ್ದಿರಬೇಕೆನಿಸುತ್ತದೆ. ಆದರೆ ಮಾರ್ಗವಲ್ಲದ ಮಾರ್ಗವನ್ನೇ, ಉಪಾಯವಲ್ಲದ ಅನುಪಾಯವನ್ನೇ[37] ಅವನು ಎತ್ತಿಹಿಡಿದದ್ದು ಎಂಬುದು ಅವನ ಮಾತುಗಳಿಂದ ಧ್ವನಿತವಾಗದಿರದು.

ಅಭಿನವನು ತುಂಬ ಆದರಿಸಿದವುಗಳಲ್ಲಿ ಗುರುಪರಂಪರೆಯೂ ಒಂದು. ಗುರುರುಪಾಯ ವನ್ನೂ ಗುರುಭಾರತಿಯನ್ನೂ ಎತ್ತಿಹಿಡಿದವನು, ತನ್ನ ಗುರುಗಳನ್ನು ಅತಿಶಯವಾಗಿ ಕೊಂಡಾಡಿದವನು ಅವನು. ಅಂಥವನೇ ಒಂದೆಡೆ 'ಆಗಮಗಳ ನಿರೂಪಣೆಯವರೆಗಷ್ಟೆ ಗುರುವಿನ ಕೆಲಸ'[38] ಎಂದು ಉದ್ಗರಿಸಿಬಿಡುತ್ತಾನೆ. ಇನ್ನೂ ಮುಂದುವರಿದು, ಎಲ್ಲರೂ ಶಿವಮಯವೇ ಆಗಿರುವಾಗ ಗುರು-ಶಿಷ್ಯ ಎಂಬ ವಿಂಗಡಣೆಗೆ ಎಡೆಯೇ ಇಲ್ಲ;[39] ನಮ್ಮೊಳಗಣ ತತ್ತ್ವಸ್ವರೂಪವೇ ಗುರು—ಎನ್ನುತ್ತ, 'ನಿನಗೆ ನೀನೇ ಗುರು' ಎಂದು ಉಪದೇಶಿಸುತ್ತಾನೆ, ಅಭಿನವ.

ಹೋಮ, ಜಪ, ವ್ರತಗಳೆಂದರೇನು? ಅಭಿನವನೆನ್ನುತ್ತಾನೆ—'ಸರ್ವವೂ ಪರಮೇಶ್ವರನ ಪ್ರಕಾಶಸ್ವರೂಪವೇ ಎಂದು ತಿಳಿದು ಸಮಸ್ತಭಾವಗಳನ್ನೂ ಕರಗಿಸುವುದೇ ಹೋಮ; ಇದಂತಾ-ಅಹಂತಾಗಳ ವಿಮರ್ಶಕ್ಕೆ ಕಾರಣವಾದ ಪರತತ್ತ್ವದ ಸ್ವಾತಂತ್ರ್ಯವೆಂಬ ಪರಮೈಶ್ವರ್ಯ ವನ್ನು ಅರಿತು ಶಿವನ ಸ್ವಾತ್ಮಭಾವವನ್ನು ಅಂತರಂಗದಲ್ಲಿ ಅನುಸಂಧಾನಮಾಡುವುದೇ ಜಪ;

---

36. ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್ ॥ —*ಭಗವದ್ಗೀತಾ, III.26*
(ಕರ್ಮದಲ್ಲಿ ಆಸಕ್ತಿಯುಳ್ಳ ಮೂಢಜನರಿಗೆ ಬುದ್ಧಿಭೇದವನ್ನು ಹುಟ್ಟಿಸಬಾರದು. ಜ್ಞಾನಿಯಾದವನು ಸಮಾಹಿತನಾಗಿ ಸರ್ವಕರ್ಮಗಳನ್ನು ಆಚರಿಸುತ್ತ ಮೂಢಜನರು ಕರ್ಮಗಳನ್ನಾಚರಿಸುವಂತೆ ನೋಡಿಕೊಳ್ಳಬೇಕು.)

37. 'ಲಂಕಾವತಾರಸೂತ್ರ'ದಲ್ಲಿ ಬರುವ ಅನಾಭೋಗಚರ್ಯಾ, ಅನಿಮಿತ್ತಪಥ, ಚಿತ್ತನಿರಾಭಾಸ— ಇವುಗಳೊಂದಿಗೆ ಹೋಲಿಸಿ.

38. ಗುರೋರಾಗಮನಿರೂಪಣೇ ವ್ಯಾಪಾರಃ —*ತಂತ್ರಸಾರ*

39. ಗುರುಶಿಷ್ಯಪದೇ ಸ್ಥಿತ್ವಾ ಸ್ವಯಂ ದೇವಃ ಸದಾಶಿವಃ —*ಪರಾತ್ರೀಶಿಕಾವಿವರಣ*

ಎಲ್ಲಕಾಲದಲ್ಲೂ ಎಲ್ಲೆಲ್ಲೂ ನೆಲಸಿರುವ ಪರಮೇಶ್ವರನನ್ನು ಕಾಣಲು ದೇಹಬುದ್ಧಿಪ್ರಾಣಾದಿಗಳಲ್ಲಿ ಮಾತ್ರವಲ್ಲದೆ ಸಮಸ್ತಚರಾಚರವಸ್ತುಗಳನ್ನೂ ಶಿವನೆಂದೇ ನೋಡುವ ಸರ್ವಸಾಮ್ಯಭಾವವೇ ವ್ರತ.'[40]

ತಂತ್ರಕಲಾಪಗಳಲ್ಲೂ ಅಭಿನವನಿಗೆ ಆಸಕ್ತಿಯಿದ್ದಿತಷ್ಟೆ. ಸುಖವನ್ನು ಒದಗಿಸುವ ವಸ್ತುವಿನೊಂದಿಗೆ ಮನಸ್ಸು ತೇಲಾಡುವಾಗ ಅದನ್ನು ಆ ವಸ್ತುವಿನಿಂದ ಹಿಂದಕ್ಕೆ ಸೆಳೆದು ಶುದ್ಧವಾದ ಆತ್ಮದ ಮೇಲೆ ಏಕಾಗ್ರಗೊಳಿಸುವಷ್ಟು ಅದರ ಮೇಲೆ ನಿಯಂತ್ರಣ ಸಾಧಿಸುವುದೇ ತಂತ್ರದ ರಹಸ್ಯಾರ್ಥವೆನ್ನಬಹುದು. ಅಭಿನವನ ಮಾತುಗಳಲ್ಲೇ ಈ ಸಂದೇಶವಿದೆಯೆನ್ನಿ. ಉದಾಹರಣೆಗೆ, ತಂತ್ರಮಾರ್ಗದ ಮುಖ್ಯವಿವರಗಳಲ್ಲಿ ಒಂದೆನಿಸಿರುವ ಮುದ್ರೆಯನ್ನು ಕುರಿತು ಅವನ ಒಕ್ಕಣೆಯನ್ನೇ ನೋಡಿ—'ಆತ್ಮಾನುಭವವೆಂಬ ಅರಿವಿನಲ್ಲಿರುವ ಯೋಗಿಯ ಶರೀರ ತಳೆಯುವ ಪ್ರತಿ ಭಂಗಿಯೂ ಒಂದು ಮುದ್ರೆಯೇ ಹೌದು.'[41]

'ನಾವು ಸೃಷ್ಟಿಸಿಕೊಳ್ಳುವ ಕೋಟಿ ಉಪಾಯಜಾಲಗಳು ಶಿವನ ದರ್ಶನವನ್ನು ಒದಗಿಸದು'[42], 'ಕೇವಲ ಸತ್ತರ್ಕವಷ್ಟೇ ಶಿವಾನುಭವಕ್ಕೆ ಒದಗಿಬರುವ ಉಪಾಯ'[43] ಎಂದು ಅಂತಿಮವಾಗಿ ಅಭಿನವನು ಮುಕ್ತಕಂಠದಿಂದ ಉದ್ಘೋಷಿಸುತ್ತಾನೆ. ಎಲ್ಲವೂ ಶಿವಮಯವಾಗಿರುವಾಗ ಸಾಧನೆಗಳ ಪ್ರತ್ಯೇಕತೆ ಹೇಗೆ ಉಳಿದೀತು[44] ಎನ್ನುತ್ತಾನೆ ಅವನು.

---

40. ಸರ್ವೇ ಭಾವಾಃ ಪರಮೇಶ್ವರತೇಜೋಮಯಾಃ ಇತಿ ರೂಢವಿಕಲ್ಪಪ್ರಾಪ್ತ್ಯೈ ಪರಮೇಶ ಸಂವಿದನಲತೇಜಸಿ ಸಮಸ್ತಭಾವಗ್ರಾಸರಸಿಕತಾಭಿಮತೇ ತತ್ತೇಜೋಮಾತ್ರಾವಶೇಷತ್ವ ಸಹಸಮಸ್ತ ಭಾವವಿಲಾಪನಂ ಹೋಮಃ। ತಥಾ ಉಭಯಾತ್ಮಕ ಪರಾಮರ್ಶೋದಯಾರ್ಥಂ ಬಾಹ್ಯಾಭ್ಯಂತರಾದಿಪ್ರಮೇಯರೂಪಭಿನ್ನ ಭಾವಾನಪೇಕ್ಷಯ್ಯೈವ ಏವಂ ವಿಧಂ ತತ್ ಪರಂ ತತ್ತ್ವಂ ಸ್ವಸ್ವಭಾವಭೂತಮ್ ಇತಿ ಅಂತಃಪರಾಮರ್ಶನಂ ಜಪಃ । ಸರ್ವತ್ರ ಸರ್ವದಂ ನಿರುಪಾಯ-ಪರಮೇಶ್ವರಾಭಿಮಾನಲಾಭಾಯ, ಪರಮೇಶ್ವರ ಸಮತಾಭಿಮಾನೇನ ದೇಹಸ್ಯಾಪಿ ಘಟಾದೇರಪಿ ಅವಲೋಕನಂ ವ್ರತಮ್ । ಯಥೋಕ್ತಂ ಶ್ರೀನಂದಿಶಿಖಾಯಾಮ್—ಸರ್ವಸಾಮ್ಯಂ ಪರಂ ವ್ರತಮ್ ಇತಿ । —ತಂತ್ರಸಾರ

41. ಕುಲೇ ಯೋಗಿನ ಉದ್ರಿಕ್ತ-
    ಭೈರವೀಯಪರಾಸವಾತ್ ।
    ಘೂರ್ಣಿತಸ್ಯ ಸ್ಥಿತಿರ್ದೇಹೇ
    ಮುದ್ರಾ ಯಾ ಕಾಚಿದೇವ ಸಾ ॥ —ತಂತ್ರಾಲೋಕ

42. ಉಪಾಯಜಾಲಂ ನ ಶಿವಂ ಪ್ರಕಾಶಯೇದ್
    ಘಟೇನ ಕಿಂ ಭಾತಿ ಸಹಸ್ರದೀಧಿತಿಃ ।
    ವಿವೇಚಯನ್ನಿತ್ಥಮುದಾರದರ್ಶನಃ
    ಸ್ವಯಂಪ್ರಕಾಶಂ ಶಿವಮಾವಿಶೇತ್ಕ್ಷಣಾತ್ ॥

43. ಸತ್ತರ್ಕ ಏವ ಸಾಕ್ಷಾತ್ ತತ್ರ ಉಪಾಯಃ —ತಂತ್ರಸಾರ

44. ಜ್ಞಾತೇ ಶಿವತ್ವೇ ಸರ್ವಸ್ಥೇ ಪ್ರತಿಪತ್ತ್ಯಾ ದೃಢಾತ್ಮನಾ ।
    ಕರಣೇನ ನಾಸ್ತಿ ಕೃತ್ಯಂ ಕ್ವಾಪಿ ಭಾವನಯಾಪಿ ವಾ ॥ —ಪರಾತ್ರೀಶಿಕಾವಿವರಣ

(ಇಲ್ಲಿ ಕರಣ-ಭಾವನಗಳೆಂದರೆ ದೈಹಿಕ-ಮಾನಸಿಕವಾದ ಎಲ್ಲ ಸಾಧನ ಪ್ರಕ್ರಿಯೆಗಳು ಎಂದು.)

ಸತ್ತರ್ಕ—ಎಂದರೇನು? ದ್ವೈತಭಾವವನ್ನು ಕಳಚಿ ಬಿಸುಟು, ಶಿವ-ಜಗತ್ತು, ಪತಿ-ಪಶು, ಶಿವ-ಶಕ್ತಿ, ಅಹಂತಾ-ಇದಂತಾಗಳಲ್ಲಿ ಚಂದ್ರ-ಬೆಳುದಿಂಗಳು[45] ಬೇರೆಬೇರೆಯಲ್ಲವೆಂಬಂಥ ಐಕ್ಯಭಾವವನ್ನು ತುಂಬಿಕೊಂಡು, ದಿಟವಾಗಿಯೂ ಇರುವ ತತ್ತ್ವ ಒಂದೇ ಎಂದು ಮನನ ಮಾಡುವುದೇ ಸತ್ತರ್ಕ. ಅಭಿನವ ಇದನ್ನು ಶುದ್ಧವಿದ್ಯೆ ಎಂದೇ ಆದರಿಸಿದ್ದಾನೆ. 'ನಾನು ಕರ್ಮಪಾಶಕ್ಕೆ ಸಿಕ್ಕಿಬಿದ್ದಿರುವ ಜಡ, ಸಂಸಾರದಲ್ಲಿ ಮಲಿನವಾಗಿಬಿಟ್ಟಿರುವ ಪಶು, ನನ್ನ ಅಸ್ತಿತ್ವ ಬೇರೆಯವರನ್ನು ಆಶ್ರಯಿಸಿದೆ' ಮುಂತಾದ ಭ್ರಾಂತಿಗಳನ್ನು ಕಿತ್ತೆಸೆದು, 'ನಾನು ಶುದ್ಧಚೈತನ್ಯಾತ್ಮ' ಎಂಬ ದೃಢಭಾವವನ್ನು ತಳೆದ ತತ್‌ಕ್ಷಣವೇ ನಾವು ಶಿವತ್ವದಲ್ಲಿ ಒಂದಾಗಿರುತ್ತೇವೆ[46] ಎಂದು ಶಿವಾನುಭವದ ಗುಟ್ಟನ್ನು ಸ್ಫೋಟಗೊಳಿಸಿದ್ದಾನೆ:

---

45. ಶಿವ-ಶಕ್ತಿತತ್ತ್ವಗಳ ಅಭೇದವನ್ನು ನಿರ್ದೇಶಿಸಲು ಸಾಮಾನ್ಯವಾಗಿ ಚಂದ್ರ-ಚಂದ್ರಿಕಾನ್ಯಾಯವನ್ನು ಬಳಸುವುದುಂಟು. ಚಂದ್ರ ಮತ್ತು ಬೆಳುದಿಂಗಳು ಬೇರೆ ಬೇರೆಯಲ್ಲ; ಚಂದ್ರನ ಸ್ವರೂಪವೇ ಬೆಳುದಿಂಗಳು; ಅದು ಚಂದ್ರನಿಂದ ಭಿನ್ನವಾದ ಮತ್ತೊಂದು ಪ್ರತ್ಯೇಕವಿವರವಲ್ಲವಷ್ಟೆ ಎನ್ನುವುದು ಈ ನ್ಯಾಯದ ತಾತ್ಪರ್ಯ. ಹೀಗೆಯೇ, ಶಿವ-ಶಕ್ತಿತತ್ತ್ವಗಳ ಅದ್ವೈತವನ್ನು ಎತ್ತಿಹಿಡಿಯುವುದು ಈ ಮಾತಿನ ತಾತ್ಪರ್ಯ.

ಶಕ್ತಿ ಎನ್ನುವುದು ಶಿವನ ಕ್ರಿಯಾಸ್ವರೂಪ; ಶಿವನ ಈ ಸ್ವಾತಂತ್ರ್ಯವನ್ನು ಪರಾವಾಕ್, ವಿಮರ್ಶೆ, ಐಶ್ವರ್ಯ ಮುಂತಾದ ಹೆಸರುಗಳಿಂದಲೂ ನಿರ್ದೇಶಿಸುವುದುಂಟು. ತನ್ನ ಹೃದಯದಲ್ಲಿ ಸ್ಥಿತವಾಗಿರುವ ಇಡಿಯ ವಿಶ್ವವನ್ನು ಹೊರತೋರುವ ಶಿವನ ಬಯಕೆಯೇ ಶಕ್ತಿ. 'ತದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್ । ....ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ...' (ಇದು ಮೊದಲು ಎರಡನೆಯಲ್ಲದ ಒಂದೇ ಆದ ಸತ್ತೇ ಆಗಿದ್ದಿತು... ಅದು 'ಬಹುವಾಗುವೆನು, ಹುಟ್ಟುವೆನು' ಎಂದು ಯೋಚಿಸಿತು—*ಛಾಂದೋಗ್ಯೋಪನಿಷತ್ತು, 6.2, 1-3*); 'ಸ ಚ ಭಗವಾನ್ ಜ್ಞಾನೈಶ್ವರ್ಯಶಕ್ತಿ-ಬಲ-ವೀರ್ಯ-ತೇಜೋಭಿಃ ಸದಾಸಂಪನ್ನಃ....' (ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸುಗಳಿಂದ ಯಾವಾಗಲೂ ಸಹಿತನೇ ಆಗಿರುವ ಭಗವಂತನು— *ಭಗವದ್ಗೀತಾಶಾಂಕರಭಾಷ್ಯ*, ಉಪೋದ್ಘಾತ)—ಮುಂತಾದ ಮಾತುಗಳನ್ನು ಇಲ್ಲಿ ಗಮನಿಸಬಹುದು.

46. ನೋಡಿ: "What is the method of liberation?" asked Tao-hsin.
"Who binds you?" replied Seng-ts'an.
"No one binds me."
"Why then," asked Seng-t'san, "should you seek liberation?"
And this was Tao-hsin's enlightnment.

—*The way of Zen,* Alan watts, 1989

"Simple people conceive that we are to see God as if He stood on that side and we on this. It is not so; God and I are one in the act of my perceiving Him."

—Eckhart

(ಮುಂದಿನ ಪುಟಕ್ಕೆ...,)

ಯೋ ನಿಶ್ಚಯಃ ಪಶುಜನಸ್ಯ ಜಡೋऽಸ್ಮಿ ಕರ್ಮ-
ಸಂಪಾಶಿತೋऽಸ್ಮಿ ಮಲಿನೋऽಸ್ಮಿ ಪರೇರಿತೋऽಸ್ಮಿ
ಇತ್ಯೇತದನ್ಯದೃಢನಿಶ್ಚಯಲಾಭಸಿದ್ಧ್ಯಾ
ಸದ್ಯಃ ಪತಿರ್ಭವತಿ ವಿಶ್ವವಪುಶ್ಚಿದಾತ್ಮಾ ॥ *(ತಂತ್ರಸಾರ, 4)*

ಮುಕ್ತಿಯಿಂದ ದೊರೆಯುವ ಫಲವಾದರೂ ಏನು? ಮೂಡುವ ಕೋಡುಗಳಾದರೂ ಎಂಥವು? ಅಭಿನವನೆನ್ನುತ್ತಾನೆ—'ಯಾವುದೇ ಅಪೂರ್ವವಿವರಗಳನ್ನು ನಾವು ಮುಕ್ತಿಯ ದೆಸೆಯಿಂದ ಪಡೆಯಲಾರೆವು; ಪ್ರಕಾಶದ ಪ್ರಕಾಶತತ್ತ್ವ ನಮ್ಮಲ್ಲಿ ಸ್ಥಿರವಾಗುತ್ತದೆಯಷ್ಟೆ.'[47]

(ಹಿಂದಿನ ಪುಟದಿಂದ)

''Self is not to be attained because you are the self..... *Mukti* is synonymous with self. *Jivanmukti* and *videhamukti* are all for the ignorant. The *jnani* is not conscious of *mukti* or *bandha*. Bondage, liberation and orders of *mukti* are all said for an *ajnani* in order that ignorance might be shaken off. There is only *mukti* and nothing else.''

—Talks with Sri Ramana Maharshi, p. 221, 1972

47. ನ ತು ಕಿಂಚಿದಪೂರ್ವಂ ಕ್ರಿಯತೇ, ನಾಪಿ ತತ್ತ್ವತೋऽಪ್ರಕಾಶಮಾನಂ ಪ್ರಕಾಶತೇ, ಪ್ರಕಾಶಮಾನ ಏವ ಯತ್ 'ನ ಪ್ರಕಾಶತೇ' ಇತ್ಯಭಿಮಾನಂ ತದಪಸಾರ್ಯತೇ

—ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ

ಹೋಲಿಸಿ: ''Before I had studied Zen for thirty years, I saw mountains as mountains, and waters as waters. When I arrived at a more intimate knowledge, I came to the point where I saw the mountains are not mountains, and waters are not waters. But now that I have got its very substance. I am at rest. For it's just that I see mountains once again as mountains, and waters once again as waters.

— Ching-Yuan

ನ ಚ ಪರಪ್ರಾಪ್ತೇರವಗಮಾರ್ಥಸ್ಯ (ಚ) ಭೇದೋऽಸ್ತಿ ।
ಅವಿದ್ಯಾಯಾ ಅಪಾಯ ಏವ ಹಿ ಪರಪ್ರಾಪ್ತಿರ್ವಾರ್ಥಾಂತರಮ್ ॥

—ಮುಂಡಕೋಪನಿಷತ್ ಶಾಂಕರಭಾಷ್ಯ, 1.5

(ಪರವಸ್ತುವಿನ ಪ್ರಾಪ್ತಿಯೆಂಬುದಕ್ಕೂ ಪರವಸ್ತುವಿನ ಜ್ಞಾನ ಎಂಬುದಕ್ಕೂ ಭೇದವಿಲ್ಲ. ಅವಿದ್ಯೆಯ ತೊಲಗುವಿಕೆಯೇ ಪರಪ್ರಾಪ್ತಿಯಲ್ಲದೆ ಬೇರೆಯಲ್ಲ.)

ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥ *—ಗೌಡಪಾದಕಾರಿಕಾ, 2·32)*

(ಪ್ರಲಯವೂ ಇಲ್ಲ; ಸೃಷ್ಟಿಯೂ ಇಲ್ಲ; ಸಂಸಾರಿಯಾದ ಜೀವನಿಲ್ಲ; ಮೋಕ್ಷಾಪೇಕ್ಷಿಯೂ ಇಲ್ಲ; ಮುಕ್ತನೂ ಇಲ್ಲ—ಇದೇ ಪರಮಾರ್ಥಸತ್ಯ.)

ಅವಿದ್ಯಾಪಗಮಮಾತ್ರತ್ವಾನ್ ಬ್ರಹ್ಮಪ್ರಾಪ್ತಿಫಲಸ್ಯ । *—ಬೃಹದಾರಣ್ಯಕ ಶಾಂಕರಭಾಷ್ಯ, 1.4.10*

(ಬ್ರಹ್ಮಪ್ರಾಪ್ತಿಫಲ ಎಂದರೆ ಅವಿದ್ಯೆಯು ತೊಲಗುವುದೇ ಹೊರತು ಮತ್ತೇನೂ ಅಲ್ಲ.)

ಈ ಪ್ರಕಾಶತತ್ತ್ವದ ಸ್ವರೂಪವಾದರೂ ಎಂಥದು? ಸ್ವಪ್ರಕಾಶತತ್ತ್ವವನ್ನು ನಿರೂಪಿಸಿರುವ ಅಭಿನವನ ವೈಖರಿಯ ಪರಾಪ್ರತಿಭೆಯನ್ನು ನಾವು ಇಲ್ಲಿ ಆಸ್ವಾದಿಸಬಹುದು. ಇದು ಸಿದ್ಧನೊಬ್ಬನ ಅನುಭಾವಗೀತೆಯೇ ಹೌದು:

ಸಂಸಾರೋಽಸ್ತಿ ನ ತತ್ತ್ವತಸ್ತನುಭೃತಾಂ ಬಂಧಸ್ಯ ವಾರ್ತೈವ ಕಾ
ಬಂಧೋ ಯಸ್ಯ ನ ಜಾತು ತಸ್ಯ ವಿತಥಾ ಮುಕ್ತಸ್ಯ ಮುಕ್ತಕ್ರಿಯಾ ।
ಮಿಥ್ಯಾಮೋಹಕೃದೇಷ ರಜ್ಜುಭುಜಗಚ್ಛಾಯಾಪಿಶಾಚಭ್ರಮೋ[48]
ಮಾಂ ಕಿಂಚಿತ್ತ್ಯಜ ಮಾ ಗೃಹಾಣ ವಿರಮ ಸ್ವಸ್ಥೋ ಯಥಾವಸ್ಥಿತಃ॥[49]

(ತಂತ್ರಾಲೋಕ)

'ಈ ವ್ಯಾವಹಾರಿಕಜಗತ್ತು ದಿಟವಾಗಿಯೂ ಒಂದು ತೋರಿಕೆಯಷ್ಟೆ; ಹೀಗಿರುವಾಗ ಜೀವಿಗಳಿಗೆ ಬಂಧದ ಮಾತಾದರೂ ಎಲ್ಲಿಯದು? ಬಂಧವೇ ಇಲ್ಲದವನಿಗೆ ಮುಕ್ತಿಯೂ ಇರಲಾರದಷ್ಟೆ; ಏಕೆಂದರೆ ಈ ಎರಡೂ ಕೂಡ—ಹಗ್ಗದಲ್ಲಿ ಹಾವಿನ ತೋರಿಕೆಯನ್ನು ಕಾಣುವ ಪಿಶಾಚದಂಥ ಭ್ರಾಂತಿಜನ್ಯವೇ ಹೌದು. ಆದುದರಿಂದ, ಏನನ್ನೂ ಬಿಡದಿರು! ಏನನ್ನೂ ಹಿಡಿಯದಿರು! ನಿನ್ನ ಸ್ವರೂಪದಲ್ಲಿ ನೀನು ವಿರಮಿಸು!'

ಇದು ಅಭಿನವನ ಮಹಾನುಭವದ ಮಹಾವಾಕ್ಯ. ಅನುಭವದ ಕಿರಣಗಳು ಅರಳಿಸಿರುವ ಹೃದಯಕಮಲದ ಮಹಾದರ್ಶನವೇ ಇಲ್ಲಿ ಶಬ್ದರೂಪದಲ್ಲಿ ಮೈದಾಳಿದೆ.

ಮಾತುಗಳ ಮೂಲಕ ದರ್ಶನವೊಂದನ್ನು ನಮ್ಮದಾಗಿಸಿಕೊಳ್ಳುವುದು ಸುಲಭವೇನಲ್ಲ. ಶಬ್ದಗಳೇ ಸತ್ಯವಲ್ಲ; ಅವು ಸತ್ಯವನ್ನು ಕುರಿತ ವಿವರಣೆಗಳಷ್ಟೆ. ಸತ್ಯದ ಶರೀರವಷ್ಟೆ ಶಬ್ದ; ಅದರ ಆತ್ಮ ನಮ್ಮ ಅಂತರಂಗವೇ. ಅನುಭವಕ್ಕೆ ಶಬ್ದ ಎಂದಿಗೂ ಪ್ರತಿವಸ್ತುವಾಗಿ

---

48. ನ ಹಿ ರಜ್ಜ್ವಾದೀನಾಮವಿದ್ಯಾಸ್ವಭಾವವ್ಯತಿರೇಕೇಣ ಸರ್ಪಾದ್ಯಾಭಾಸತ್ವೇ ಕಾರಣಂ ಶಕ್ಯಂ ವಕ್ತುಮ್ ॥
—ಮಾಂಡೂಕ್ಯಕಾರಿಕಾಶಾಂಕರಭಾಷ್ಯ 1.9

49. The Perfect Way knows no difficulties
Except that it refuses to make preference:
Only when freed from hate and love,
It reveals itself fully and without disguise.

A Tenth of an inch's difference,
And heaven and earth are set apart:
If you want to see it manifest,
Take no thought either for or against it.

—Seng-ts'an

ನಿಲ್ಲಲಾರದು.[50] ಮಾತ್ರವಲ್ಲ, ಬೆಳಕು ಒಂದು ಮಾಧ್ಯಮದಿಂದ ಮತ್ತೊಂದು ಮಾಧ್ಯಮಕ್ಕೆ ಪಯಣಿಸುವಾಗ ವಕ್ರೀಭವನಕ್ರಿಯೆ ಅನಿವಾರ್ಯ ಕೂಡ. ಹೀಗಾಗಿ ದಾರ್ಶನಿಕರಲ್ಲೂ ನಮ್ಮ ತರ್ಕಕ್ಕೆ[51] ಪರಸ್ಪರವಿರೋಧವಾಗಿ ಕಾಣುವಂಥ ಸೂಕ್ತಿಗಳು ತೋರಿಕೊಂಡು ಗಲಿಬಿಲಿಗೊಳಿಸುವುದೂ ಆಶ್ಚರ್ಯವೇನಲ್ಲ; ಇಲ್ಲಿ ನಮ್ಮ ವಾಸನೆಗಳ ಪಾತ್ರವನ್ನು ತಳ್ಳಿಹಾಕಲಾಗದೆನ್ನಿ. ಆದರೆ ಸಾಂಗತ್ಯ-ಸಾಮರಸ್ಯಗಳ ಕಾವಿದ್ದರೆ ಒಳಗಣ ಶಾಂತಭಾವಕ್ಕೆ ಆತಂಕವೇನಿರದು. ಯೋಗಿಗಳ, ಅನುಭಾವಿಗಳ, ದಾರ್ಶನಿಕರ ಕಾಣ್ಕೆ ನಮ್ಮ ಪಾಲಿಗೆ ಕೇವಲ ಒಂದು ಶಾಬ್ದಿಕವ್ಯವಹಾರವಾಗದಿರಲಿ; ದರ್ಶನಾನಂದಕ್ಕೆ ಅಡ್ಡಿಯೆಸಗುವ ವಿಘ್ನಸಂತತಿಯಲ್ಲಿ ಈ ವ್ಯಾಪಾರವೇ ಅತ್ಯಂತ ಅಪಾಯಕಾರಿಯಾದದ್ದು. ದ್ರಷ್ಟಾರರ ದರ್ಶನಫಲವನ್ನು ಸಿದ್ಧಾಂತಗಳ ಕಪಿಮುಷ್ಟಿಯಲ್ಲಿ ಹಿಂಡಿ, ಪೂರ್ವಗ್ರಹಗಳ ವಕ್ರನಖಗಳಲ್ಲಿ ಸೀಳಿ, ವಾದ-ವಿವಾದಗಳಲ್ಲಿ ಅರೆಯುವುದರಿಂದ ನಮಗೆ ಉಳಿಯುವ ರಸವಾದರೂ ಎಷ್ಟು?[52] ಋಷಿಗಳ ಮಾತುಗಳನ್ನು ಅನುಭವದಲ್ಲಿ ತುಂಬಿಕೊಂಡಾಗ ಇವುಗಳಲ್ಲಿ ಅಡಗಿರುವ ಧ್ವನಿಯೂ ತನ್ನ ಗುಟ್ಟನ್ನು ಬಿಟ್ಟುಕೊಟ್ಟೀತು, ರಸವೂ ಸ್ಫುರಿಸೀತು, ಆನಂದವೂ ನೆಲಸೀತು. ಇಂಥ ಸಾಧನೆಗೆ ಪ್ರಕೃತಕೃತಿ ಒಂದು ಉಪಾಯವಾಗಲಿ, ನಮ್ಮೊಳಗಣ ಅರಿವಿನ ಇರವನ್ನು 'ಅಭಿನವಗುಪ್ತ' ನೆನಪಿಸಿಕೊಟ್ಟು ಜಗದಾನಂದವು ನಿತ್ಯೋದಿತವಾಗಲಿ—ಎಂಬುದು ಅಭಿಜ್ಞಾನದ ಹಾರೈಕೆ. ಶಕ್ತಿಪಾತದಿಂದಲೋ ಗುರುವಿನ ಉಪದೇಶದಿಂದಲೋ ಯಾವುದಾದರೂ ಉಪಾಯದಿಂದಲೋ ಅನುಪಾಯದಿಂದಲೋ ಹೇಗಾದರೂ ಸರಿಯೇ,

---

50. The Wisdom of Sages is not in their teachings; otherwise anybody might become a sage simply by reading the Bhagavad-Gita, The Dialogues of Plato or the Buddhist Scriptures.

—Alan Watts, *The Spirit of Zen*, 1991

51. ಅತರ್ಕ್ಯಮ್ ಅತರ್ಕ್ಯಃ, ಸ್ವಬುದ್ಧ್ಯಭ್ಯೂಹೇನ ಕೇವಲೇನ ತರ್ಕೇಣ ।

—ಕಾಠಕೋಪನಿಷತ್ತು, ಶಾಂಕರಭಾಷ್ಯ, 1.2.8

(ತನ್ನ ಬುದ್ಧಿಯಿಂದಲೇ, ಅನುಭವದ ಆಧಾರವಿಲ್ಲದೆ, ಅಭಿಮಾನದಿಂದ ಊಹಿಸುವ ಬರಿಯ ತರ್ಕಕ್ಕೆ (ಆತ್ಮನು) ತಕ್ಕವನೇ ಅಲ್ಲ.)

52. A wise man will see Nirvana at once in the ordinary things of life; a fool will philosophize about it and think of it as something else.

—Alan watts, *Op.cit.*

ಎಲ್ಲೆಲ್ಲೂ ಎಲ್ಲರಲ್ಲೂ ಎಲ್ಲಕಾಲಕ್ಕೂ ನೆಲಸಿರುವ ಶಿವನನ್ನು ಕಾಣಬಲ್ಲ ಅನುತ್ತರಸಿದ್ಧಿಯ ಅನುಗ್ರಹ[53] ಎಲ್ಲರಿಗೂ ಒದಗಲಿ.

ವಸ್ತುತಃ ಶಿವಮಯೇ ಹೃದಿ ಸ್ಫುಟಂ
ಸರ್ವತಃ ಶಿವಮಯಂ ವಿರಾಜತೇ ।[54]
(ದಿಟವಾಗಿ ಹೃದಯ ಶಿವಮಯವಾಗೆ, ಎತ್ತಲೂ
ಸ್ಫುಟವಾಗಿ ಶಿವಮಯವೆ ಹೊಳೆಹೊಳೆವುದು!)

16.5.2003 — ಎಸ್. ಸೂರ್ಯಪ್ರಕಾಶ ಪಂಡಿತ್
ಬುದ್ಧಪೂರ್ಣಿಮಾ ಸಂಪಾದಕ

53. ಅನುಗ್ರಹ ಎಂಬುದು ಎಲ್ಲರಿಗೂ ಎಲ್ಲ ಕಾಲಕ್ಕೂ ದೊರೆಯುವ ವಿವರವೇ ಎಂದು ಅಭಿನವಗುಪ್ತನೇ ಒಕ್ಕಣಿಸಿದ್ದಾನೆ: 'ಅನುಗ್ರಹಶಕ್ತಿಃ ಸತತಂ ಸರ್ವಪ್ರಮಾತೃಷು ಅನಸ್ತಮಿತೈವ ಇತಿ ।'
—*ಪರಾತ್ರೀಶಿಕಾವಿವರಣ*

54. ಲೋಚನದ ಕೊನೆಯ ಪದ್ಯ; ಅನುವಾದ ತೀನಂಶ್ರೀ ಅವರದ್ದು.

ಮೊದಲ ಮಾತು

ಅಭಿನವಗುಪ್ತರನ್ನು ಕುರಿತು ಸಂಗ್ರಹವಾಗಿ ಬರೆಯುವುದು ಕಷ್ಟ. ಅವರು ಕಾಶ್ಮೀರಶೈವದರ್ಶನದ, ಅದರಲ್ಲೂ ಪ್ರತ್ಯಭಿಜ್ಞಾಶಾಸ್ತ್ರದ, ಪ್ರತಿಪಾದಕರೆಂದು ಪ್ರಸಿದ್ಧರಾಗಿದ್ದರೂ ಅವರದ್ದು ಬಹುಮುಖವಾದ ಪ್ರತಿಭೆ. ನಾಡಿನ ಎಲ್ಲ ಶಾಸ್ತ್ರ, ಕಲೆ, ಸಾಹಿತ್ಯದ ಮೇಲೂ ಅವರ ಪ್ರಭಾವ ನೇರವಾಗಿಯೋ ಬಳಸಾಗಿಯೋ ಮೂಡಿಕೊಂಡೇ ಇದೆ. ಮತ್ತೆ, ಅವರ ಹಲವಾರು ಗ್ರಂಥಗಳಲ್ಲಿ ಒದಗಿಬಂದಿರುವ ಧ್ವನಿ ವಿಶಿಷ್ಟವಾದೊಂದು ದಾರ್ಶನಿಕಪ್ರಕಾರವನ್ನೇ ಸೃಷ್ಟಿಮಾಡ ಬಲ್ಲುದು. ಅವರ ವೈದುಷ್ಯಕ್ಕೆ ಸರಿತೂಗುವಂಥ ತಪಸ್ಸು; ತಪಸ್ಸಿಗೆ ಸರಿದೂಗುವ ಪ್ರತಿಭೆ. ಕಲ್ಪನಾಸಾಮರ್ಥ್ಯದೊಂದಿಗೆ ಅನುಪಮವಾದ ಭಾವುಕತೆ. ಉಕ್ತಿಯಲ್ಲಿ ವೈಚಿತ್ರ್ಯವೂ ಇದೆ, ವೈಭವವೂ ಇದೆ. ಇವೆಲ್ಲವನ್ನೂ ತಿಳಿಯ ಹೇಳುವ ಬರಹವಾದರೆ ಸರಿ; ಆದರೆ ಆ ವ್ಯುತ್ಪತ್ತಿಯಿರುವವರು ಎಷ್ಟು ಮಂದಿ ಇದ್ದಾರೆ? ಅಭಿನವಗುಪ್ತಪಾದರ ಬಗ್ಗೆ ಈವರೆಗೆ ಬಂದಿರುವ ಬರವಣಿಗೆಯಲ್ಲಿ ಅವರ ಸಮಗ್ರದರ್ಶನ ವಾಗುವುದಿಲ್ಲ. ಅದನ್ನು ಮಾಡಿಕೊಡುವ ಸಾಹಸ ನಾನು ಮಾಡಲಾರೆ. ಅವರನ್ನು ಕುರಿತಂತೆ ಓದುಗರ ಆಸಕ್ತಿ ಒದಗಿ ಬಂದರೆ, ಅಷ್ಟಕ್ಕೇ ನಾನು ಧನ್ಯ!

ಕಾಶ್ಮೀರಶೈವದರ್ಶನದ ಮೂಲಪ್ರಸ್ಥಾನವೆನಿಸಿದ ಶಿವಸೂತ್ರಗಳನ್ನು ನಾನು ಕೆಲಮಂದಿ ಸಹೃದಯಮಿತ್ರರಿಗೆ ಅಧ್ಯಾಪನಮಾಡುವ ವೇಳೆ, ನನ್ನ ಮಿತ್ರರು ಶ್ರೀ ಸೂರ್ಯಪ್ರಕಾಶ ಪಂಡಿತರೂ ಈ ಗೋಷ್ಠಿಯಲ್ಲಿ ಸೇರಿದ್ದವರು, ಅಭಿನವಗುಪ್ತರನ್ನು ಕುರಿತಂತೆ ಬರಹವೊಂದನ್ನು ತಮ್ಮ ಪ್ರಕಾಶನಸಂಸ್ಥೆಗಾಗಿ ಸಿದ್ಧಪಡಿಸಿಕೊಡಲು ಕೇಳಿದರು. ಅವರ ಒತ್ತಾಯಕ್ಕೆ ಮಣಿದು ಈ ಕಿರುಹೊತ್ತಿಗೆಯನ್ನು ಸಿದ್ಧಪಡಿಸಿದ್ದೇನೆ. ಅದನ್ನು ಹೊರತರುವ ಹಂಬಲ ಅವರದ್ದು; ಅದಕ್ಕಾಗಿ ನಾನು ಅವರಿಗೆ ಋಣಿ.

ಸಾ. ಕೃ. ರಾಮಚಂದ್ರರಾವ್

- 1 -

'ಕೃತಿಸಂಪ್ರವೇಶಃ'

ನಮ್ಮ ದೇಶದಲ್ಲಿ ನಡುಯುಗದಲ್ಲಿ ತೋರಿಕೊಂಡ ಮೇಧಾವಿಗಳ ಸಾಲಿನಲ್ಲಿ ಮೊದಲಿಗೇ ನೆನೆಯಬೇಕಾದ ಕೆಲವರಲ್ಲಿ ಅಭಿನವಗುಪ್ತ (ಕ್ರಿಸ್ತಾಬ್ದ ಹತ್ತನೆಯ ಶತಮಾನದಲ್ಲಿದ್ದವನು) ಸೇರುತ್ತಾನೆ; ಕುಮಾರಿಲಭಟ್ಟ, ಧರ್ಮಕೀರ್ತಿ, ದಿಙ್ನಾಗ, ಗೌಡಪಾದ, ಭರ್ತೃಹರಿ, ಕಾಳಿದಾಸ, ಶಂಕರಾಚಾರ್ಯರು ಮೊದಲಾದವರ ನಡುವೆ ತಲೆಯೆತ್ತಿ ನಿಲ್ಲಬಲ್ಲವನು. ತನ್ನ ಬರಹಗಳಿಂದ ಸಂಸ್ಕೃತಸಾಹಿತ್ಯದಲ್ಲಿ ಹೊಸದೊಂದು ಕಳೆಯನ್ನು ಮೂಡಿಸಿದವನು, ಹೊಸದೊಂದು ಪ್ರೇರಣೆಯನ್ನು ಒದಗಿಸಿದವನು. ಎಲ್ಲ ವಿದ್ವಾಂಸರ ವಿಸ್ಮಯಕ್ಕೆ ಕಾರಣವಾಗುವಂಥ ಬಹುಮುಖ ಪ್ರತಿಭೆ ಅವನದ್ದು. ಕವಿ, ವಿಮರ್ಶಕ, ವ್ಯಾಖ್ಯಾನಕಾರ, ದಾರ್ಶನಿಕ, ದ್ರಷ್ಟಾರ, ಆಲಂಕಾರಿಕ, ಭಾವುಕ, ಅನುಭಾವಿ, ಗಾಯಕ, ಯೋಗಿ, ಸಂತ, ಸಿದ್ಧ. ಅವನ ಸಾರಸ್ವತವ್ಯವಸಾಯ ಅನನ್ಯಸಾಧಾರಣವಾದುದು; ಬಹುಶ್ರುತತ್ವಕ್ಕೆ ಅವನಿಗಿಂತ ಮಿಗಿಲಾದ ಇನ್ನೊಬ್ಬನ ನಿದರ್ಶನ ಸಿಗಲಾರದು. ಗುರೂಪದೇಶದಿಂದ, ಶಾಸ್ತ್ರಾಧ್ಯಯನದಿಂದ, ಸಾಧನೆಯ ಕಾವಿನಿಂದ, ಅನುಭವದಿಂದ ಅವನು ಪಡೆದುಕೊಂಡ ಸಿದ್ಧಿಯ ಬೆಳಕಿನ ತುಣುಕುಗಳು ಅವನ ಬರಹಗಳಲ್ಲಿ ಧಾರಾಳವಾಗಿ ಕಾಣಿಸಿಕೊಳ್ಳುತ್ತವೆ.

ಕ್ರಿಸ್ತಾಬ್ದ ಮೊದಲನೆಯ ಶತಕದ ಸುಮಾರಿಗೆ ಮೈದುಂಬಿ ಬಂದ ಭರತಮುನಿಯ ನಾಟ್ಯಶಾಸ್ತ್ರ ನಾಡಿನ ಕಲಾಪ್ರಪಂಚದಲ್ಲಿ ಹೆದ್ದಾರಿಯೊಂದನ್ನು ತೋರಿಕೊಟ್ಟಿತಷ್ಟೆ? ಅದಕ್ಕೆ ವಿಸ್ತೃತವಾದ, ವಿಮರ್ಶಾತ್ಮಕವಾದ, ವೈದುಷ್ಯಪೂರ್ಣವಾದ ವ್ಯಾಖ್ಯಾನವನ್ನು (ಅಭಿನವ ಭಾರತೀ) ಬರೆದು ನಾಟ್ಯಶಾಸ್ತ್ರದ ನೆಲೆ-ನಿಲುವುಗಳನ್ನು ಸ್ಪಷ್ಟಪಡಿಸಿದವನು ಅಭಿನವಗುಪ್ತನೇ. ಹೀಗೆ ಮಾಡುವಲ್ಲಿ ರಸಸಿದ್ಧಾಂತವನ್ನು ಬೇರೂರಿಸಿದವನೂ ಅವನೇ. ಅವನ ಶಿಷ್ಯರಲ್ಲಿ ಒಬ್ಬನಾದ ಮಧುರಾಜನು ತನ್ನ 'ಗುರುನಾಥಪರಾಮರ್ಶ'ದಲ್ಲಿ ಇದನ್ನು ಹೀಗೆ ಉಲ್ಲೇಖಿಸಿದ್ದಾನೆ—

ಷಟ್‌ತ್ರಿಂಶದಾಹ್ನಿಕಮಿತಂ ಭರತೋಕ್ತನಾಟ್ಯ-
ವೇದಂ ರಸೈರುಪಚಿತಂ ನವಭಿರ್ವಿವೃಣ್ವನ್ ।
ಯೋ ಭಾರತೀಮಭಿನವಾಂ ರಚಯಾಂಚಕಾರ
ತಸ್ಮೈ ನಮೋಽಭಿನವಗುಪ್ತಗುರೂತ್ತಮಯ ॥



ಮೂವತ್ತಾರು (ವಾಸ್ತವವಾಗಿ ಮೂವತ್ತೇಳು) ಆಹ್ನಿಕಗಳುಳ್ಳ ಈ ಅಭಿನವಭಾರತಿಯು ಒಂದು ಸಾವಿರಕ್ಕೆ ಮೀರಿದ ವರ್ಷಗಳಿಂದಲೂ ಅಭಿನವವಾಗಿಯೇ ಉಳಿದಿದೆ. ಅದರ ಪ್ರಸ್ತುತತೆ, ಸ್ವಾರಸ್ಯ, ಸೌಂದರ್ಯಗಳು ಇಂದಿಗೂ ಇನಿತಾಗಲಿ ಕುಂದದೆ ನಿಂತಿವೆ. ಅಭಿನವಗುಪ್ತನ ಹೆಸರು ಉಳಿದಿರುವುದೂ ಇದರಿಂದಲೇ ಎನ್ನಬಹುದು. ಜೊತೆಗೆ ತನಗೆ ಪೂರ್ವಸೂರಿಯಾಗಿದ್ದ ಆನಂದವರ್ಧನನ 'ಧ್ವನ್ಯಾಲೋಕ'ಕ್ಕೆ ವ್ಯಾಖ್ಯಾನವೊಂದನ್ನು (ಲೋಚನ) ರಚಿಸಿ ಅಲಂಕಾರಶಾಸ್ತ್ರಕ್ಷೇತ್ರದಲ್ಲಿ ರಸಸಿದ್ಧಾಂತ-ಧ್ವನಿಪ್ರಸ್ಥಾನಗಳ ಸಮರ್ಥನೆ, ಪ್ರಸಾರಗಳಿಗೆ ಕಾರಣನಾದವನು. ಬೆಳದಿಂಗಳಿದ್ದೇನು? ಕಣ್ಣರದಿದ್ದರೆ ಲೋಕ ಬೆಳಗುವುದೆಂತು? ಕಣ್ಣನ್ನು ತೆರೆಯಿಸುವ ಕೆಲಸ ತನ್ನಿಂದಾಯಿತೆಂದು ಅವನೇ ಹೇಳಿಕೊಂಡಿದ್ದಾನೆ—

ಕಿಂ ಲೋಚನಂ ವಿನಾ ಲೋಕೋ
ಭಾತಿ ಚಂದ್ರಿಕಯಾಪಿ ಹಿ ।
ತೇನಾಭಿನವಗುಪ್ತೇನ ಲೋಚನೋ-
ನ್ಮೀಲನಂ ವ್ಯಧಾತ್ ॥

ಇನ್ನು, ಅಭಿನವಗುಪ್ತನ ಹೆಸರು ಉಳಿದಿರುವುದು ಕಾಶ್ಮೀರಶೈವದರ್ಶನಪರವಾದ ಅವನ ಗ್ರಂಥಗಳಿಂದ. ತುಂಬ ಪ್ರಾಚೀನಕಾಲದಲ್ಲಿ 'ನಿಃಶೇಷಶಾಸ್ತ್ರಸದನ'ವೆಂದು ಪ್ರಸಿದ್ಧವಾಗಿದ್ದ ಮಧ್ಯದೇಶದಲ್ಲಿ ಚಿಗುರೊಡೆದು ನಾಡಿನ ಎಲ್ಲೆಡೆ ಹರಡಿಕೊಂಡ ಶೈವದರ್ಶನವು ಇಲ್ಲಿಗೆ ಬಂದು ಕ್ರಿಸ್ತಾಬ್ದ ಮೂರು-ನಾಲ್ಕನೆಯ ಶತಮಾನದ ಸುಮಾರಿಗೆ ಕಾಶ್ಮೀರಶೈವಸಂಪ್ರದಾಯ ವಾಗಿ ನೆಲೆಗೊಂಡಿತಷ್ಟೆ? ಕ್ರಮ, ಕುಲ, ತ್ರಿಕಗಳೆಂಬ ಹೆಸರುಗಳಿಂದ ಇದು ಈ ಕಡೆ ಬಳಕೆಗೆ ಬಂದಿತು. ಈ ಶೈವ ಉಪಪ್ರಸ್ಥಾನವನ್ನು ಗುರುಕ್ರಮದಿಂದ, ಆಗಮಾನ್ವೇಷಣೆಯಿಂದ, ಭೈರವಸಾಧನೆಯಿಂದ, ಲೋಕೋತ್ತರ ಅನುಭವದಿಂದ, ಕಾಶ್ಮೀರಪ್ರಾಂತ್ಯದಲ್ಲೂ ನೆರೆನಾಡು ಗಳಲ್ಲೂ ಪ್ರಚಾರಕ್ಕೆ ತಂದವನು ಅಭಿನವಗುಪ್ತ. ಅವನ ಬರಹಗಳಲ್ಲಿ ಬಹುಪಾಲು ಈ ದರ್ಶನಸಂಪ್ರದಾಯವನ್ನು ಉಳಿಸಿ ಬೆಳೆಸಲೆಂದೇ ಸಿದ್ಧವಾಗಿವೆ. ಅವನ ಕೃತಿಗಳಲ್ಲಿ ಗಾತ್ರದಲ್ಲೂ ಸ್ವಭಾವದಲ್ಲೂ ಪ್ರಭಾವದಲ್ಲೂ ದೊಡ್ಡದೆಂದರೆ 'ತಂತ್ರಾಲೋಕ'; ಉಳಿದಂತೆ ಆಗಮಗ್ರಂಥಗಳಿಗೆ ವ್ಯಾಖ್ಯಾನಗಳು. ಇವೆಲ್ಲ ಇಂದಿಗೂ ಮಾನ್ಯವಾಗಿವೆ.

●

- 2 -

‘ಕಾಶ್ಮೀರಿಕೋಽಭಿನವಗುಪ್ತಪಾದಃ’

ಅಭಿನವಗುಪ್ತನ ಮನೆತನ ಮೂಲದಲ್ಲಿ ಮಧ್ಯದೇಶಕ್ಕೆ ಸೇರಿದ್ದು. ಅವನ ಹಿರಿಯರು ನೆಲೆಸಿದ್ದುದು ಗಂಗಾ-ಯಮುನಾನದಿಗಳ ನಡುವಣ ಪ್ರದೇಶವಾದ ‘ಅಂತರ್ವೇದಿ’ಯಲ್ಲಿ. ಹಲವಾರು ತಲೆಮಾರುಗಳಿಂದ ಈ ಮನೆತನವು ಶಾಸ್ತ್ರಪಾಂಡಿತ್ಯ, ಧರ್ಮಶ್ರದ್ಧೆ, ಶೈವಸಾಧನೆಗಳಿಗೆ ಹೆಸರಾಗಿದ್ದು ಇವೆಲ್ಲದರ ಪುತ್ಥಳಿಯಂತಿದ್ದ ಅತ್ರಿಗುಪ್ತನೆಂಬ ಹಿರಿಯನನ್ನು ಅಭಿನವಗುಪ್ತನೇ ಉಲ್ಲೇಖಿಸುತ್ತಾನೆ. ಇವನಿದ್ದುದು ಕಾನ್ಯಕುಬ್ಜದಲ್ಲಿ. ಕಾನ್ಯಕುಬ್ಜದ ಅರಸ ಯಶೋವರ್ಮನನ್ನು ಕಾಶ್ಮೀರದ ದೊರೆ ಲಲಿತಾದಿತ್ಯನು ಕ್ರಿಸ್ತಾಬ್ದ 750ರ ಸುಮಾರಿನಲ್ಲಿ ಸೋಲಿಸಿದಾಗ, ಅವನ ಕಣ್ಣಿಗೆ ಬಿದ್ದವನು ಅತ್ರಿಗುಪ್ತ. ಅಗಸ್ತ್ಯಗೋತ್ರದ ಈ ಅತ್ರಿಗುಪ್ತನ ವೈದುಷ್ಯ, ಪಾವಿತ್ರ್ಯ, ಪ್ರತಿಭೆಗಳಿಗೆ ಮಾರುಹೋಗಿ ಲಲಿತಾದಿತ್ಯನು ಅವನನ್ನು ಕಾಶ್ಮೀರಕ್ಕೆ ಬರಮಾಡಿಕೊಂಡು, ವಿತಸ್ತಾ(ಈಗಿನ ಝೀಲಂ)ನದಿಯ ದಂಡೆಯ ಮೇಲೆ ಸಿತಾಂಶುಮೌಳಿಯ (ಶಿವನ) ದೇಗುಲದೆದುರು ಬಯಲಲ್ಲಿ ಇವನಿಗೆ ದೊಡ್ಡಮನೆಯೊಂದನ್ನು ಕಟ್ಟಿಸಿಕೊಟ್ಟನು. ಅಂದಿನಿಂದ ಮನೆತನ ಕಾಶ್ಮೀರದ್ದಾಯಿತು. ಅಭಿನವಗುಪ್ತನು ತನ್ನನ್ನು ‘ಕಾಶ್ಮೀರಿಕ’ನೆಂದೇ ಕರೆದು ಕೊಂಡಿರುವುದರ ಹಿನ್ನೆಲೆ ಇದು.

ಅತ್ರಿಗುಪ್ತ

ಕೂಟಸ್ಥ ಅತ್ರಿಗುಪ್ತನ ಅನ್ವಯದಲ್ಲಿ ಮುಂದೆ ಬಂದ ವರಾಹಗುಪ್ತನ ಹೆಸರು ಉಳಿದುಬಂದಿದೆ; 'ಗೀರ್ವಾಣಸಿಂಧುಲಹರೀಕಲಿತಾಗ್ರಮೂರ್ಧ'ನೆಂದು ಅಭಿನವಗುಪ್ತನ ಒಕ್ಕಣೆ. ಅವನ ಮಗ ನರಸಿಂಹಗುಪ್ತ (ಚುಖಲಕ). ಇವನಿಗೆ ದುಃಖಲನೆಂಬ ಹೆಸರೂ ಇದ್ದಂತೆ ತೋರುತ್ತದೆ. ಅಭಿನವಭಾರತಿಯಲ್ಲಿ ಅಭಿನವನು ತನ್ನನ್ನು 'ದುಃಖಲಾತ್ಮಜ'ನೆಂದು ಕರೆದುಕೊಂಡಿರುವುದಿದೆ. ಇವನೂ 'ಸರ್ವಶಾಸ್ತ್ರಸಮಜ್ಜನಶುಭ್ರಚಿತ್ತ', 'ಚಂದ್ರಾವದಾತ ಧಿಷಣ'. ಎಲ್ಲ ಶಾಸ್ತ್ರಗಳ ಸಾರವನ್ನು ಹೀರಿಕೊಂಡವನಾಗಿ ನಿರ್ಮಲವಾದ ಮನಸ್ಸು ಅವನದು; ಬೆಳದಿಂಗಳಂತೆ ಬೆಳಗುವ ಬುದ್ಧಿ. ಇವನ ಹೆಂಡತಿ ವಿಮಲೆ (ವಿಮಲಕಲೆ). ಇಬ್ಬರೂ ಶೈವಸಿದ್ಧಸಂಪ್ರದಾಯಕ್ಕೆ ಸೇರಿದ್ದವರು. ಸಾಮಾನ್ಯರಂತೆ ಕೂಡಿ ಬಾಳಿದವರಲ್ಲ; ಸಾಧನೆಯಲ್ಲಿಯೇ ಪಾಲ್ಗೊಂಡು ಕೂಡಿದವರು. ಗಂಡ-ಹೆಂಡತಿಯೆಂದರೆ ಶಿವ-ಶಕ್ತಿಯರು ಎಂಬ ಕಲ್ಪನೆಯ ನೆರಳಲ್ಲಿಯೇ ಒಡನಾಡಿದವರು. ಹೀಗಾಗಿ ಅವರಿಗೆ ಹುಟ್ಟಿದ ಹಿರಿಯ ಮಗ ಅಭಿನವಗುಪ್ತ 'ಯೋಗಿನೀಭೂ' ಎನಿಸಿಕೊಂಡಿದ್ದು ಆಶ್ಚರ್ಯವಲ್ಲ. ಗಂಡು-ಹೆಣ್ಣುಗಳ ಕಾಮಕೇಳಿಯಿಂದ ಹೊರಬಂದವನಲ್ಲ; ಶಿವ-ಶಕ್ತಿಯರ ಸಂಗಮದಿಂದ ಕಾಣಿಸಿಕೊಂಡವನು. ತಾಯಿಯು ಯೋಗಿನಿಯಾಗಿದ್ದಾಗ ಅವಳ ಗರ್ಭದಲ್ಲಿ ಮೂಡಿಕೊಂಡವನು ಅಭಿನವಗುಪ್ತ. 'ಯೋಗಿನೀಭೂಃ' ಎಂಬ ಮಾತಿನ ಅರ್ಥ ಇದು—

ಶಿವಶಕ್ತ್ಯಾತ್ಮಕಂ ರೂಪಂ ಭಾವಯೇಚ್ಚ ಪರಸ್ಪರಂ ।
ನ ಕುರ್ಯಾನ್ಮಾನವೀಂ ಬುದ್ಧಿಂ ರಾಗಮೋಹಾದಿಸಂಯುತಂ ॥

ಈ ಹಿನ್ನೆಲೆಯಲ್ಲಿ ಹುಟ್ಟಿದ ಮಗು 'ಯೋಗಿನೀಭೂ'.

ಅಭಿನವಗುಪ್ತನಿಗೆ ಹೀಗೆ ಹುಟ್ಟಿನಿಂದಲೇ ಸಿದ್ಧಸಂಪ್ರದಾಯದ ದೀಕ್ಷೆ; ಹುಟ್ಟುವಾಗಲೇ ಅವನು ಶೈವ. ಮುಂದೆ ಅವನ ಎಳವೆಯಲ್ಲೇ ತಾಯಿತಂದೆಯರು ತೀರಿಕೊಂಡರು. ಅವನ ವೈರಾಗ್ಯ ಬಲಿಯಿತು. ತನ್ನ ಇಡೀ ಬದುಕನ್ನೆ ಅಧ್ಯಯನ, ಅಧ್ಯಾಪನ, ಸಾಧನ, ಸಿದ್ಧಿಗಳಿಗೆ ಮುಡಿಪಾಗಿರಿಸಿದ. ನೈಷ್ಠಿಕಬ್ರಹ್ಮಚಾರಿಯಾಗಿಯೇ ನಿಂತ. ಅವನ ಮನೆತನದಲ್ಲಿ ವೈರಾಗ್ಯ, ಶಿವಭಕ್ತಿಗಳೆರಡೂ ಬೇರೂರಿದ್ದುವಂತೆ. ಅಭಿನವಗುಪ್ತನೇ ತನ್ನ ಹಿರಿಯರನ್ನು ಕುರಿತು 'ಹಣವನ್ನು ಹುಲ್ಲುಕಡ್ಡಿಯಂತೆ ಕಂಡವರು, ಶಿವನ ಸೇವೆಯಲ್ಲೇ ನೆಲೆ ನಿಂತವರು' ಎಂದು ಮುಂತಾಗಿ ಬಣ್ಣಿಸಿರುವುದಿದೆ—

ಯೇ ಸಂಪದಂ ತೃಣಮಮಂಸತ ಶಂಭುಸೇವಾಸಂಪೂರಿತಂ
ಸ್ವಹೃದಯಂ ಹೃದಿ ಭಾವಯಂತಃ...

ಮನೆತನದ ಮನೋವೃತ್ತಿಯೇ ಹೀಗಿದ್ದು, ಹುಡುಗನಿಗೆ ತಂದೆತಾಯಿಯರೂ ಕಣ್ಮರೆಯಾದಾಗ ನವತಾರುಣ್ಯದ ಸಮಯದಲ್ಲೂ ಸಂಸಾರಸಾಗರದ ಮೇಲೆ ವಿರಕ್ತಿಯ ಹರಿಗೋಲನ್ನೇರಿ ಹೊರಟದ್ದು ಅಚ್ಚರಿಯೇನಲ್ಲ. ಎಷ್ಟಾದರೂ ಅವನು 'ಯೋಗಿನೀಭೂ' ಅಲ್ಲವೆ? ತನ್ನ ಸ್ಥಿತಿಯನ್ನು ತಾನೇ ಹೀಗೆ ಹೇಳಿಕೊಂಡಿದ್ದಾನೆ—

ತಾರುಣ್ಯ ಸಾಗರತರಂಗಭರಾನಪೋಹ್ಯ ವೈರಾಗ್ಯ-
ಪೋತಮಧಿರುಹ್ಯ ದೃಢಂ ಹಠೇನ

ಮದುವೆಯಾಗಿದ್ದರೆ ಹೆಂಡಿರು–ಮಕ್ಕಳು ಮೊದಲಾಗಿ ಹಲವು ಬಗೆಯ ಬಂಧಗಳು; ಸಾಧನೆಯ ತೀವ್ರತೆಗೆ ವಿಘ್ನಗಳು. ಈಗಲಾದರೋ, 'ದಾರಸುತಪ್ರಭೃತಿಬಂಧಕಥಾಮನಾಪ್ತಃ'. ಯೋಗಿನೀಭೂ ಆದವನು ತಾನೇ ಯೋಗಿಯಾಗಲು ಯಾವ ಅಡ್ಡಿ ಆತಂಕವೂ ಇರಲಿಲ್ಲ. ಆದರೆ ತಾನು ಭೋರ್ಗರೆಯುವ ಸಮುದ್ರದ ಅಲೆಗಳನ್ನು ದಾಟಿಹೋಗಲು ವಿರಕ್ತಿಯ ಹರಿಗೋಲನ್ನೇರಿ ಹೊರಟೆನೆಂಬ ಒಕ್ಕಣೆಯಲ್ಲಿ ರಸವೂ ಇದೆ, ಧ್ವನಿಯೂ ಇದೆ. 'ದೃಢವಾಗಿ', 'ಹಠದಿಂದ' ಎಂಬ ಮಾತುಗಳ ಸ್ವಾರಸ್ಯವನ್ನೇ ನೋಡಿ. ಸಮುದ್ರದ ಮೇಲೆ ಸಣ್ಣದೊಂದು ದೋಣಿ ಹೊರಟರೆ, ಅಲೆಗಳ ಹೊಡೆತಕ್ಕೆ ಅದು ನಿಂತೀತೆ? ದೋಣಿ ನಡೆಸುವವನಿಗೆ ಸ್ಥೈರ್ಯವಿರಬೇಕು; ಏನಾಗಲಿ ಸಾಗುವೆನೆಂಬ ಹಟವೂ ಇರಬೇಕು. ಅಭಿನವಗುಪ್ತನಿಗೆ ಎಳವೆಯಲ್ಲಿನ ಆಸಕ್ತಿ ಸಾಹಿತ್ಯದತ್ತ. ಸಾಹಿತ್ಯದಲ್ಲಿ ರುಚಿಯಿರುವುದು ಭಾವುಕತೆಯಿಂದ; ಭಾವುಕತೆಗೆ ಇಂಬಾಗುವುದು ರಕ್ತಿಯೇ, ವಿರಕ್ತಿಯಲ್ಲ. ಅಭಿನವ ಗುಪ್ತನೇನೋ ಹೇಳಿ ಕೇಳಿ ಭಾವುಕನೇ. ಎಂದಮೇಲೆ ಪ್ರಪಂಚದ ಆಕರ್ಷಣೆ, ಭೋಗದತ್ತ ಒಲವು ಇರುವುದು ಸಹಜವೇ. ಇಂಥ ಸ್ವಭಾವವಿದ್ದಾಗ ವೈರಾಗ್ಯದ ಹರಿಗೋಲನ್ನೇರಿ ಹೊರಡುವುದು ಕಷ್ಟ. ಆದರೂ ವಿಧಿಯ ಆಣತಿಗೆ ಮಣಿದು ಮನಸ್ಸನ್ನು ಗಟ್ಟಿಮಾಡಿ ಹಟ ಹಿಡಿದು ತನಗೆ ಒಲ್ಲದ ಹರಿಗೋಲನ್ನೇರಿದನೆಂದು ತೋರುತ್ತದೆ. ತಾನು ಹುಡುಗನಾಗಿರುವಾಗಲೇ ತಾಯಿ ತೀರಿಕೊಂಡದ್ದು ಮುಂದಿನ ತನ್ನ ಇರವಿಗೆ ಅಣಿಮಾಡಿಕೊಡಲು ವಿಧಿಯ ಆಟ ಎಂದೇ ಅಭಿನವಗುಪ್ತನ ತಿಳಿವಳಿಕೆಯಾಗಿದ್ದಿತು—

ದೈವೋ ಹಿ ಭಾವಿ ಪರಿಕರ್ಮಣಿ ಸಂಸ್ಕರೋತಿ

'ತಾಯಿಯದೇ ತೀರ ಹತ್ತಿರದ ನಂಟು ಎಂದು ಎಲ್ಲರೂ ಬಗೆಯುವರು; ಪ್ರೀತಿಯು ನಂಟಿನ ಒಲುಮೆಯನ್ನು ಬಲವಾದ ಬಂಧನವಾಗಿಸುತ್ತದೆ' ('ಮಾತಾ ಪರಂ ಬಂಧುರಿತಿ ಪ್ರವಾದಃ, ಸ್ನೇಹೋತಿ ಗಾಢೀಕುರುತೇ ಹಿ ಪಾಶಾನ್') ಎಂದು ಅವನೇ ಸಮಾಧಾನ ತಂದುಕೊಂಡಿದ್ದಾನೆ.

ತಾಯಿತಂದೆಯರು ತೀರಿಕೊಂಡದ್ದು ಯಾವಾಗ ಎಂಬುದು ನಿರ್ದಿಷ್ಟವಾಗಿ ತಿಳಿಯುವುದಿಲ್ಲ. ತಂದೆಯಿಂದ ತಾನು ವ್ಯಾಕರಣವನ್ನು ಕಲಿತದ್ದನ್ನು ಉಲ್ಲೇಖಿಸಿದ್ದಾನೆ ('ಪಿತ್ರಾ ಸ ಶಬ್ದಗಹನೇ ಕೃತಸಂಪ್ರವೇಶಃ'). ಎಂದಮೇಲೆ, ತೀರ ಎಳವೆಯಲ್ಲೇ ಪಿತೃವಿಯೋಗವಾಗಿರಲಾರದು. ವಿರಕ್ತಿ ಒದಗಿದ್ದು ತಾರುಣ್ಯದಲ್ಲಿ ಎಂಬ ಉಲ್ಲೇಖವೂ ಇದೆ; ಇದು ಮಾತೃವಿಯೋಗವಾದಾಗ ಇದ್ದಿರಬೇಕು. ಇದು ಏನಾದರಿರಲಿ, ತಂದೆತಾಯಿಯರ ಆಧ್ಯಾತ್ಮಿಕ, ಧಾರ್ಮಿಕಪ್ರಭಾವಗಳನ್ನು ಅವನು ಒಡಮೂಡಿಸಿಕೊಂಡಿದ್ದುದು ಸ್ಪಷ್ಟವಾಗಿದೆ. ತಾನು 'ಯೋಗಿನೀಭೂ' ಎಂಬ ಅರಿವೂ ಇದ್ದಿತಷ್ಟೆ?

- 3 -

'ಗುರುಭ್ಯೋಽಪಿ ಗರೀಯಾಂಸಃ'

ಮೊದಲಿಂದ ವಿದ್ಯೆಯಲ್ಲಿ ಅನುರಕ್ತನಾಗಿದ್ದವನು; ಪಾಂಡಿತ್ಯದ ಸಂಸ್ಕಾರ ಮನೆತನದಲ್ಲೇ ಇದ್ದಿತು. ತಂದೆ, ಅಜ್ಜ ದೊಡ್ಡ ವಿದ್ವಾಂಸರಾಗಿದ್ದವರೇ. ಆದರೂ ಹಲವು ಆಚಾರ್ಯರನ್ನು ಆಶ್ರಯಿಸಿ ಹಲವು ವಿದ್ಯಾಪ್ರಕಾರಗಳಲ್ಲಿ ಪ್ರೌಢಿಮೆಯನ್ನು ಗಳಿಸಿಕೊಳ್ಳುವ ಅವನ ಹಂಬಲ ಅಪೂರ್ವವೇ ಆಗಿದ್ದಿತು. ಶೈವಸಿದ್ಧಸಂಪ್ರದಾಯದಲ್ಲಿ ಗುರುನಿಷ್ಠೆ ಪ್ರಧಾನವಾದುದು. ಎಂದರೆ ಒಬ್ಬ ಗುರು, ಒಂದು ವಿದ್ಯೆ; ಅವನು ಶಿಕ್ಷಾಗುರುವೂ ಹೌದು, ದೀಕ್ಷಾಗುರುವೂ ಹೌದು. ಅವನನ್ನು ಬಿಟ್ಟು ಬೇರೆ ಗುರುವನ್ನಾಶ್ರಯಿಸುವುದು ನಿಷ್ಠೆಯಾಗದು. ವಾಡಿಕೆ ಹೀಗಿರುವಾಗಲೂ ಅಭಿನವಗುಪ್ತನು ಅನೇಕ ಗುರುಗಳನ್ನಾಶ್ರಯಿಸಿ ಬಹುಶ್ರುತನಾದನು. ಅವನೇ ಹೇಳಿರುವಂತೆ, ದುಂಬಿಯು ರುಚಿಯಾದ ರಸವನ್ನು ಬಯಸಿ ಹೂವಿನಿಂದ ಹೂವಿಗೆ ಅಲೆದಾಡುವಂತೆ, ಹೆಚ್ಚಿನ ತಿಳಿವಳಿಕೆಯನ್ನು ಬಯಸುವವನು ಒಬ್ಬ ಗುರುವಿನಿಂದ ಇನ್ನೊಬ್ಬ ಗುರುವಿನ ಬಳಿ ಸಾರಬೇಕು—

> **ಆಮೋದಾರ್ಥೀ ಯಥಾ ಭೃಂಗಃ ಪುಷ್ಪಾತ್ ಪುಷ್ಪಾಂತರಂ ವ್ರಜೇತ್ ।**
> **ವಿಜ್ಞಾನಾರ್ಥೀ ತಥಾ ಶಿಷ್ಯೋ ಗುರೋರ್ಗುರ್ವಂತರಂ ವ್ರಜೇತ್ ॥**

(ತಂತ್ರಾಲೋಕ 3, 335)

ಅಲ್ಲದೆ, ತಾನಾಗಿ ಬರಿಯ ಪುಸ್ತಕದ ಅಧ್ಯಯನದಿಂದ ಕಲಿತ ವಿದ್ಯೆ ಊರ್ಜಿತವಾಗ ಲಾರದೆಂಬ ನಂಬಿಕೆಯೂ ಇದೆ; ಗುರುವಿನಿಂದ ಕ್ರಮವಾಗಿ ಕಲಿತರೇ ವಿದ್ಯೆ. ಅಭಿನವಗುಪ್ತನ ಮಾತೇ ಇದೆ—

> **ಸ್ವಬುದ್ಧಿಪುಸ್ತಕಮಾತ್ರಶರಣಾ ವಿಡಂಬಿತಾಃ-**
> **ಪುಸ್ತಕಾಧೀತವಿದ್ಯಾಶ್ಚ ಗುರುಕ್ರಮವಿವರ್ಜಿತಾಃ ।**
> **ಆಚರಂತೋ ದಿಶಂತಶ್ಚ ಪಚ್ಯಂತೇ ನರಕೇ ಚಿರಂ ॥**

(ಈಶ್ವರಪ್ರತ್ಯಭಿಜ್ಞಾವಿವೃತಿವಿಮರ್ಶಿನೀ, 4)

ತನ್ನದೇ ಬುದ್ಧಿಶಕ್ತಿಯನ್ನು ನಂಬಿಕೊಂಡು, ಪುಸ್ತಕವನ್ನಷ್ಟೆ ಓದಿಕೊಂಡು ಪಡೆದುಕೊಂಡ ವಿದ್ಯೆ, ಗುರುವಿನ ಉಪದೇಶವನ್ನರಸದೆ ಕಲಿತ ವಿದ್ಯೆ—ಇದರಂತೆ ನಡೆಯುವುದಾಗಲಿ ಇದನ್ನು ಬೇರೆಯವರಿಗೆ ತಿಳಿಸುವುದಾಗಲಿ ಎರಡೂ ಸರಿಯಲ್ಲ. ಆದರೆ ಗುರುವಿನಿಂದ

ಕಲಿತದ್ದೇ, ಕಲಿತಷ್ಟೇ ವಿದ್ಯೆ ಎಂದೂ ಅಲ್ಲ. ಅಭಿನವಗುಪ್ತನು 'ಉಕ್ತಂ ಹಿ ಶ್ರೀಕರಣಾಯಾಂ' ಎಂದು ಆಗಮಗ್ರಂಥದಲ್ಲಿರುವುದನ್ನು ಸೂಚಿಸಿ 'ಗುರುವಿನಿಂದ ಕಲಿತದ್ದನ್ನು ಶಾಸ್ತ್ರಾಧ್ಯಾಯನ ದಿಂದ (ಎಂದರೆ ವ್ಯಾಖ್ಯಾನ, ಶ್ರವಣ, ಚಿಂತನ, ಅಭ್ಯಾಸಗಳಿಂದ) ಪಡೆದುಕೊಂಡದ್ದನ್ನು ತನ್ನ ಅನುಭವದಲ್ಲಿ ತಂದುಕೊಂಡರೆ ಮಾತ್ರ ಸಾರ್ಥಕವಾದ ವಿದ್ಯೆಯಾದೀತು ಎಂದು ತಿಳಿಸಿದ್ದಾನೆ—

ಗುರುತಃ ಶಾಸ್ತ್ರತಃ ಸ್ವತಃ ।

ಗುರುವಿನ ಅಗತ್ಯವಾಗಲಿ ಪ್ರಯೋಜನವಾಗಲಿ ಇರುವುದು ಶಾಸ್ತ್ರದ ತಾತ್ಪರ್ಯವನ್ನು ಅರಿತುಕೊಳ್ಳಲು ನೆರವಾಗುವುದರಲ್ಲಿ, ತನ್ನ ಅನುಭವವೇ ಕುದುರಲು ಪ್ರೇರಿಸುವುದರಲ್ಲಿ. ಆದ್ದರಿಂದಲೇ ಅಭಿನವಗುಪ್ತನು ತನ್ನ ಎಲ್ಲ ಗುರುಗಳನ್ನೂ ಭಕ್ತಿಯಿಂದ, ಪ್ರೀತಿಯಿಂದ ನೆನೆದುಕೊಳ್ಳುತ್ತಾನೆ.

ಕಾಶ್ಮೀರಪ್ರದೇಶದಲ್ಲಿದ್ದ ಹಲವು ಪ್ರಸಿದ್ಧ ಗುರುಗಳನ್ನು ಸೇವಿಸಿದ್ದಲ್ಲದೆ, ಕಾಶ್ಮೀರ ದಾಚೆಯೂ ಸಂಚರಿಸಿ ಹಲವು ಗುರುಗಳನ್ನು ಸಂಧಿಸಿ, ಸೇವಿಸಿ ಬಂದಿದ್ದಾನೆ. ಅವನ ಪ್ರಮುಖ ಗುರುಗಳಲ್ಲಿ ಒಬ್ಬ ಜಾಲಂಧರಪೀಠದ ಶಂಭುನಾಥ. ಅಭಿನವಗುಪ್ತನಿಗೆ ಆಧ್ಯಾತ್ಮಸಾಕ್ಷಾತ್ಕಾರವಾದದ್ದು ಸಿದ್ಧಿಯಾದದ್ದು ಇವನಿಂದಲೇ ಎಂದು ತೋರುತ್ತದೆ.

ಶ್ರೀಶಂಭುನಾಥಭಾಸ್ಕರಚರಣನಿಪಾತಪ್ರಭಾಪಗತಸಂಕೋಚಂ ।

ಶ್ರೀಶಂಭುನಾಥಭಾಸ್ಕರಚರಣನಿಪಾತಪ್ರಭಾಪಗತಸಂಕೋಚಂ ।
ಅಭಿನವಗುಪ್ತಹೃದಂಬುಜಂ

ಎಂದು ಅವನ ತಂತ್ರಾಲೋಕದಲ್ಲಿ ಒಕ್ಕಣೆಯಿದೆ. ಶಂಭುನಾಥನೆಂಬ ಸೂರ್ಯನ ಕಿರಣಗಳಿಂದ ಅಭಿನವಗುಪ್ತನ ಹೃದಯವೆಂಬ ತಾವರೆಯು ಅರಳಿತಂತೆ. ಪಂಚಸ್ರೋತವೆಂಬ ಕೌಲಿಕ ಸಿದ್ಧಾಂತವನ್ನು, ಅದಕ್ಕೆ ಸಂಬಂಧಿಸಿದ ಯೋಗವಿಧಿಗಳನ್ನು ಈ ಗುರುವಿನಿಂದ ಕಲಿತನು.

ತನ್ನ ತಂದೆಯಿಂದಲೇ ವ್ಯಾಕರಣವನ್ನು ಕಲಿತದ್ದನ್ನು ಆಗಲೇ ಹೇಳಿದೆ. ತಂದೆಯಿಂದ ಗೇಯವಿದ್ಯೆಯನ್ನೂ (ಎಂದರೆ ಹಾಡಿಕೆಯನ್ನೂ) ಕಲಿತನೆಂಬ ಉಲ್ಲೇಖವಿದೆ.

ನೃಸಿಂಹಗುಪ್ತಾಪರನಾಮಧೇಯೋ
ವಿದ್ಯಾವದಾತಃ ಮುಖಲಾಭಿಧಾನಃ ।
ಯಂ ಗೇಯವಿದ್ಯಾಭಿರಯೂಯುಜತ್ಸಃ
ಪ್ರಯೋಗಸಿದ್ಧಿಂ ಕೃತವಾನ್ಮಹಾರ್ಥಾಂ ॥ (ಅಭಿನವಭಾರತೀ)



ಗುರೋರ್ಲಕ್ಷ್ಮಣಗುಪ್ತಸ್ಯ ನಾದಸಂಮೋಹಿನೀಂ ನುಮಃ ॥

ಭೂತಿರಾಜಶಿವನೆಂಬ ಗುರುವಿನಿಂದ 'ಸದ್ಯಃಪ್ರತ್ಯಯದಾಯಿನಿ'ಯಾದ (ಎಂದರೆ, ಒಡನೆಯೇ ಅನುಭವವನ್ನು ಒದಗಿಸುವ) ಬ್ರಹ್ಮವಿದ್ಯೆಯನ್ನು (ಎಂದರೆ, ವೇದಾಂತವನ್ನು) ಪಡೆದುಕೊಂಡನು. 'ಶ್ರೀನಾಥಸಂತತಿಮಹಾಂಬರಘರ್ಮಕಾಂತಿ' (ಶ್ರೀನಾಥಾದಿ ಪರಂಪರೆಯ ಆಗಸದಲ್ಲಿ ಬೆಳಗುವ ಸೂರ್ಯ) ಎನಿಸಿದ ಭೂತಿರಾಜತನಯನಿಂದ ಶೈವದರ್ಶನದ ಗಾಢ ಪರಿಚಯವನ್ನು ಗಳಿಸಿದನು. ಕಾಶ್ಮೀರಶೈವಸಂಪ್ರದಾಯದ ವಿಶೇಷ ವಿವರಗಳನ್ನು ಅವನು ಕಲಿತದ್ದು ಲಕ್ಷ್ಮಣಗುಪ್ತನಾಥನಲ್ಲಿ. ಈ ಸಂಪ್ರದಾಯದ ಪ್ರವರ್ತಕಪುರುಷರಲ್ಲಿ ಅಗ್ರಗಣ್ಯನಾದ ಸೋಮಾನಂದನಾಥನ ಮಗ ಉತ್ಪಲದೇವನ ಮಗ ಲಕ್ಷ್ಮಣಗುಪ್ತ. ಈ ಸಂಪ್ರದಾಯದ ಪ್ರಮುಖ ಪ್ರಮೇಯಗಳಾದ ಪ್ರತ್ಯಭಿಜ್ಞಾ (ತ್ರಿಕ) ಮತ್ತು ಕ್ರಮ ಎರಡನ್ನೂ ಲಕ್ಷ್ಮಣಗುಪ್ತನೇ ಅವನಿಗೆ ತಿಳಿಸಿಕೊಟ್ಟನು. ಲಕ್ಷ್ಮಣಗುಪ್ತನನ್ನು ಕುರಿತಂತೆ ಅಭಿನವಗುಪ್ತನಿಗೆ ತುಂಬ ಆದರವಿದ್ದಿತು. ಅವನು ಗುರುವನ್ನು ಹೊಗಳಿದ ರೀತಿಯನ್ನು ನೋಡಿ—

ತದಾಸ್ವಾದಪರಾವೇಶಬೃಂಹಿತಂ ಮತಿಷಟ್ಪದೀಂ ।
ಗುರೋರ್ಲಕ್ಷ್ಮಣಗುಪ್ತಸ್ಯ ನಾದಸಂಮೋಹಿನೀಂ ನುಮಃ ॥

ತಂತ್ರಾಲೋಕದ ಮೊದಲಲ್ಲೇ ಬಂದಿರುವ ಸ್ತುತಿ ಇದು.

ರಾಮಕಂಠಮಹಾಕಂಠಕಂಠೀರವಪದಾನುಗಃ ।

ಲಕ್ಷ್ಮಣಗುಪ್ತನು ಉತ್ಪಲದೇವನ ಮಗ ಮತ್ತು ಶಿಷ್ಯ. ಉತ್ಪಲದೇವನ ಇನ್ನೊಬ್ಬ ಶಿಷ್ಯ ರಾಜಾನಕರಾಮಕಂಠನೂ ಅಭಿನವಗುಪ್ತನಿಗೆ ಗುರುವಾಗಿದ್ದವನೇ. 'ಮಹಾಮಾಹೇಶ್ವ-ರಾಚಾರ್ಯಶಿರೋಮಣಿ-ರಾಜಾನಕ-ಶ್ರೀಮದುತ್ಪಲದೇವಪಾದಪದ್ಮೋಪಜೀವಿ'ಯಾದ ರಾಮಕಂಠನ ಶಿಷ್ಯನಾದ ಮೇಲೆ ತನಗೆ ಮತ್ತೆ ಯಾವ ತಾರ್ಕಿಕನ, ವಾದಿಯ ಭಯವಿದೆ? ರಾಮಕಂಠ ಸಿಂಹ; ಇತರ ವಾದಿಗಳು ಆನೆಗಳು. ಆನೆಗಳು ಊಳಿಟ್ಟರೆ ಸಿಂಹದ ಬಂಟ ಬೆದರಲೇಕೆ?

ರಾಮಕಂಠಮಹಾಕಂಠಕಂಠೀರವಪದಾನುಗಃ ।
ನ ತಾರ್ಕಿಕಮಾತಂಗಗರ್ಜಿತೇಭ್ಯೋ ಬಿಭಾಮ್ಯಹಂ ॥

ಮೃಗೇಂದ್ರತಂತ್ರವೃತ್ತಿಯನ್ನು ರಚಿಸಿದವನು ರಾಮಕಂಠ; ಅದಕ್ಕೆ ಅಭಿನವಗುಪ್ತನು ಬರೆದ ದೀಪಿಕೆಯಲ್ಲಿ ಈ ಮಾತು ಬಂದಿದೆ.

ವಾಮನಾಥನೆಂಬುವನಿಂದ ದ್ವೈತಾದ್ವೈತತಂತ್ರಗಳನ್ನು ಕಲಿತನು. ಸೋಮದೇವ ಮತ್ತು ಸುಮತಿನಾಥ ಎಂಬುವರ ಬಳಿ ಕೆಲಕಾಲ ನಿಂತು ತಂತ್ರಗಳನ್ನು ಅಭ್ಯಾಸಮಾಡಿದನಂತೆ.

ಇಷ್ಟು ದರ್ಶನಕ್ಷೇತ್ರದಲ್ಲಿ ವ್ಯವಸಾಯವಾದರೆ, ಅಲಂಕಾರಶಾಸ್ತ್ರದಲ್ಲಿ ಕಾವ್ಯಾಲಂಕಾರ ಸಾರವನ್ನು ಬರೆದ ಭಟ್ಟೇಂದುರಾಜ ಅವನಿಗೆ ಗುರು. ತನ್ನ ಧ್ವನ್ಯಾಲೋಕಲೋಚನದಲ್ಲಿ ಈ ಗುರುವನ್ನು 'ವಿದ್ವತ್ಕವಿಸಹೃದಯಚಕ್ರವರ್ತಿ'ಯೆಂದು ಬಣ್ಣಿಸಿದ್ದಾನೆ. ಪ್ರತಿಭಾಜ್ಞಾನಾತಿಶಯದಲ್ಲಿ ವ್ಯಾಸ-ಕಾಳಿದಾಸರಿಗೆ ಸಮನೆಂದು ಅಭಿನವಭಾರತಿಯಲ್ಲಿ ಸ್ತುತಿಸಿದ್ದಾನೆ. ಅಭಿನವಗುಪ್ತನಿಗೆ 'ಅಭಿನವಗುಪ್ತ'ನೆಂಬುದು ತಂದೆತಾಯಿಯರು ಇಟ್ಟ ಹೆಸರೋ ಎಂಬುದರ ಬಗ್ಗೆ ಸಂಶಯವಿದೆ. ಭಟ್ಟೇಂದುರಾಜನು ಇವನ ಪ್ರತಿಭೆಯನ್ನು ನೋಡಿ 'ಅಭಿನವಗುಪ್ತಪಾದ'ನೆಂದು ಅವನನ್ನು ಕರೆದನೆಂದು ಒಂದು ಹೇಳಿಕೆಯಿದೆ. ಆದರೆ ಅಭಿನವನ ಶಿಷ್ಯನೇ ಆದ ಕ್ಷೇಮರಾಜನು ಗುರುವಿನ ಹೆಸರು ಅಭಿನವನೆಂದೂ, ಕಾಶ್ಮೀರಿಬ್ರಾಹ್ಮಣರಲ್ಲಿ ಒಂದು ಪಂಗಡದವರಿಗೆ ಗುಪ್ತ ಎಂಬ ಉಪನಾಮವಿರುವುದೆಂದೂ ತನ್ನ ನೇತ್ರೋದ್ಯೋತದಲ್ಲಿ ತಿಳಿಸಿದ್ದಾನೆ (ಅಭಿನವಾಭಿದಾ). ಅದು ಏನಾದರಿರಲಿ,

ಭಟ್ಟೇಂದುರಾಜಚರಣಾಬ್ಜಕೃತಾಧಿವಾಸಹೃದ್ಯತೋಽಭಿನವಗುಪ್ತ-
ಪದಾಭಿಧೋಽಹಂ

ಎಂದು ಲೋಚನದಲ್ಲಿಯೇ ಹೇಳಿಕೊಂಡಿದ್ದಾನೆ. ಭಟ್ಟೇಂದುರಾಜಶಿಷ್ಯನೆಂದು ಹೆಮ್ಮೆಯಿಂದ ತನ್ನನ್ನು ಹೇಳಿಕೊಂಡ ಅಭಿನವನು ಇವನಲ್ಲಿ ಅಭ್ಯಾಸಮಾಡಿದ್ದು ಧ್ವನಿಪ್ರಸ್ಥಾನವನ್ನು. ಇದೇ ಗುರುವಿನ ಬಳಿ ಭಗವದ್ಗೀತೆಯನ್ನೂ ತಾನು ಅಧ್ಯಯನಮಾಡಿದುದಾಗಿ 'ಗೀತಾರ್ಥಸಂಗ್ರಹ'ದಲ್ಲಿ ಉಲ್ಲೇಖವಿದೆ. ಭಟ್ಟಕಲ್ಲಟನ ಮಗ ಮುಕುಲನೆಂಬುವನ ಶಿಷ್ಯ ಭಟ್ಟೇಂದುರಾಜ. ಮುಕುಲನು ಅಭಿಧಾವೃತ್ತಿಮಾತೃಕೆಯನ್ನು ಬರೆದವನು. ಭರತಮುನಿಯ

ನಾಟ್ಯಶಾಸ್ತ್ರವನ್ನು ಭಟ್ಟತೋತ (ಅಥವಾ ತೌತ) ಎಂಬ ಉಪಾಧ್ಯಾಯನಿಂದ ಕಲಿತನು. 'ಅಭಿನವಭಾರತಿ'ಯಲ್ಲಿ—

ಸದ್ವಿಪ್ರತೋತವದನೋದಿತನಾಟ್ಯವೇದತತ್ತ್ವಾರ್ಥಂ
ಅರ್ಥಿಜನವಾಂಛಿತಸಿದ್ಧಿಹೇತೋಃ

ಎಂಬ ಮಾತು ಬಂದಿದೆ. ಭಟ್ಟತೋತನು 'ಕಾವ್ಯಕೌತುಕ'ವೆಂಬ ಗ್ರಂಥವನ್ನು ರಚಿಸಿದ್ದುದೂ ತಾನು ಅದಕ್ಕೆ 'ವಿವರಣ'ವೆಂಬ ವ್ಯಾಖ್ಯಾನವನ್ನು ಬರೆದಿದ್ದುದೂ ಅಭಿನವಗುಪ್ತನ ಮಾತುಗಳಿಂದಲೇ ತಿಳಿದುಬರುತ್ತದೆ. ಆದರೆ ಭಟ್ಟತೋತನ ಗ್ರಂಥವಾಗಲಿ, ಅಭಿನವಗುಪ್ತನ ವಿವರಣೆಯಾಗಲಿ ಇಂದು ನಮಗೆ ದೊರಕುವುದಿಲ್ಲ. ಅಭಿನವನು ಭಟ್ಟತೋತನನ್ನು ತುಂಬ ಗೌರವದಿಂದ, ಅಕ್ಕರೆಯಿಂದ ಅನೇಕ ಬಾರಿ ನೆನಪಿಗೆ ತಂದುಕೊಳ್ಳುತ್ತಾನೆ.

ಭಟ್ಟೇಂದುರಾಜಚರಣಾಬ್ಜಕೃತಾಧಿವಾಸಹೃದ್ಯತೋಽಭಿನವಗುಪ್ತಪದಾಭಿಧೋಽಹಂ

ಹೀಗೆ ಪ್ರತ್ಯೇಕವಾಗಿ ಉಲ್ಲೇಖಗೊಂಡಿರುವ ಗುರುಗಳು ಮೇಲೆ ಕಾಣಿಸಿದವರಾದರೆ, ಇತರ ಗುರುಗಳನ್ನು ಅವನು ಒಟ್ಟಿಗೆ ಸ್ಮರಿಸಿಕೊಂಡಿರುವುದೂ ಇದೆ. 'ತಂತ್ರಾಲೋಕ'ದಲ್ಲಿ ಒಂದು ಶ್ಲೋಕ (37ನೆಯ ಆಹ್ನಿಕದಲ್ಲಿ) ಹೀಗೆ ಹನ್ನೆರಡು ಮಂದಿಯನ್ನು ಹೆಸರಿಸಿದೆ.

ಶ್ರೀಚಂದ್ರ-ಚಂದ್ರವರ-ಭಕ್ತವಿಲಾಸ-ಯೋಗಾನಂದ-
ಅಭಿನಂದ-ಶಿವಭಕ್ತಿ-ವಿಚಿತ್ರನಾಥಾಃ ।
ಅನ್ಯೇಽಪಿ ಧರ್ಮಶಿವ-ವಾಮನಕೋದ್ಭಟ-ಶ್ರೀಭೂತೀಶ-
ಭಾಸ್ಕರ-ಮುಖಪ್ರಮುಖಾ ಮಹಾಂತಃ ॥

ಆದರೆ ಇವರ ವಿಚಾರ ಏನೂ ತಿಳಿಯುವುದಿಲ್ಲ.

ಸದ್ವಿಪ್ರತೋತವದನೋದಿತನಾಟ್ಯವೇದತತ್ತ್ವಾರ್ಥಂ ಅರ್ಥಿಜನವಾಂಛಿತಸಿದ್ಧಿಹೇತೋಃ

ಅಭಿನವಗುಪ್ತನು ಸಂಪ್ರದಾಯಶುದ್ಧವಾದ ಹಲವು ಶಾಸ್ತ್ರಭಾಗಗಳನ್ನು ಗುರುಗಳಿಂದ ಕಲಿತದ್ದು ಮಾತ್ರವಲ್ಲ, ಸಂಪ್ರದಾಯಕ್ಕೆ ಹೊರತಾದ ಶಾಸ್ತ್ರದ ದೃಷ್ಟಿಯೇನೆಂಬುದನ್ನು ತಿಳಿಯುವ ಕುತೂಹಲವೂ ಇದ್ದಿತಾಗಿ ನಾಸ್ತಿಕ, ಜೈನ, ಬೌದ್ಧ ಮೊದಲಾದ ದರ್ಶನಗಳನ್ನೂ ಆಯಾ ದರ್ಶನಗಳಿಗೆ ಸೇರಿದ ಆಚಾರ್ಯರಿಂದಲೇ ತಿಳಿದುಕೊಂಡನು. ಅವನ ಮಾತಿನಲ್ಲೇ ಹೇಳುವುದಾದರೆ—

ಅಹಮಪ್ಯತ ಏವಾಧಃಶಾಸ್ತ್ರದೃಷ್ಟಿಕುತೂಹಲಾತ್ ।
ನಾಸ್ತಿಕಾರ್ಹತಬೌದ್ಧಾದೀನುಪಾಧ್ಯಾಯಾನಸೇವಿಷಂ ॥

(ತಂತ್ರಾಲೋಕ 8, 206)

ಹೀಗೆ ಅನೇಕ ಗುರುಗಳಿಂದ ವಿದ್ಯೆಯ ಹಲವು ವಿಭಾಗಗಳನ್ನು ಪಡೆದುಕೊಂಡನಾದರೂ ತಾನು ಕಲಿತದ್ದನ್ನೆಲ್ಲ ತನ್ನ ಬುದ್ಧಿಯ ಒರೆಗಲ್ಲಿಗೆ ಹಚ್ಚಿ, ಅನುಭವದ ಬೆಳಕಿನಲ್ಲಿ ವಿಮರ್ಶಿಸಿ ಅದರ ಸಾರ ಏನೆಂಬುದನ್ನು ನಿರ್ಧರಿಸಿಕೊಂಡನು. 'ತಂತ್ರಾಲೋಕ'ದಲ್ಲಿ ಅದರ ನಿರೂಪಣೆಯಿದೆ—

ಪೂರ್ವಶ್ರುತಾನ್ಯಾಕಲಯನ್ ಸ್ವಬುದ್ಧ್ಯಾ
ಶಾಸ್ತ್ರಾಣಿ ತೇಭ್ಯಃ ಸಮವಾಪ್ಯ ಸಾರಂ...

ಅಭಿನವಗುಪ್ತನದು ಸ್ವತಂತ್ರವಾಗಿ ವಿಚಾರಮಾಡುವ ಮನೋಧರ್ಮ. ಸಂಪ್ರದಾಯದ ಎಣಿಕೆಯಿಂದ ಅದನ್ನು ಗೌರವದಿಂದ ಕಂಡರೂ, ಯುಕ್ತಿಗೆ ಪಾತ್ರವಿದೆಯೆಂದು ನಂಬಿದವನು. ನಿದರ್ಶನಕ್ಕೆ ಅಭಿನವಭಾರತಿಯಲ್ಲೊಂದು ಸಂದರ್ಭ (3,1,14). ಅಭಿನವನ ಯಾವುದೋ ಅಭಿಪ್ರಾಯಕ್ಕೆ ಆಕ್ಷೇಪವೊಂದನ್ನೆತ್ತಿ, ಆಕ್ಷೇಪಕ್ಕೆ ಸಮರ್ಥನೆಯಾಗಿ 'ರಾಮಾಯಣದಲ್ಲಿ ಹೀಗೆಯೇ ಇದೆಯಲ್ಲ?' ಎಂದಾಗ ಅಭಿನವನ ಉತ್ತರ 'ರಾಮಾಯಣದಲ್ಲಿದ್ದರೇನು, ವೇದದಲ್ಲೇ ಹಾಗಿರಲಿ, ನಾನೇನು ಬೆದರುವುದಿಲ್ಲ!' ಎಂದು.

ರಾಮಾಯಣೇಽಪಿ ತಥಾಭಣಿತಮಿತಿಚೇತ್ ಕಿಮತಃ ।
ವೇದೇಪಿ ತಥಾ ವರ್ಣ್ಯತಾಂ ನ ವಯಮತೋ ಬಿಭೀಮಃ ॥

ವೇದವನ್ನು ಕುರಿತಂತೆ, ರಾಮಾಯಣವನ್ನು ಕುರಿತಂತೆ ತುಂಬ ಆದರವಿದ್ದವನು ಅಭಿನವ. ಆದರೇನು, ತನ್ನ ಅಭಿಪ್ರಾಯಗಳಿಗೆ ಅವಕಾಶವಿರದೆ?

ಮತ್ತೆ, ಸಿದ್ಧಪುರುಷನಾಗಿದ್ದ ಅವನು ಅನೇಕ ಗುರುಗಳಲ್ಲಿ ಕಲಿತನಾದರೂ ಎಲ್ಲ ಗುರುಗಳೂ ಆದರಾಭಿಮಾನಗಳಿಗೆ ಅರ್ಹರು ಎಂಬ ಅಂಧಶ್ರದ್ಧೆಯೇನು ಅವನಿಗಿರಲಿಲ್ಲ. ಅವನು ಕಂಡ ಗುರುಗಳಲ್ಲಿ ಏನೇನೂ ತಿಳಿವಳಿಕೆಯಿಲ್ಲದಿದ್ದವರೂ ಇದ್ದರು. ತತ್ತ್ವೋಪದೇಶ ಮಾಡಲು ಹೊರಟವರು ಅವರ ನಾಲಗೆ ತ-ತ್ವ ಎಂಬೆರಡು ಅಕ್ಷರಗಳನ್ನು ಮಿಡಿಯಲೂ ಅಶಕ್ಯವಾಗಿದ್ದಿತು. ಅಂಥವರಿಂದ ತಾನು ವಂಚಿತನಾದದ್ದನ್ನು ಹೇಳಿಕೊಂಡಿದ್ದಾನೆ—

ಬಹುಭಿರಪಿ ಸೋಽಹಮೇವ ಭ್ರಮಿತಸ್ತತ್ತ್ವೋಪದೇಶಕಂಮನ್ಯೈಃ ।
ತತ್ತ್ವಮಿತಿ ವರ್ಣಯುಗಮಪಿ ಯೇಷಾಂ ರಸನಾ ನ ಪಸ್ಪರ್ಶ ॥

(ಪರಾತ್ರೀಶಿಕಾವಿವರಣ, 16)

ವಾಡಿಕೆಯ ಜಾಡಿನಲ್ಲಿ ಗುರುಗಳೆಂಬ ಹೊರೆಯನ್ನು ಹೊತ್ತುಕೊಂಡು ಅವರಲ್ಲಿ ಕುರುಡು ನಂಬಿಕೆಯನ್ನಿರಿಸಿಕೊಂಡು ಅದೇ ಒಂದು ಪಾಶವಾಗಿ, ಜೀವವೆಂಬ ಪಶುವನ್ನು ಕಟ್ಟುವ ಹಗ್ಗವಾಗಿ ಪರಿಣಮಿಸುತ್ತದೆ. ತಿಳಿವಳಿಕೆಯಿಲ್ಲದ ಗುರುವೆನಿಸಿಕೊಂಡವನು ತಾನೇ ಭ್ರಮೆಗೊಂಡು ಇತರರನ್ನೂ ಭ್ರಮೆಗೆ ಈಡುಮಾಡುವನು. ದೋಷಗಳು ತನ್ನಲ್ಲೇ ಇರುವಾಗ ಅವೇ ಗುಣಗಳೆಂದೆನಿಸಿಕೊಳ್ಳುತ್ತವೆ. ಇದು ಪಾಶದ ಸ್ವಭಾವ. ಇಂಥ ಪಾಶವನ್ನು

ಕತ್ತರಿಸಲೆಂದೇ ತಾನು ಜ್ಞಾನವೆಂಬ ತ್ರಿಶೂಲವನ್ನು ಈ ಗ್ರಂಥರೂಪದಲ್ಲಿ (ಪರಾತ್ರೀಶಿಕಾವಿವರಣ) ಸಿದ್ಧಪಡಿಸುದುದಾಗಿ ತಿಳಿಸಿದ್ದಾನೆ—

ಭ್ರಾಮ್ಯಂತೋ ಭ್ರಮಯಂತಿ ಮಂದಧಿಷಣಾಸ್ತೇ ಜಂತುಚಕ್ರಂ ಜಡಂ
ಸ್ವಾತ್ಮೀಕೃತ್ಯ ಗುಣಾಭಿಧಾನವಶತೋ ಬದ್ಧ್ವಾದೃಢಂ ಬಂಧನೈಃ ।
ದೃಷ್ಟ್ವೇತ್ಥಂ ಗುರುಭಾರವಾಹವಿಧಯೇ ಯಾತಾನುಯಾತಾನ್ ಪಶೂನ್
ತತ್ಪಾಶಪ್ರವಿಕರ್ತನಾಯ ಘಟಿತಂ ಜ್ಞಾನತ್ರಿಶೂಲಂ ಮಯಾ ॥

ಕಲಿಸಿದವರೆಲ್ಲ ಗುರುಗಳೆಂದು ಒಪ್ಪಲು ಅವನೇನು ಸಿದ್ಧನಿರಲಿಲ್ಲ. ಗುರುವೆಂದು ಸೋಗುಹಾಕಿ ತೋರಿಸಿಕೊಳ್ಳುವವರನ್ನೆಲ್ಲ ಗುರುವೆಂದು ಇವನು ಸ್ವೀಕರಿಸಲೂ ಇಲ್ಲ. ಒಡಲಮೇಲೆ ಸಂಸ್ಕಾರದ ಮುದ್ರೆಯನ್ನೊತ್ತಿದರೆ ಮಾತ್ರ ಅವನು ಗುರು. ಅಭಿನವನು 'ಗುರುಪರಾಮರ್ಶೆ'ಯನ್ನು ನಿರಂತರವಾಗಿ ಮಾಡುತ್ತಿದ್ದವನು.

ಅಭಿನವನಿಗೆ ಪೂರ್ವಗ್ರಹ, ಖಂಡನಾಸಕ್ತಿ, ಕದನಕುತೂಹಲಗಳು ಇರಲಿಲ್ಲ. ಪರ್ಯಂತಪಂಚಾಶಿಕೆಯಲ್ಲಿ ಅವನು ಹೇಳಿದ್ದಾನೆ—ಅಧ್ಯಾತ್ಮ ಸಾಧನೆಗಳ ವಿಚಾರವಾಗಿ ಯಾರಿಗೂ ಯಾವ ಆಗ್ರಹವೂ ಇರಬಾರದು. 'ಇದೇ ಸಾಧನೆ ಸರಿ, ಉಳಿದುದೆಲ್ಲ ಅನರ್ಥಕಾರಿ' ಎಂಬ ಧೋರಣೆಯಿರಬಾರದು. ಯಾವುದೇ ಸಾಧನೆಯಾಗಲಿ ವಿಶ್ವಮಯನಾದ ಶಿವನ ಅಭಿವ್ಯಕ್ತಿಯೇ ತಾನೆ? ಎಲ್ಲ ಸಾಧನೆಗಳ ಗುರಿಯೂ ಒಂದೇ ಶಿವಪದ. ಯಾವುದೇ ಸಾಧನೆಯಾಗಲಿ ಈ ಗುರಿಗೆ ಸಾಧಕನನ್ನು ಒಯ್ಯಬಲ್ಲದು.

ಉಪಾಯೇ ನಾಗ್ರಹಃ ಕಾರ್ಯಃ ಉಪೇಯಾ ಭೈರವೀಸ್ಥಿತಿಃ ।
ಯಾಸೌ ಸಂವಿತ್ತಾಮೇವ ಸರ್ವೋಪಾಯಾಂ ಸಮಾವಿಶೇತ್ ॥

ತನ್ನ ಪ್ರತ್ಯಭಿಜ್ಞಾವಿವೃತಿವಿಮರ್ಶಿನಿಯಲ್ಲಿ ಅವನು ಹೇಳಿರುವುದು ಇದು—ವಿಶ್ವಚೈತನ್ಯದ ವಿಚಾರವಾಗಿ ಶೈವ, ವೈಷ್ಣವ ಮೊದಲಾಗಿ ಎಲ್ಲ ಆಗಮಗಳೂ ವೇದಾಂತವೂ ಏಕಾಭಿಪ್ರಾಯವನ್ನೇ ಹೊಂದಿವೆ. ಆ ಅಭಿಪ್ರಾಯವನ್ನೇ ನಾವು ಹಿಡಿದಿರುವುದು. ಅದನ್ನೇ ಬೌದ್ಧರು ಚಿನ್ಮಾತ್ರವೆಂದಾಗಲಿ ತ್ರಿಧಾತುವೆಂದಾಗಲಿ ಹೇಳುವಾಗ ಹಿಡಿದಿರುವುದು. ಈ ಶಾಸ್ತ್ರಗಳಿಗೆ ವ್ಯಾಖ್ಯಾನಮಾಡುವವರು ಮಾತ್ರ ತಂತಮ್ಮ ದುರಭಿಮಾನಗಳಿಂದ ಜನರನ್ನು ತಪ್ಪುದಾರಿಗಳಿಗೆಳೆಯುತ್ತಿದ್ದಾರೆ, ಅಷ್ಟೆ.

ಪಾರಮೇಶ್ವರೇಷು ತಾವದಾಗಮೇಷು ಶೈವವೈಷ್ಣವರಹಸ್ಯೇಷು ವೇದಾಂತೇ ಪುನಃ ಸ್ಪಷ್ಟ ಏವೋಕ್ತೋ ಅಯಮಸ್ಮದುಕ್ತೋಽರ್ಥಃ। ತದನುಸಾರೇಣೈವ ಸುಗತೇನೋಕ್ತಂ ಚಿನ್ಮಾತ್ರಮಿದಂ ಯದುತೇ ತ್ರೈಧಾತುಕಮಿತಿ। ತದತ್ರ ವಿವರಣಕಾರೈಃ ದುರಭಿಮಾನನಿವೇಶೇನ ಪ್ರತಾರಿತೋ ಜನಃ ಇದಮೇವ ತು ತತ್ತ್ವಮಿತಿ ತಾತ್ಪರ್ಯಂ।

ಮತ್ತೆ ಅಲ್ಲಿಯೇ ಹೇಳುತ್ತಾನೆ—ಆಗಮಗಳು ತಮ್ಮ ಭೇದಪ್ರಥೆಯನ್ನು ಬಿಡುವುದಾದರೆ,

ವೇದಾಂತಿಗಳು ಅವಿದ್ಯೆಯನ್ನು ಬ್ರಹ್ಮನ ಮಾಯಾಶಕ್ತಿಯೆಂದು ಬಗೆಯುವುದಾದರೆ, ಬೌದ್ಧರು ತಮ್ಮ ಎರಡು ವಿಜ್ಞಾನಗಳನ್ನು (ಆಲಯ ಮತ್ತು ಪ್ರವೃತ್ತಿ) ಆತ್ಮ, ಈಶ್ವರ (ವಿಶ್ವಚೈತನ್ಯದ ಅಭಿವ್ಯಕ್ತಿಗಳು) ಎಂದು ಗ್ರಹಿಸುವುದಾದರೆ ದರ್ಶನಕ್ಷೇತ್ರದಲ್ಲಿರುವ ಗೊಂದಲ ಮರೆಯಾದೀತು—

ಅಸ್ಮಿಂಸ್ತು ಸತಿ, ಆಗಮೇಷು ಚ ದ್ವೈತವ್ಯಾಖ್ಯಾಮಪಾಸ್ಯ ಬ್ರಹ್ಮವಾದೇ ಅವಿದ್ಯಾಂ ಮಾಯಶಕ್ತೀಕೃತ್ಯ ವಿಜ್ಞಾನದ್ವಯಂ ಆತ್ಮೇಶ್ವರಾಭಿಪ್ರಾಯೇಣ ನಿರೂಪ್ಯ ಸಿದ್ಧತ್ಯೇಷ ಜನಃ॥

ಅಭಿನವಗುಪ್ತನು ತಾನು ಪ್ರತಿಪಾದಿಸುತ್ತಿರುವ ಪ್ರತ್ಯಭಿಜ್ಞಾದರ್ಶನದಲ್ಲಿ ಈ ಬಗೆಯ ಸಮನ್ವಯವನ್ನು ಸಾಧಿಸಿದ್ದೇನೆಂಬ ಧ್ವನಿಯಿದೆ.

●

- 4 -

'ಸಾಹಿತ್ಯಸಾಂದ್ರರಸಭೋಗಪರೋ'

ಅಭಿನವಗುಪ್ತನ ಯಶಸ್ಸು ಅಜರಾಮರವಾಗಿರುವುದು ಅವನ ಕೃತಿಗಳಿಂದ. ಒಟ್ಟು ನಲವತ್ತುನಾಲ್ಕು ಕೃತಿಗಳು ಅವನವೆಂದು ಗೊತ್ತಾಗಿವೆ; ಎಲ್ಲವೂ ಸಂಸ್ಕೃತದಲ್ಲಿಯೆ ಇವೆ. ಇವುಗಳಲ್ಲಿ ಇಪ್ಪತ್ತುಮೂರರಷ್ಟು ಅಚ್ಚಾಗಿವೆ. ಉಳಿದ ಕೆಲವು ಹಸ್ತಪ್ರತಿಯಲ್ಲಿ ಉಪಲಬ್ಧವಿವೆ. ಹಲವು ನಷ್ಟವಾಗಿವೆ. ಅಚ್ಚಾಗಿರುವ ಕೃತಿಗಳಲ್ಲಿ ಎರಡು ಅಲಂಕಾರಶಾಸ್ತ್ರವನ್ನು ಕುರಿತವು. ಉಳಿದವು ಕಾಶ್ಮೀರಶೈವದರ್ಶನವನ್ನು ಕುರಿತವು.

ಮೊದಲ ವಿಭಾಗದಲ್ಲಿ ಭರತಮುನಿಯ ನಾಟ್ಯಶಾಸ್ತ್ರಕ್ಕೆ ಅಭಿನವಗುಪ್ತನು ಸಿದ್ಧಪಡಿಸಿರುವ ವ್ಯಾಖ್ಯಾನವಿದೆ. ಅದು ಅಭಿನವಭಾರತಿಯೆಂದು ಹೆಸರಾಗಿದೆ. 'ನಾಟ್ಯಶಾಸ್ತ್ರವಿವೃತಿ'ಯೆನ್ನುವುದು ಅದರ ಮೊದಲ ಹೆಸರು. ಮೂವತ್ತಾರು ಅಧ್ಯಾಯಗಳೆಂದು ಅಭಿನವನೇ ಹೇಳಿದ್ದಾನೆ; ಶೈವದರ್ಶನದ ಮೂವತ್ತಾರು ತತ್ತ್ವಗಳಿಗೆ ಹೊಂದಿಸಿಯೂ ಇದ್ದಾನೆ. ಆದರೆ ಅನುತ್ತರವೆಂಬ ತತ್ತ್ವಕ್ಕನುಸಾರವಾಗಿ ಇನ್ನೊಂದು ಅಧ್ಯಾಯವನ್ನೂ ಸೇರಿಸಿದ್ದಾನೆ. ಮೂವತ್ತೇಳು ಅಧ್ಯಾಯಗಳಲ್ಲಿ ರಚನೆಗೊಂಡ ಈ ಬೃಹದ್ ಗ್ರಂಥದಲ್ಲಿ ಆರನೆಯ ಅಧ್ಯಾಯ ರಸವನ್ನು ಕುರಿತದ್ದು. ರಸವನ್ನು ಹಿಂದಣ ಆಲಂಕಾರಿಕರು ಹೇಗೆ ಗ್ರಹಿಸಿದ್ದರೆಂಬುದರ ವಿವರಣೆ ಇಲ್ಲಿದೆ; ಅಭಿನವಗುಪ್ತನು ವಿಮರ್ಶೆಮಾಡಿ ತನ್ನ ನಿಲುವನ್ನು ಸ್ಪಷ್ಟಪಡಿಸುತ್ತಾನೆ. ಈ ಗ್ರಂಥದಲ್ಲಿ ಬಹುಮಟ್ಟಿಗೆ ತನ್ನ ಉಪಾಧ್ಯಾಯನಾಗಿದ್ದ ಭಟ್ಟತೋತನು ತೋರಿಸಿದ ದಾರಿಯನ್ನೇ ಹಿಡಿದಿದ್ದಾನೆ.

ಇದರಲ್ಲಿ ಉಪಾದೇಯವಾದ ಪಾಠ, ಸ್ಫುಟವಾದ ವ್ಯಾಖ್ಯಾನ, ವಿರೋಧಗಳ ಪರಿಹಾರ, ಲಕ್ಷ್ಯದ ಅನುಸರಣ, ಶ್ಲಿಷ್ಟವಕ್ತವ್ಯಾಂಶಗಳ ವಿವೇಚನೆ, ಸಂಗತಿಯ ನಿರೂಪಣೆ, ಪುನರುಕ್ತಿಯಂತೆ ಕಂಡುಬರುವ ಮಾತುಗಳಿಗೆ ಸಮಾಧಾನ, ಸಂಗ್ರಹಶ್ಲೋಕಗಳು—ಈ ಕ್ರಮವನ್ನು ಅನುಸರಿಸಿರುವುದು ಕಾಣುತ್ತದೆ. ಹಲವು ಪಾರಿಭಾಷಿಕಪದಗಳಿಗೆ ಅರ್ಥಗಳನ್ನು ಸೂಚಿಸಿರುವುದು ಸ್ವಾರಸ್ಯವಾಗಿದೆ. ಹಿಂದಿನ ವ್ಯಾಖ್ಯಾನಕಾರರ, ನಾಟ್ಯಾಚಾರ್ಯರ, ಸಂಗೀತಾಚಾರ್ಯರ ಅಭಿಪ್ರಾಯಗಳನ್ನು ಹೇಳುವಾಗ, ಅವನ ಮನೋಧರ್ಮವೇನೆಂಬುದನ್ನು ಸ್ಪಷ್ಟಪಡಿಸಿದ್ದಾನೆ.

ಊರ್ಧ್ವೋರ್ಧ್ವಮಾರುಹ್ಯ ಯದರ್ಥತತ್ತ್ವಂ
    ಧೀಃ ಪಶ್ಯತಿ ಶ್ರಾಂತಿಮವೇದಯಂತೀ ।
ಫಲಂ ತದಾದ್ಯೈಃ ಪರಿಕಲ್ಪಿತಾನಾಂ
    ವಿವೇಕಸೋಪಾನಪರಂಪರಾಣಾಂ ॥

ಚಿತ್ತಂ ನಿರಾಲಂಬನಮೇವ ಮನ್ಯೇ
    ಪ್ರಮೇಯಸಿದ್ಧೌ ಪ್ರಥಮಾವತಾರಂ ।
ಸನ್ಮಾರ್ಗಲಾಭೇ ಸತಿ ಸೇತುಬಂಧ-
    ಪುರಪ್ರತಿಷ್ಠಾದಿ ನ ವಿಸ್ಮಯಾಯ ॥

ತಸ್ಮಾತ್ ಸತಾಮತ್ರ ನ ದೂಷಿತಾನಿ
    ಮತಾನಿ ತಾನ್ಯೇವ ತು ಶೋಧಿತಾನಿ ।
ಪೂರ್ವಪ್ರತಿಷ್ಠಾಪಿತಯೋಜನಾಸು
    ಮೂಲಪ್ರತಿಷ್ಠಾಫಲಮಾಮನಂತಿ ॥

ಸೊಗಸಾದ ಶ್ಲೋಕಗಳು ಇವು; ಆದರೆ ಅನುವಾದ ಮಾಡುವುದು ಕಷ್ಟ. ತಾತ್ಪರ್ಯವಿಷ್ಟು: ಮನುಷ್ಯನ ಬುದ್ಧಿಶಕ್ತಿ ಯಾವುದಾದರೂ ವಿಷಯವನ್ನು ಸ್ಪಷ್ಟವಾಗಿ ಅರಿತುಕೊಳ್ಳಲಾಶಿಸುತ್ತದೆ. ಆದರೆ ಅದು ಒಮ್ಮೆಗೆ ಆಗದು. ಕ್ರಮವಾಗಿ ಹೆಚ್ಚು ಹೆಚ್ಚು ಸ್ಪಷ್ಟವಾಗಬೇಕು. ಮೇಲೆ ಮೇಲೆ ಹತ್ತುವ ಪರಿ ಇದು. ಹೀಗೆ ಮಾಡುವಾಗ ದಣಿವೆಂಬುದಿರದು. ಮನಸ್ಸು ಕೈಕಟ್ಟಿಕೊಂಡು ಕೂರದೆ, ಮುಂದೆ ಸಾಗುತ್ತಲೆ ಇರುತ್ತದೆ. ಹೀಗೆ ಸಾಗುವಾಗ, ಹಿಂದಿನವರು ಏರ್ಪಡಿಸಿದ ಏಣಿ ನೆರವಾಗುತ್ತದೆ. ಅವರು ನಡೆಸಿದ ವಿವೇಚನೆಗಳ ಮೆಟ್ಟಿಲುಗಳನ್ನೇರಿ ಹೋದಾಗ ವಿಷಯ ಸ್ಪಷ್ಟವಾಗುತ್ತದೆ.

ಹಿಂದಿನವರು ಅವರ ಹಿಂದಿನವರ ವಿವೇಚನೆಯನ್ನವಲಂಬಿಸಿರುತ್ತಾರೆ. ಆದರೆ ಮೊಟ್ಟಮೊದಲು ಇದ್ದವರೇನು ಮಾಡುವರು? ಅವರಿಗೆ ಹಿಂದಿನವರ ನೆರವಿರದು; ತಾವೇ ಸ್ವತಂತ್ರವಾಗಿ ವಿವೇಚನೆ ಮಾಡಬೇಕು. ಅವರೊಮ್ಮೆ ವಿಚಾರಮಾಡಿ ಸರಿಯಾದ ದಾರಿ ತೋರಿದರೆಂದರೆ ಮುಂದಿನವರಿಗೆ ನೆರವು. ನದಿಯನ್ನು ದಾಟುವಾಗ ಸೇತುವೆಯೊಂದು ಇದ್ದರೆ ನಾವು ದಾಟುವುದೇನು ಅಚ್ಚರಿಯೆ? ಆದರೆ ಸೇತುವೆ ಕಟ್ಟಿದವರನ್ನು ನೆನೆಸಿಕೊಂಡಾಗ ಅವರ ಕೆಲಸ ಅಚ್ಚರಿಯೆ ತಾನೆ?

ಹಿಂದಿನವರ ಕೊಡುಗೆಯನ್ನು ಮರೆಯುವ ಹಾಗಿಲ್ಲ. ಭರತನ ನಾಟ್ಯಶಾಸ್ತ್ರದ ವಿಷಯವನ್ನು ಕುರಿತಂತೆ ವಿಚಾರಮಾಡಿದವರಲ್ಲಿ ಅಭಿನವಗುಪ್ತನೇ ಮೊದಲಿಗನಲ್ಲ. ತನಗಿಂತ ಮೊದಲು ವಿಚಾರಮಾಡಿದವರ [ನಾನ್ಯದೇವ (ನಾನ್ಯದೇವನು ಅಭಿನವನಾದಮೇಲೆ ಶಾರ್ಙ್ಗದೇವನಿಗೆ ಮೊದಲು ಇದ್ದವನೆಂಬ ಅಭಿಪ್ರಾಯವೂ ಇದೆ.), ಶ್ರೀಹರ್ಷ, ಉದ್ಭಟ, ಲೊಲ್ಲಟ, ಶ್ರೀಶಂಕುಕ, ಭಟ್ಟನಾಯಕ, ರುದ್ರಟ, ಕೀರ್ತಿಧರ, ಭಟ್ಟಯಂತ್ರ, ರಾಹುಲ, ಮಾತೃಗುಪ್ತ, ಮೊದಲಾದವರ] ಅಭಿಪ್ರಾಯಗಳನ್ನು ವಿವೇಚನೆಗೆ ಒಳಪಡಿಸುವುದು ಸಹಜವೇ. ಆದರೆ ಹಾಗೆ ಮಾಡುವಾಗ ಅವರನ್ನು ನಿಂದಿಸುವುದು ತನ್ನ ಉದ್ದೇಶವಲ್ಲ ಎಂದು ಸ್ಪಷ್ಟಪಡಿಸಿದ್ದಾನೆ. ಹಿಂದಣ ವಿಚಾರಗಳನ್ನು ಪರಿಷ್ಕರಿಸುವುದಷ್ಟೆ ತನ್ನ ಕೆಲಸವೆಂದು ಕಾಣಿಸಿದ್ದಾನೆ.

ಅಭಿನವಭಾರತಿಯ ಪ್ರಭಾವವು ಮುಂದೆ ಹಲವು ಕವಿಗಳ, ಎಲ್ಲ ಆಲಂಕಾರಿಕರ ಮೇಲೆ ವಿಪುಲವಾಗಿ ಮೂಡಿಬಂದಿರುವುದನ್ನು ಕಾಣಬಹುದು. ಮಹಿಮಭಟ್ಟ (ಅಭಿನವನಾದಮೇಲೆ ಮಮ್ಮಟನಿಗೆ ಮೊದಲು, ವ್ಯಕ್ತಿವಿವೇಕ ಅಥವಾ ಕಾವ್ಯಾಲಂಕಾರವನ್ನು ಬರೆದವನು), ಮಮ್ಮಟ (ಕಾವ್ಯಪ್ರಕಾಶ, 11ನೆಯ ಶತಮಾನ), ಶಾರ್ಙ್ಗದೇವ (ಸಂಗೀತರತ್ನಾಕರ, 1132ರ ಸಮಯ), ಮಾಣಿಕ್ಯಚಂದ್ರ (ಕಾವ್ಯಪ್ರಕಾಶಸಂಕೇತ, 1160ರ ಸುಮಾರು), ಹೇಮಚಂದ್ರ (ಕಾವ್ಯಾನುಶಾಸನ, 1088-1174), ರಾಮಚಂದ್ರ (ನಾಟ್ಯದರ್ಪಣವೃತ್ತಿ, 1220ರ ಸುಮಾರು), ಶಾರದಾತನಯ (ಭಾವಪ್ರಕಾಶನ, 12ನೆಯ ಶತಮಾನ), ಚತುರಕಲ್ಲಿನಾಥ (ಕಲಾನಿಧಿ, 1450ರ ಸುಮಾರು), ಜಗನ್ನಾಥಪಂಡಿತರಾಜ (ರಸಗಂಗಾಧರ, 1630ರ ಸುಮಾರು) ಮೊದಲಾದ ಅನೇಕ ಪ್ರಸಿದ್ಧ ಗ್ರಂಥಕಾರರು

ಅಭಿನವನ ಮಾರ್ಗದರ್ಶನವನ್ನು ಪಡೆದುಕೊಂಡಿದ್ದಾರೆ. ರಸವಾದವನ್ನು ಸಮರ್ಥಿಸುವವರೂ ತಿರಸ್ಕರಿಸುವವರೂ ಸಮನಾಗಿಯೆ ಅಭಿನವನನ್ನು ಆಶ್ರಯಿಸುತ್ತಾರೆ. ಶಾರದಾತನಯನಂತೂ ಅಭಿನವಭಾರತಿಯನ್ನು ಸಂಪೂರ್ಣವಾಗಿ ಅನುಸರಿಸಿಯೇ ತನ್ನ ಭಾವಪ್ರಕಾಶನವನ್ನು ರಚಿಸಿದ್ದಾನೆ. ಶಾರ್ಙ್ಗದೇವನ ಸಂಗೀತರತ್ನಾಕರದಲ್ಲಿ ಕಡೆಯದಾದ ನರ್ತನಾಧ್ಯಾಯಕ್ಕೆ ಅಭಿನವಭಾರತಿಯೇ ಆಕರ. ಇಷ್ಟು ವ್ಯಾಪಕವಾದ, ಚಿಂತನವಾದ ಪ್ರಭಾವ ಬೇರೆ ಯಾವ ಶಾಸ್ತ್ರಕಾರನಿಗಿದ್ದೀತು?

ಅಭಿನವಭಾರತಿಯ ರಚನೆಯ ಉದ್ದೇಶ ಭರತಮುನಿಯ ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನ ರೂಪವಾಗಿರುವುದೇ. ಆದರೆ ಅದು ಬರಿಯ ವ್ಯಾಖ್ಯಾನವಲ್ಲ; ಸ್ವತಂತ್ರವಾದ ಉದ್ಗ್ರಂಥವೇ. ಅದರ ಆರಂಭಶ್ಲೋಕದಲ್ಲೇ ತನ್ನ ದಾರ್ಶನಿಕ ನಿಲುವನ್ನು ಸ್ಪಷ್ಟಪಡಿಸಿದ್ದಾನೆ—

ಷಟ್‌ತ್ರಿಂಶಕಾತ್ಮಕಜಗದ್‌ಗಗನಾವಭಾಸ-
ಸಂವಿನ್ಮರೀಚಿಚಯಚುಂಬಿತಬಿಂಬಶೋಭಂ ।
ಷಟ್‌ತ್ರಿಂಶಕಂ ಭರತಸೂತ್ರಮಿದಂ ವಿವೃಣ್ವನ್
ವಂದೇ ಶಿವಂ ಶ್ರುತಿತದರ್ಥವಿವೇಕಧಾಮ ॥

ಶಿವನ ಪ್ರಕಾಶದ ಹೊಳಹಿನಿಂದ ಹೊರಹೊಮ್ಮಿದ ವಿಶ್ವವು ಮೂವತ್ತಾರು ತತ್ತ್ವಗಳಿಂದೊಡಗೂಡಿದುದು. ಈ ಭೂತಸಂಘಾತವೆಲ್ಲ ಆಗಸದಂತೆ ತೋರಿಕೊಳ್ಳುತ್ತದೆ. ಚಿನ್ಮಯನಾದ ಶಿವನೆಂಬ ಬೆಳಕಿನ ಕಿರಣಗಳು ಇವು. ಇವುಗಳಿಗೆ ಶಿವನೇ ಬಿಂಬರೂಪ; ವಿಶ್ವವೆಲ್ಲ ಅವನಲ್ಲೇ ಪ್ರತಿಬಿಂಬಿತವಾಗಿದೆ; ಆಭಾಸಗೊಂಡಿದೆ, ಬೆಳಗುತ್ತಿದೆ. ಭರತಮುನಿಯ ನಾಟ್ಯವೇದವೆಂಬ ಶಾಸ್ತ್ರದಲ್ಲಿ ಮೂವತ್ತಾರು ಅಧ್ಯಾಯಗಳಿರುವುದು ಇದನ್ನೇ ಸೂಚಿಸುತ್ತದೆ. ವೇದ ಮತ್ತು ಅದರ ಅರ್ಥವಿವೇಚನೆಯನ್ನು ಮಾಡಲು ಇರುವ ಆಸರೆಯೆಂದರೆ ಶಿವನೊಬ್ಬನೇ. ಇವನನ್ನು ನಮಸ್ಕರಿಸಿ ಭರತಸೂತ್ರಕ್ಕೆ ವಿವರಣೆಯನ್ನೊದಗಿಸಲು ತೊಡಗುತ್ತೇನೆ.

ಮುಂದೆ ಒಂದೊಂದು ಅಧ್ಯಾಯದ ವಿವರಣೆಯಲ್ಲೂ ಮೂವತ್ತಾರು ತತ್ತ್ವಗಳಲ್ಲಿ ಒಂದೊಂದನ್ನು ಶಿವನ ಹೊಳಹೆಂದು ತಿಳಿಯಪಡಿಸುತ್ತಾನೆ. ನಿದರ್ಶನಕ್ಕೆ ಮೊದಲನೆಯ ತತ್ತ್ವ ಭೂಮಿ—

ವಿಶ್ವಬೀಜಪುರೋಹಾರ್ಥಂ ಮೂಲಾಧಾರತಯಾ ಸ್ಥಿತಂ ।
ಧರ್ತೃಶಕ್ತಿಮಯಂ ವಂದೇ ಧರಣೀರೂಪಮೀಶ್ವರಂ ॥

ಜಗದವಭಾಸಕನಾದ ಶಿವನಿಗೆ ಮೊದಲ ಮೆಟ್ಟಿಲು. ವಿಶ್ವೋತ್ತೀರ್ಣನಾದ ಶಿವನು ವಿಶ್ವಮಯನಾಗಲು ಹೊರಡುವಾಗ ಮೊದಲ ಹೆಜ್ಜೆ ಭೂಮಿಯೆಂಬ ತತ್ತ್ವ. ಶಿವನದೇ ರೂಪ ಅದು.

ತನ್ನ ಉಪಾಧ್ಯಾಯನಾದ ಭಟ್ಟತೋತನಿಂದಲೇ ತಾನು ಈ ನಾಟ್ಯಶಾಸ್ತ್ರವನ್ನು

ಅಧ್ಯಯನ ಮಾಡಿದೆನೆಂದೂ, ಈತನ ಅಭಿಪ್ರಾಯಗಳನ್ನು ತಿಳಿಯುವ ಉತ್ಸುಕಜನರ ಸಲುವಾಗಿ ಈ ವ್ಯಾಖ್ಯಾನವನ್ನು ರಚಿಸಿದೆನೆಂದೂ ಹೇಳಿದ್ದಾನೆ—

ಸದ್ವಿಪ್ರತೋತವದನೋದಿತನಾಟ್ಯವೇದ-
ತತ್ತ್ವಾರ್ಥಮರ್ಥಿಜನವಾಂಛಿತಸಿದ್ಧಿಹೇತೋಃ ।
ಮಾಹೇಶ್ವರಾಭಿನವಗುಪ್ತಪದಪ್ರತಿಷ್ಠಃ
ಸಂಕ್ಷಿಪ್ತವೃತ್ತಿವಿಧಿನಾ ವಿಶದೀಕರೋಮಿ ॥

ಈ ವ್ಯಾಖ್ಯಾನವನ್ನು ಬರೆಯುವ ವೇಳೆಗಾಗಲೇ ಅವನು ಶೈವಾಚಾರ್ಯನೆಂದು (ಮಹಾಮಹೇಶ್ವರ) ಪ್ರಸಿದ್ಧನಾಗಿದ್ದವನು (ಪದಪ್ರತಿಷ್ಠ). ನಾಟ್ಯಕಲೆ, ನೃತ್ಯ, ಸಂಗೀತ, ವಾದ್ಯ, ಕಾವ್ಯ, ಛಂದಸ್ಸು, ನಾಟಕ, ರೂಪಕ ಮೊದಲಾಗಿ ಹಲವು ಪ್ರಕಾರಗಳ ಪರಿಚಯ ಅವನಿಗೆ ಗಾಢವಾಗಿದ್ದುದು ಅಭಿನವಭಾರತಿಯಿಂದ ತಿಳಿದುಬರುತ್ತದೆ. ಭರತಮುನಿಯು ಗ್ರಹಿಸಿರುವ ಭಿತ್ತಿಗಿಂತ ಎಷ್ಟೋ ವಿಶಾಲವಾದುದು ಅಭಿನವನ ಭಿತ್ತಿ, ಭೂಮಿಕೆ. ಅಭಿನವಭಾರತಿಯು ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖವಾದೊಂದು ಘಟ್ಟ.



ಇದಾನೀಂ ಲೋಚನಂ ಲೋಕಾನ್ ಕೃತಾರ್ಥಾನ್ ಸಂವಿಧಾಸ್ಯತಿ ॥

ಅಭಿನವಗುಪ್ತನದು ಈ ಕ್ಷೇತ್ರದಲ್ಲಿ ಇನ್ನೊಂದು ಪ್ರಸಿದ್ಧವಾದ ಕೃತಿ 'ಧ್ವನ್ಯಾಲೋಕಲೋಚನ'. 'ಧ್ವನ್ಯಾಲೋಕ'ವನ್ನು ರಚಿಸಿದವನು ಆನಂದವರ್ಧನ; ಅವನೂ ಕಾಶ್ಮೀರದವನೇ. ಕಾಶ್ಮೀರದ ದೊರೆ ಅವಂತಿವರ್ಮನ (ಕ್ರಿಸಾಬ್ದ 855-884) ಆಸ್ಥಾನದಲ್ಲಿದ್ದವನು. ಅವನ ಕೃತಿಗೆ 'ಕಾವ್ಯಾಲೋಕ', 'ಸಹೃದಯಾಲೋಕ' ಎಂಬ ಹೆಸರುಗಳೂ ಇದ್ದುವು. ಆನಂದವರ್ಧನನು ಇದಕ್ಕೆ ವ್ಯಾಖ್ಯಾನವನ್ನು ಬರೆದು ಧ್ವನಿಪ್ರಸ್ಥಾನವನ್ನು ಎತ್ತಿಹಿಡಿದನು. ಭರತನೇ ಪರ್ಯಾಯೋಕ್ತಿಯಲ್ಲಿ ಧ್ವನಿಯನ್ನು ಸೇರಿಸಿದ್ದನು. ಹೀಗಾಗಿ ರಸಸಿದ್ಧಾಂತಕ್ಕೆ ಧ್ವನಿಪ್ರಸ್ಥಾನವು ಹೊಂದಿಕೊಳ್ಳುವಂತೆಯೇ ಇದ್ದಿತು. ಆನಂದವರ್ಧನನ ನಿಲುವಿನತ್ತ ಅಭಿನವಗುಪ್ತನ ಗಮನ ಹರಿದದ್ದು ಸಹಜವೇ. ಇದರಲ್ಲಿ ಗುರುವಾದ ಭಟ್ಟೇಂದುರಾಜನ ಪ್ರಭಾವವೂ ಇದ್ದಿತು. ಈ ವಿಚಾರ ಮೊದಲೇ ಬಂದಿದೆ.

ಭಟ್ಟತೋತನ 'ಕಾವ್ಯಕೌತುಕ'ಕ್ಕೂ ವಿವರಣವೊಂದನ್ನು ಅಭಿನವಗುಪ್ತನು ಸಿದ್ಧಪಡಿಸಿದನು. 'ಕಾವ್ಯಕೌತುಕ'ವು ಈಗ ಉಪಲಬ್ಧವಿಲ್ಲ. ಆದರೆ 'ಕಾವ್ಯದರ್ಪಣ'ಕಾರನಾದ ರಾಜಚೂಡಾಮಣಿ ದೀಕ್ಷಿತನ ಕಾಲದಲ್ಲೂ (ಎಂದರೆ 1630ರ ಸುಮಾರು) ಇದು ಅವನೆದುರು ಇದ್ದಿತು; ಅವನೇ 'ಅಲಂಕಾರಚೂಡಾಮಣಿ'ಯೆಂಬ ಗ್ರಂಥವನ್ನೂ ರಚಿಸಿದ್ದಾನೆ. ಹೇಮಚಂದ್ರನ 'ಕಾವ್ಯಾನುಶಾಸನ'ದಲ್ಲಿ ಭಟ್ಟತೋತನ ಕವಿಲಕ್ಷಣವನ್ನು ಉದ್ಧರಿಸಲಾಗಿದೆ. ಕವಿಗೆ ದರ್ಶನವೂ ಇರಬೇಕು, ವರ್ಣನಾಶಕ್ತಿಯೂ ಇರಬೇಕೆಂದು ಇಲ್ಲಿನ ನಿರೂಪಣೆ. ರಸವನ್ನು ಕುರಿತಂತೆ ಲೊಲ್ಲಟನ ಮತ್ತು ಶ್ರೀಶಂಕುಕನ ಅಭಿಪ್ರಾಯಗಳನ್ನು ಭಟ್ಟತೋತನು ನಿರಾಕರಿಸಿದ್ದಾನೆ. ಈ ಗ್ರಂಥಕ್ಕೆ ಅಭಿನವಗುಪ್ತನ ವಿವರಣವೂ ದೊರಕದೆ ಇರುವುದೊಂದು ದುರ್ದೈವ.

'ಘಟಕರ್ಪರಕುಲಕವಿವೃತಿ'ಯೆಂಬುದಿನ್ನೊಂದು ಗ್ರಂಥ. ಕಾಳಿದಾಸನದೆಂದು (20ನೆಯ ಪದ್ಯವನ್ನು ಬಿಟ್ಟು) ಅಭಿನವಗುಪ್ತನ ಅಭಿಪ್ರಾಯ; ಇಪ್ಪತ್ತೊಂದು ಕವಿತೆಗಳುಳ್ಳ ಈ ಲಘುಕಾವ್ಯವು ಘಟಕರ್ಪರನೆಂಬ ಇನ್ನೊಬ್ಬ ಕವಿಯದೆಂದು ಸಾಮಾನ್ಯವಾಗಿ ಎಣಿಕೆಯಿದೆ. ಘಟಕರ್ಪರವೆಂದರೆ ಒಡೆದ ಮಡಕೆಯ ಚಿಪ್ಪು. ಕವಿತ್ವದಲ್ಲಿ ತನ್ನನ್ನು ಸೋಲಿಸಿದ ಕವಿಗೆ ತಾನು ಈ ಚಿಪ್ಪಿನಲ್ಲಿ ನೀರನ್ನು ಒಯ್ಯುವೆನೆಂದು ಕವಿ ಪ್ರತಿಜ್ಞೆಮಾಡುತ್ತಾನೆ. ವಿವೃತಿಯೇನೋ ಸ್ವಾರಸ್ಯವಾಗಿದೆ.

ಉಳಿದಂತೆ ಅವನ ಕೃತಿಗಳಲ್ಲಿ ದರ್ಶನಶಾಸ್ತ್ರಭಾಗವೇ ಹೆಚ್ಚು. ಪ್ರತ್ಯಭಿಜ್ಞಾ (ತ್ರಿಕ), ಕುಲ, ಕ್ರಮ ಎಂಬ ಸಂಪ್ರದಾಯಗಳಲ್ಲಿರುವ ಮುಖ್ಯಪ್ರಮೇಯಗಳನ್ನೂ ಸಾಧನಾಪ್ರಕ್ರಿಯೆಗಳನ್ನೂ ಜಿಜ್ಞಾಸುಗಳಿಗೆ, ಸಾಧಕರಿಗೆ ಮನವರಿಕೆಮಾಡಿಕೊಡಲೆಂದು, ಶೈವಾಗಮಗ್ರಂಥಗಳ ದೃಷ್ಟಿಯನ್ನು ಸ್ಪಷ್ಟಪಡಿಸಲೆಂದು, ಶಾಸ್ತ್ರದ ಒಕ್ಕಣೆಯಲ್ಲಿ ಅಡಗಿರುವ ರಹಸ್ಯಾರ್ಥಗಳನ್ನು ತೋರಿಸಲೆಂದು ಸಿದ್ಧವಾಗಿರುವ ಕೃತಿಗಳೇ ಹೆಚ್ಚು. ಇವುಗಳಲ್ಲಿ 'ತಂತ್ರಾಲೋಕ'ವೆಂಬ ಸ್ವತಂತ್ರಕೃತಿ ಬಹುಮೌಲಿಕವಾದುದು. ಅರವತ್ತುನಾಲ್ಕು ಅದ್ವಯಶೈವಾಗಮಗಳ ಜಾಡು ಇಲ್ಲಿ ಕಾಣುತ್ತದೆ. ಕೌಲಿಕ, ತಾಂತ್ರಿಕಸಂಪ್ರದಾಯಗಳ ವಿವರಗಳು ಇಲ್ಲಿವೆ. ಮೂವತ್ತೇಳು ಆಹ್ನಿಕಗಳುಳ್ಳ ಗ್ರಂಥ ಇದು; ಕಡೆಯ ಇಪ್ಪತ್ತು ಆಹ್ನಿಕಗಳಷ್ಟು ಇನ್ನೂ ಹಸ್ತಪ್ರತಿಯಲ್ಲೇ ಇವೆ; ಉಳಿದವು ಅಚ್ಚಾಗಿವೆ.

ಇದಕ್ಕೆ ಜಯರಥನ ವ್ಯಾಖ್ಯಾನ ಪ್ರಸಿದ್ಧವಾದುದು. ಮುಖ್ಯವಾಗಿ ಮಾಲಿನೀವಿಜಯತಂತ್ರವನ್ನು ಅನುಸರಿಸಿರುವ ಗ್ರಂಥ ತಂತ್ರಾಲೋಕ; ತ್ರಿಕಪ್ರಸ್ಥಾನವನ್ನೇ ಕುರಿತದ್ದು ಇದು.

ತಂತ್ರಾಲೋಕದ ಗಾತ್ರಕ್ಕೆ ಬೆದರುವವರ ಸಲುವಾಗಿ ಅಭಿನವಗುಪ್ತನೇ ಅದರ ಸಂಗ್ರಹವೊಂದನ್ನು (22 ಆಹ್ನಿಕಗಳಲ್ಲಿ) ಸಿದ್ಧಪಡಿಸಿದ್ದಾನೆ; 'ತಂತ್ರಸಾರ'ವೆಂದು ಇದರ ಹೆಸರು. ಇದಕ್ಕೂ ಅಂಜಿದವರಿಗೆ ಇನ್ನೊಂದು ಸಂಗ್ರಹ, 'ತಂತ್ರವಟಧಾನಿಕಾ'. ಆದರೆ ಇದು ಅಭಿನವಗುಪ್ತನದೇ ಹೌದೊ ಎಂಬ ವಿಚಾರವಾಗಿ ಸಂಶಯವಿದೆ.

ಅಭಿನವಗುಪ್ತನ ಶಾಸ್ತ್ರಗ್ರಂಥಗಳಲ್ಲಿ ಪ್ರಮುಖವಾದುದು ಉತ್ಪಲದೇವನ ಈಶ್ವರಪ್ರತ್ಯಭಿಜ್ಞಾ ಸೂತ್ರಗಳಿಗೆ ಬರೆದಿರುವ 'ವಿಮರ್ಶಿನೀ' (ಇದನ್ನು ಲಘ್ವೀವಿಮರ್ಶಿನೀ ಎನ್ನುತ್ತಾರೆ). ಇದರಲ್ಲಿ ನಾಲ್ಕು ಸಾವಿರ ಶ್ಲೋಕಗಳಿವೆ (ಶ್ಲೋಕವೆಂದರೆ 32 ಅಕ್ಷರಗಳ ಗುಂಪು; ಇದು ಚತುಃಸಾಹಸ್ರಿ). ಉತ್ಪಲದೇವನೇ ತನ್ನ ಗ್ರಂಥಕ್ಕೆ ವಿವೃತ್ತಿಯೊಂದನ್ನು ರಚಿಸಿದ್ದಾನೆ; ಇದಕ್ಕೂ ಅಭಿನವಗುಪ್ತನ 'ವಿಮರ್ಶಿನೀ' ವ್ಯಾಖ್ಯಾನವಿದೆ (ಬೃಹತೀವಿಮರ್ಶಿನಿ); ಇದರಲ್ಲಿ ಹದಿನೆಂಟು ಸಾವಿರಶ್ಲೋಕಗಳು (ಅಷ್ಟಾದಶಸಾಹಸ್ರಿ). ತನ್ನ ಗುರು ಲಕ್ಷ್ಮಣಗುಪ್ತನ ಧೋರಣೆಯನ್ನು ಹಿಡಿದು ವಿಮರ್ಶಿನಿಗಳು ಸಿದ್ಧವಾಗಿವೆ ('ಶ್ರೀಮಲ್ಲಕ್ಷ್ಮಣಗುಪ್ತದರ್ಶಿತಪಥಃ ಶ್ರೀಪ್ರತ್ಯಭಿಜ್ಞಾವಿಧೌ').

ಇವಲ್ಲದೆ ಪರಮಾರ್ಥಚರ್ಚಾ, ಮಹೋಪದೇಶವಿಂಶತಿಕಾ, ಬೋಧಪಂಚದಶಿಕಾ, ಪರಮಾರ್ಥದ್ವಾದಶಿಕಾ, ಕ್ರಮಸ್ತೋತ್ರ, ಭೈರವಸ್ತವ, ಅನುಭವನಿವೇದನ, ದೇಹಸ್ಥ ದೇವತಾಚಕ್ರಸ್ತೋತ್ರ ಮೊದಲಾದ ಸಣ್ಣಸಣ್ಣ ಕೃತಿಗಳನ್ನೂ ಅವನು ರಚಿಸಿದ್ದಾನೆ. ಇವುಗಳಲ್ಲಿ ದರ್ಶನಪ್ರಕ್ರಿಯೆಗಳೇ ಮುಖ್ಯವಾಗಿ ಬರುತ್ತವೆ. 'ಪರಮಾರ್ಥಸಾರ' ಎನ್ನುವುದೊಂದು ಪ್ರಸಿದ್ಧವಾದ ಕೃತಿ. ಇದರ ಮೂಲ ಶೇಷಮುನಿಯ 'ಆಧಾರಕಾರಿಕೆ'ಗಳು; ಇದರಿಂದಾಗಿ ಶೇಷಮುನಿಗೇ 'ಆಧಾರಶೇಷ'ನೆಂಬ ಹೆಸರು ಬಂದಿತು. ಈ ಸಂದರ್ಭದಲ್ಲಿ ಇದೊಂದು ವಿವರಣೆಯ ಅಗತ್ಯವಿದೆ. ತಂತ್ರಾಲೋಕದಲ್ಲಿ ಯೋಗಸೂತ್ರಗಳ ಕರ್ತೃವನ್ನು ಶೇಷಮಹಾ ಮುನಿಯೆಂದು ಕರೆಯಲಾಗಿದೆ (ಎಂಟನೆಯ ಆಹ್ನಿಕ). ಪರಾತ್ರಿಂಶಿಕೆಯಲ್ಲೂ ಶೇಷಮುನಿಯ ಪ್ರಸ್ತಾಪವಿದೆ. ಶೇಷಮುನಿಯೆಂದರೆ ಪತಂಜಲಿಯೆ ಎನ್ನುವುದೂ ಇದೆ.

ಶೇಷನೆಂದರೆ ಹಾವು. ಭಟ್ಟೇಂದುರಾಜನು ಅಭಿನವಗುಪ್ತನನ್ನು ಅಭಿನವಗುಪ್ತಪಾದನೆಂದು ಕರೆದನೆಂಬ ವಿಚಾರ ಆಗಲೇ ಬಂದಿದೆ. ಹಾವಿಗೆ ಗುಪ್ತಪಾದವೆಂದು ಹೆಸರು; ಹರಿದಾಡುವ ಹಾವಿಗೆ ಕಾಲುಗಳು ಒಳಗೇ ಅಡಗಿವೆಯೆಂಬ ಕಲ್ಪನೆ. ಪತಂಜಲಿಯೇ ಶೇಷಮುನಿ. ಪತಂಜಲಿಯೇ ಈಗ ಅಭಿನವ-ಗುಪ್ತಪಾದನಾಗಿ ಅವತರಿಸಿದ್ದಾನೆಂದು ಭಟ್ಟೇಂದುರಾಜನ ಎಣಿಕೆಯಿದ್ದೀತು; ಅಭಿನವಪತಂಜಲಿ ಎಂಬರ್ಥದಲ್ಲಿ. 'ಪರ್ಯಂತಪಂಚಾಶಿಕಾ' ಎಂಬ ಇನ್ನೊಂದು ಕೃತಿಯೂ ಅಭಿನವಗುಪ್ತನದ್ದು ಇದೆ. ಯೋಗವಾಸಿಷ್ಠಕ್ಕೂ ಅವನದೊಂದು ವ್ಯಾಖ್ಯಾನವಿದ್ದಿತೆಂದು ಹೇಳುತ್ತಾರೆ.

'ಭಗವದ್ಗೀತಾರ್ಥಸಂಗ್ರಹ' ಅವನದಿನ್ನೊಂದು ಸ್ವಾರಸ್ಯವುಳ್ಳ ಕೃತಿ. ಶೈವದೃಷ್ಟಿಯಿಂದ ಗೀತೆಗೆ ಪ್ರತ್ಯಭಿಜ್ಞಾದರ್ಶನದ ಪ್ರವರ್ತಕನೆನಿಸಿದ ವಸುಗುಪ್ತನೇ ಒಂದು ಭಾಷ್ಯವನ್ನು

ಬರೆದಿದ್ದನಂತೆ; 'ವಾಸವೀಟೀಕಾ' ಎಂದು ಅದರ ಹೆಸರು. ಅದು ಪೂರ್ಣವಾಗಿ ಉಪಲಬ್ಧವಿಲ್ಲ. ಅವನಿಂದ ನಾಲ್ಕನೆಯ ತಲೆಮಾರಿನ ಆಚಾರ್ಯ ಅಭಿನವಗುಪ್ತನು ಅದೇ ದೃಷ್ಟಿಯನ್ನು ಹಿಡಿದು ಗೀತೆಯಲ್ಲಿರುವ ಗೂಢಾರ್ಥವನ್ನು ತಿಳಿಯಹೇಳಿದ್ದಾನೆ. ಅವನು ಅವಲಂಬಿಸಿರುವ ಗೀತಾಪಾಠದಲ್ಲಿ 715 ಶ್ಲೋಕಗಳು (ವಾಡಿಕೆಯಲ್ಲಿರುವ ಪಾಠ 700 ಶ್ಲೋಕಗಳದ್ದು); ಕೆಲವು ಕಡೆ ಮಹತ್ತ್ವದ ಪಾಠಾಂತರಗಳೂ ಇವೆ. ಭಟ್ಟೇಂದುರಾಜನ ಬಳಿಯೇ ಅವನು ಗೀತೆಯನ್ನು ಕಲಿತನಾಗಿ ತನ್ನ ವ್ಯಾಖ್ಯಾನದಲ್ಲಿ ಅವನ ಮಾರ್ಗದರ್ಶನವನ್ನು ಸ್ಮರಿಸಿಕೊಂಡಿದ್ದಾನೆ.

ಅನೇಕ ಗುರುಗಳಿಂದ ಕಲಿತು, ಯುಕ್ತಿಯಿಂದ ಪರಾಮರ್ಶಿಸಿ, ಅನುಭವದಿಂದ ಗಟ್ಟಿಮಾಡಿಕೊಂಡದ್ದನ್ನು ಅಭಿನವನು ತನ್ನ ಗ್ರಂಥಗಳಲ್ಲಿ ನಿರೂಪಿಸಿದನು. ಎಲ್ಲರಿಗೂ ತಾನು ಶಿಷ್ಯ ಎಂದಾದಮೇಲೆ ಉಪದೇಶಗಳಿಗೆ ಬಡತನವೆ? ('ತಸ್ಯ ಮೇ ಸರ್ವಶಿಷ್ಯಸ್ಯ ನೋಪದೇಶ ದರಿದ್ರತಾ'). ಎಲ್ಲವನ್ನೂ ಇದೇ ಭಾವನೆಯಿಂದ ಕಂಡವನ ಜ್ಞಾನ ಹೆಚ್ಚಿನದು ತಾನೆ? ತಂತ್ರಾಲೋಕದ ವ್ಯಾಖ್ಯಾನಕಾರನಾದ ಜಯರಥನು ಅಭಿನವಗುಪ್ತನ ಮೇಲಿನ ಮಾತನ್ನು ಹೇಳಿ, ಅನಂತರ ಮಾಡಿರುವ ಒಕ್ಕಣೆ ಹೀಗಿದೆ—

ದೃಶಾ ಸರ್ವತ್ರೈವ ಗುರೂಪದೇಶಸ್ಯ ಭಾವಾತ್ ಆತ್ಮನಿ
ಭೂಯೋವಿದ್ಯತ್ವಂ ದರ್ಶಯತಾ ಗ್ರಂಥಕೃತಾ...

ಮೇಲೆ ಹೇಳಿದಂತೆ, ಅಭಿನವಗುಪ್ತನ ಕೃತಿಗಳಲ್ಲಿ ಶಾಸ್ತ್ರಭಾಗವೇ ಹೆಚ್ಚು. ಇದಕ್ಕೆ ಕಾರಣ ಅವನ ಒಲವು ಬರುಬರುತ್ತ ಸಾಧನೆಯ ಕಡೆ ಸಾಗಿಬಂದದ್ದು. ವಿರಕ್ತಿ ಮೂಡಿದ್ದಿತಾಗಿ ಪ್ರಾಪಂಚಿಕಸುಖಭೋಗಗಳಿಂದ ದೂರ ನಿಂತು, ಆಂತರಿಕಯೋಗವನ್ನು ಪಟ್ಟಾಗಿ ಹಿಡಿದಿದ್ದನು. ಅವನನ್ನು ಮನಸಾರೆ ಮೆಚ್ಚಿಕೊಂಡಿದ್ದ ಮಹೇಶ್ವರಾನಂದನು ತನ್ನ ಮಹಾರ್ಥಮಂಜರಿಯಲ್ಲಿ ತನ್ನ ವಿಚಾರವಾಗಿ ಹೇಳಿಕೊಂಡಿರುವುದು ಅಭಿನವಗುಪ್ತನಿಗೂ ಅನ್ವಯಿಸುತ್ತದೆ. ಅವನೂ ಅಭಿನವಗುಪ್ತನ ಧ್ವನ್ಯಾಲೋಕಲೋಚನಕ್ಕೆ ವ್ಯಾಖ್ಯಾನವನ್ನು ಬರೆದಿದ್ದವನು; ಪ್ರತ್ಯಭಿಜ್ಞಾದರ್ಶನದ ಅನೇಕ ಪ್ರಮೇಯಗಳನ್ನು ತನ್ನ ಕೃತಿಯಲ್ಲಿ ಅಳವಡಿಸಿಕೊಂಡಿದ್ದಾನೆ. ಅವನ ಮಾತು—

ಸಾಹಿತ್ಯಾಬ್ಧೌ ಕರ್ಣಧಾರೋಽಹಮಾಸಂ
ಕಾವ್ಯಾಲೋಕಂ ಲೋಚನಂ ಚಾನುಶೀಲ್ಯ ।
ತದ್ವತ್ ಸ್ವಚ್ಛಂ ಲಬ್ಧವಾನಸ್ಮಿ ಬೋಧಂ
ಪಾಂಥೋ ಭೂತ್ವಾ ಪ್ರತ್ಯಭಿಜ್ಞಾಪದವ್ಯಾಂ ॥

ಮೊದಲಿಗೆ ಸಾಹಿತ್ಯಸಮುದ್ರದಲ್ಲಿ ದೋಣಿಗನಾಗಿದ್ದವನು, ಅನಂತರ ದರ್ಶನಕ್ಷೇತ್ರದಲ್ಲಿ ಆಸಕ್ತನಾಗಿ ಆತ್ಮಸಾಕ್ಷಾತ್ಕಾರದ ಹಂಬಲವನ್ನು ಹಚ್ಚಿಕೊಂಡನು. ಮೊದಲು 'ಕರ್ಣಧಾರ'; ಹರಿಯುವ ನೀರಿನ ಮೇಲೆ ಹರಿಗೋಲನ್ನು ನಡೆಸುವ ಅಂಬಿಗ. ಅನಂತರ 'ಪಾಂಥ'ನಾದ; ಗಟ್ಟಿನೆಲದ ಮೇಲೆ ಗೊತ್ತಾದ ದಾರಿ ಹಿಡಿದು ನಡೆದಾಡುವ ಪಯಣಿಗನಾದ.

ಅಭಿನವಗುಪ್ತನಲ್ಲೂ ಇದೇ ಪರಿವರ್ತನೆಯಾಯಿತೆಂದು ತೋರುತ್ತದೆ. ಆದರೆ ಅವನಿಗೆ ಮೊದಲಿಂದಲೂ ಶಾಸ್ತ್ರಪ್ರೀತಿಯಿದ್ದಿತೆಂಬುದು 'ಅಭಿನವಭಾರತಿ'ಯಿಂದಲೂ 'ಲೋಚನ' ದಿಂದಲೂ ತಿಳಿದುಬರುತ್ತದೆ. ತಂದೆತಾಯಿಯರ ಧಾರ್ಮಿಕಪ್ರಭಾವ ಅವನ ಮೇಲೆ ಬಲವಾಗಿ ಮುದ್ರೆಯೊತ್ತಿದ್ದಿತು.

ಆದರೆ ಶೈವಸಂಪ್ರದಾಯದ ಕವಿಗಳಿಗೆ ಸಾಹಿತ್ಯದಲ್ಲಿ ಆಧ್ಯಾತ್ಮವನ್ನು ಕಂಡುಕೊಳ್ಳುವುದು, ಕಾಣಿಸುವುದು ಸೋಜಿಗವೇನಲ್ಲ. ಅಲಂಕಾರಶಾಸ್ತ್ರಕ್ಷೇತ್ರದಲ್ಲಿ ಪ್ರಸಿದ್ಧನಾದ ಮಮ್ಮಟನ (ಹನ್ನೊಂದನೆಯ ಶತಮಾನ) ವಿಚಾರವಾಗಿ ಆನಂದನೆಂಬುವನ ಕಾವ್ಯದರ್ಶನದಲ್ಲಿ ಬರುವ ಒಕ್ಕಣೆ ಇದು. ಆನಂದನು ಕಾಶ್ಮೀರದ ರಾಜಾನಕ ರತ್ನಕಂಠನೆಂಬುವನ (1665ರ ಸುಮಾರು) ಸ್ನೇಹಿತ. ಅವನ ಗ್ರಂಥಕ್ಕೆ 'ಶಿತಿಕಂಠವಿಬೋಧನ' (ಎಂದರೆ ಶಿವನ ನೋಟ) ಎಂಬ ಹೆಸರೂ ಇದೆ. ಮಮ್ಮಟನೂ ಕಾಶ್ಮೀರದವನೇ, ಶೈವಶ್ರದ್ಧಾಳುವೇ. ಆನಂದನ ಪ್ರಕಾರ, ಇವನು ಕಾವ್ಯದಲ್ಲಿ ಅಡಗಿರುವ ಶಿವತತ್ತ್ವವನ್ನು ಅಭೇದಪ್ರಥೆಯನ್ನು, ಶುದ್ಧವಿದ್ಯೆಯನ್ನು (ಪ್ರತ್ಯಭಿಜ್ಞೆಯನ್ನು) ಎತ್ತಿತೋರಿಸಲೆಂದೇ ಕಾವ್ಯಪ್ರಕಾಶವನ್ನು ರಚಿಸಿದನು—

ರಾಜನಕಕುಲತಿಲಕೋ ಮಮ್ಮಟನಾಮಾ ದೇಶಿಕವರಃ ಲೌಕಿಕಸ್ಯ
ಕಾವ್ಯಪ್ರಕಾಶನೇ ಪ್ರವೃತ್ತೋಽಪಿ ಅಭ್ಯಂತರಸ್ಯ ಕಾವ್ಯಸ್ಯ ಶಿವತತ್ತ್ವಸ್ಯ
ಪ್ರಕಾಶಿಕಾಂ ಅಭೇದಪ್ರಥೋತ್ಥಾಪಿಕಾಂ ಶುದ್ಧವಿದ್ಯಾಂ ದರ್ಶಯತಿ

ಕಾವ್ಯಪ್ರಕಾಶಕ್ಕೆ ವ್ಯಾಖ್ಯಾನವನ್ನು ಬರೆದ ಶಾರದಾತನಯನೂ ಶೈವಾಗಮಕ್ಕೆ ಒಲಿದಿದ್ದವನು, ಪ್ರತ್ಯಭಿಜ್ಞಾಶಾಸ್ತ್ರದಲ್ಲಿ ಪರಿಣತನಾಗಿದ್ದವನು.

ಕಾವ್ಯದ ಸ್ವರೂಪ, ಸ್ವಭಾವಗಳು ಲೌಕಿಕವಾದರೂ ಪ್ರಯೋಜನ-ಸಾರ್ಥಕತೆಗಳು ಅಧ್ಯಾತ್ಮಪರವಾದುವೇ. ಅಭಿನವನಿಗೆ ಹಿಂದಿನವನಾದ ಭಟ್ಟನಾಯಕನು ನಾಟ್ಯದಲ್ಲಿ ಶಾಂತರಸವೇ ಮುಖ್ಯವಾದುದೆಂದೂ, ಅದರಿಂದ ಪಾರಮಾರ್ಥಿಕಪ್ರಯೋಜನವೇ ಇದೆಯೆಂದೂ, ಪುರುಷಾರ್ಥಸಾಧನೆಗೆ ದಾರಿಯೆಂದೂ ತನ್ನ 'ಹೃದಯದರ್ಪಣ'ದಲ್ಲಿ (ಪುಮರ್ಥೋಪಾಯತಾಂ ಏತಿ) ಹೇಳಿರುವುದನ್ನು ಅಭಿನವನು ಉಲ್ಲೇಖಿಸಿದ್ದಾನೆ.

ಭಟ್ಟನಾಯಕನು ತನ್ನ ಅಭಿಧಾವ್ಯಾಪಾರಪ್ರಾಧಾನ್ಯವಾದದಿಂದ ಕಾವ್ಯದ ರೂಪಕ್ಕೂ ಶಾಸ್ತ್ರದ ರೂಪಕ್ಕೂ ಇರುವ ಭೇದವನ್ನು ತಿಳಿಯಹೇಳಿದನು. ಕಾವ್ಯದ ವೈಶಿಷ್ಟ್ಯವೆಂದರೆ ಅದರಲ್ಲಿ ಭಾವಕತ್ವ-ಬೋಧಕತ್ವ ಗುಣಗಳಿದ್ದು, ಅದರಿಂದ ಕಾವ್ಯದ ಆತ್ಮವಾದ ರಸವು ಹೊರಹೊಮ್ಮುವುದು. ಶೈವಾಗಮಗಳಲ್ಲಿಯೂ ಭಾವನೆಯ ಪಾತ್ರ, ಆನಂದದ ಅನುಭವ ಎರಡನ್ನೂ ಎತ್ತಿಹಿಡಿದಿದ್ದಾರೆ. ರಸವಾಗಲಿ ಧ್ವನಿಯಾಗಲಿ ಶೈವಾಗಮಸಿದ್ಧಾಂತತತ್ತ್ವಕ್ಕೆ ಹೊರಗಿನದಲ್ಲ. ಈ ಕಾರಣದಿಂದಲೇ ಕಾಶ್ಮೀರದ ಹಲವು ಮಹಾಮಾಹೇಶ್ವರರೂ ರಾಜಾನಕರೂ ಕವಿಗಳೂ ಆಗಿದ್ದರು, ಶಾಸ್ತ್ರಕಾರರೂ ಆಗಿದ್ದರು. ಅಭಿನವನ ಮೊದಲೂ ಅನಂತರವೂ ಈ ಬಗೆಯ ಸವ್ಯಸಾಚಿಗಳಿದ್ದರು.

ಇದಕ್ಕೆ ಸಮಧಾನವನ್ನೂ ಅಭಿನವನೇ ಒದಗಿಸಿದ್ದಾನೆ. ಸಹಜವಾಗಿ ಯಾರ ಮನಸ್ಸು ನಿರ್ಮಲವಾಗಿದ್ದು ಕನ್ನಡಿಯಂತೆ ಹೊಳೆಯುವುದೋ ಅವರಿಗೆ ಸಾಂಸಾರಿಕ ದೋಷ-ಕ್ಲೇಶಗಳು ದೂರವಾಗಿಯೆ ಇರುತ್ತವೆ. ಅವರೀಗ ಕಾವ್ಯಾನುಭವ, ನಾಟ್ಯಾನುಭವಕ್ಕೆ ಅಧಿಕಾರಿಗಳು. ಇದೊಂದು ಬಗೆಯ ಯೋಗವೇ. ಅವನ ಮಾತುಗಳ ಸ್ವಾರಸ್ಯವನ್ನು ಮೂಲದಲ್ಲಿಯೇ ಆಸ್ವಾದಿಸಬೇಕು—

ಅಧಿಕಾರೀ ಚಾತ್ರ ವಿಮಲಪ್ರತಿಭಾನಶಾಲಿಹೃದಯಃ । ತತ್ರ ಯೇ ಸ್ವಭಾವತೋ ನಿರ್ಮಲ ಮುಕುರಹೃದಯಾಃ ತೇ ಏವ ಸಂಸಾರೋಚಿತಕ್ರೋಧಮೋಹಾಭಿಲಾಷಪರವಶಮಾನಸಃ ನ ಭವಂತಿ। ತೇಷಾಂ ತಥಾವಿಧ ದಶರೂಪಕ ಆಕರ್ಣನಸಮಯೇ ಸಾಧಾರಣರಸನಾತ್ಮಕ ಚರ್ವಣಾಗ್ರಾಹ್ಯಃ ರಸಸಂಚಯಃ ನಾಟ್ಯಲಕ್ಷಣಃ ಸ್ಫುಟ ಏವ । ಯೇ ತು ಅತಥಾಭೂತಾಃ ತೇಷಾಂ ಪ್ರತ್ಯಕ್ಷೋಚಿತಚರ್ವಣಾಲಾಭಾಯ ನಟಾದಿಪ್ರಕ್ರಿಯಾ ।

ಮುಖ್ಯವಾಗಿ ಅವನು ಶೈವಾಚಾರ್ಯ; ಮತ್ತು 'ಅಭಿನವಭಾರತಿ'ಯಲ್ಲಿ ತನ್ನನ್ನು 'ಶಿವಸ್ಮೃತಿಕೃತಾರ್ಥ' (ಶಿವನ ಧ್ಯಾನವನ್ನೇ ಬದುಕಿನ ಪ್ರಯೋಜನವನ್ನಾಗಿ ಕಂಡುಕೊಂಡವನು) ಎಂದು ಬಣ್ಣಿಸಿಕೊಂಡಿದ್ದಾನೆ. ಅವನ ಅನೇಕ ಗ್ರಂಥಗಳು ಅವನ ಶಿಷ್ಯರ ಒತ್ತಾಯಕ್ಕೆ ಮಣಿದು ರಚಿಸಲ್ಪಟ್ಟುವು; ಗ್ರಂಥಗಳಲ್ಲಿ ಶಿಷ್ಯರನ್ನು ಹೆಸರಿಸಿಯೂ ಇದ್ದಾನೆ. 'ತಂತ್ರಾಲೋಕ'ವನ್ನು ಬರೆಯಲು ಅವನ ತಮ್ಮ ಮನೋರಥ, ಶಿಷ್ಯ ಮಂದ್ರ, ರಾಮಗುಪ್ತ ಮೊದಲಾದವರು ಕಾರಣರಾದರು. 'ಭಗವದ್ಗೀತಾರ್ಥಸಂಗ್ರಹ'ವನ್ನು ರಚಿಸಿದ್ದು ಲೋಟಕನೆಂಬುವವನ ಕೋರಿಕೆಯ ಮೇರೆಗೆ. 'ಪರಾತ್ರೀಶಿಕೆ'ಯನ್ನು ರಚಿಸಿದ್ದು ಮನೋರಥ ಮತ್ತು ಕರ್ಣ ಇವರಿಬ್ಬರ ಬೇಡಿಕೆಯಂತೆ. ಅವನ ಲಘುಕೃತಿಗಳಲ್ಲಿ ಸ್ತೋತ್ರಗಳು ಸ್ವಾರಸ್ಯವಾಗಿವೆ. ಶೈವಾಗಮದ ಸಾರಸಂಗ್ರಹರೂಪವಾಗಿವೆ ಇವು. ಅಭಿನವಗುಪ್ತನು ಏನನ್ನು ಬರೆದರೂ ಹೃದಯದಿಂದ ಬಂದದ್ದೇ ಆದುದರಿಂದ ನಮ್ಮ ಹೃದಯದಲ್ಲೇ ಬರೆದಿಟ್ಟಂತೆ ತೋರುತ್ತದೆ; ಬೇರೆ ಶಾಸ್ತ್ರಕಾರರು ಬರೆದದ್ದು ನೀರಿನ ಮೇಲೆ ಬರೆದಂತೆ, ಎಂದು ಅವನ ಶಿಷ್ಯ ಮಧುರಾಜನ ಎಣಿಕೆ; ತನ್ನ ಹೃದಯದಲ್ಲಿರುವ ದೇವತೆಗೆ ಇಟ್ಟ ಎಡೆ ಅಗ್ನಿಗೆ ಸಲ್ಲಿಸಿದ ಆಹುತಿಯಂತೆ. ಇತರ ದೇವತೆಗಳಿಗೆ ಒಪ್ಪಿಸಿದ್ದು ಬೂದಿಯಲ್ಲಿ ಮಾಡಿದ ಹೋಮದಂತೆ ಎಂದು ಹೋಲಿಕೆಯನ್ನು ನೀಡಿದ್ದಾನೆ—

ಅಭಿನವಗುಪ್ತನಾಥಲಿಖಿತಂ ಲಿಖಿತಂ ಹೃದಯೇ
ತದಿತರಶಾಸ್ತ್ರಕಾರಲಿಖಿತಂ ಲಿಖಿತಂ ಸಲಿಲೇ ।
ಸ್ವಹೃದಯದೇವತಾಮುಖಹುತಂ ಹುತಮಗ್ನಿಮುಖೇ
ತದಿತರದೇವತಾಸು ನಿಹಿತಂ ನಿಹಿತಂ ಭಸಿತೇ ॥

(ಗುರುನಾಥಪರಾಮರ್ಶ, 31)

- 5 -

'ಶಿವಮತಕಮಲೋನ್ಮೀಲನಪ್ರೌಢಭಾಸ್ವಾನ್'

ಶೈವಸಿದ್ಧಾಂತವೆಂಬ ತಾವರೆಯನ್ನು ಅರಳಿಸಿದ ಸೂರ್ಯನೆಂದು ಅಭಿನವಗುಪ್ತನು ಬೇರೊಬ್ಬನನ್ನು ಬಣ್ಣಿಸಿದ್ದಾನೆ. ಆದರೆ ಈ ವರ್ಣನೆ ಅಭಿನವಗುಪ್ತನಿಗೇ ವಿಶೇಷವಾಗಿ ಸಲ್ಲುತ್ತದೆ. ಶೈವಸಂಪ್ರದಾಯದ ಸಾಹಿತ್ಯವನ್ನೂ ಸಾಧನೆಯನ್ನೂ ಸ್ವಾರಸ್ಯವನ್ನೂ ಕಾಪಿಡಲು, ಹರಡಲು, ಶೋಧನೆಮಾಡಿ ಶುದ್ಧವೆಂಬುದನ್ನು ಕಾಣಿಸಲು ಹೆಣಗಿದವರಲ್ಲಿ ಅಭಿನವಗುಪ್ತನಿಗೇ ಅಗ್ರಪಟ್ಟ. ಬೇರೆ ಯಾರೂ ಅವನಿಗೆ ಸಮನಾಗಿ ನಿಲ್ಲಲಾರರು; ಅವನನ್ನು ಮೀರಿಸುವ



ಮಾತು ದೂರ ಉಳಿಯಿತು! ಸಾಹಿತ್ಯರಚನೆಯಲ್ಲಿ ಮಾತ್ರ ಅವನು ಕೃತಾರ್ಥನಾಗಲಿಲ್ಲ; ವ್ಯಾಖ್ಯಾನಮಾಡಿ ವಿರಮಿಸಲಿಲ್ಲ. ಅವನು ಸಾಧಕ; ಶೈವಧರ್ಮದ ಸಾರಸರ್ವಸ್ವವನ್ನು ತನ್ನ ಅನುಭವದ ಮೂಸೆಯಲ್ಲಿ ಪರಿಷ್ಕರಿಸಿದವನು. ಸಾಧನೆಗೆ ಅಳವಡಲಾರದ ಸಿದ್ಧಾಂತದ ಮೇಲೆ ಅವನಿಗೆ ಆಕ್ಕರೆಯಿರಲಿಲ್ಲ.

ಶೈವಧರ್ಮದ ಉಗಮ ಎಂದು ಆದದ್ದು ಎಂದು ಕೇಳಿದರೆ ಇತಿಹಾಸತಜ್ಞರು ಕ್ರಿಸ್ತಾಬ್ದ ಮೂರು-ನಾಲ್ಕನೆಯ ಶತಮಾನದ ಸುಮಾರಿಗೆ ಎಂದು ಸೂಚಿಸುತ್ತಾರೆ. ಆದರೆ ಅಭಿನವಗುಪ್ತನ ಪಾಲಿಗೆ ಇದು ಅನಾದಿಸಿದ್ಧವಾದ ಧರ್ಮ; ಭೈರವನಿಂದಲೇ ಪ್ರವರ್ತಿತವಾದದ್ದು.

ಭೈರವನಿಂದ ಪ್ರವರ್ತಿತವಾದ ಶೈವಾಗಮಸಂಪ್ರದಾಯವು ಭೈರವೀದೇವಿ, ಸ್ವಚ್ಛಂದ, ಲಾಕುಲ, ಅಣುರಾಟ್, ಗಹನೇಶ, ಅಬ್ಜಜ (ಬ್ರಹ್ಮ), ಶಕ್ರ (ಇಂದ್ರ), ಗುರು ಈ ಪರಂಪರೆಯಲ್ಲಿ ಬಂದು ಗುರುವಿನಿಂದ ದಕ್ಷ, ಸಂವರ್ತ (ಅವಧೂತಸಿದ್ಧ, ತ್ರಿಪುರಾರಹಸ್ಯದಲ್ಲಿ ಉಲ್ಲೇಖಗೊಂಡವನು), ವಾಮನ, ಭಾರ್ಗವ (ಪರಶುರಾಮ), ಬಲಿ, ಸಿಂಹ (ರುದ್ರಾಂಶದ ನರಸಿಂಹ), ವಿನತಾಭೂ (ಗರುಡ), ವಾಸುಕಿನಾಗ ಇವರಿಗೆ ಸಂದಿತಂತೆ. ಸತ್ಯಯುಗದಲ್ಲಿ ಆರಂಭವಾದದ್ದು ಕಲಿಯುಗದವರೆಗೆ ಸಾಗಿಬಂದಿದೆಯೆಂದು ಅಭಿನವಗುಪ್ತನ ನಂಬಿಕೆ. ಅಭಿನವಗುಪ್ತನನ್ನು ಜನರು ಭೈರವನ ಅವತಾರವೇ ಎಂದು ಗುರುತಿಸಿದರೆನ್ನಿ.

ಈ ಆಗಮದಲ್ಲಿ ಅರ್ಧಭಾಗ ಮಾತ್ರ ಭೂಮಿಯಲ್ಲಿ ಉಳಿಯಿತಂತೆ. ಮೊದಲು ಅದನ್ನು ಗ್ರಹಿಸಿದವನು ರಾವಣನಂತೆ. ರಾವಣನಿಂದ ವಿಭೀಷಣನಿಗೆ, ವಿಭೀಷಣನಿಂದ ರಾಮನಿಗೆ, ರಾಮನಿಂದ ಲಕ್ಷ್ಮಣನಿಗೆ, ಲಕ್ಷ್ಮಣನಿಂದ ಸಿದ್ಧರಿಗೆ, ಸಿದ್ಧರಿಂದ ದಾನವರಿಗೆ, ದಾನವರಿಂದ ಗುಹ್ಯಕರಿಗೆ, ಗುಹ್ಯಕರಿಂದ ಮಾನವಯೋಗಿಗಳಿಗೆ ಸಾಗಿಬಂದ ಈ ಸಂಪ್ರದಾಯವು ಕಾಲಾಂತರದಲ್ಲಿ ಭ್ರಷ್ಟವಾಯಿತಂತೆ. ಆಗ ಶ್ರೀಕಂಠನಾಥನ ಆಣತಿಯಂತೆ ಸಿದ್ಧರು ಅವತರಿಸಿದರಂತೆ. ಇವರಲ್ಲಿ ತ್ರ್ಯಂಬಕ, ಅಮರ್ದ, ಶ್ರೀನಾಥ ಎಂಬುವರಿಂದ ಕ್ರಮವಾಗಿ ಅದ್ವಯಶೈವ (ಅಭೇದ), ದ್ವಯಶೈವ (ಭೇದ), ದ್ವಯಾದ್ವಯ (ಭೇದಾಭೇದ), ಶೈವಸಂಪ್ರದಾಯಗಳು ಮೈದಳೆದುವೆಂದು ಒಕ್ಕಣೆ.

ತ್ರ್ಯಂಬಕನಾಥನಿಂದ ಹತ್ತೊಂಬತ್ತನೆಯ ಪೀಳಿಗೆಯಲ್ಲಿ ಬಂದ ಗುರು ಸೋಮಾನಂದ ನಾಥ; ಅಭಿನವಗುಪ್ತನಿಗೆ ಪರಮೇಷ್ಠಿಗುರು. ಶಿವಸೂತ್ರಗಳನ್ನು ಸ್ವಪ್ನದಲ್ಲಿ ಶಿವನಿಂದಲೇ ಪಡೆದುಕೊಂಡು ಲೋಕಕ್ಕೆ ನೀಡಿದ ಸಿದ್ಧ ವಸುಗುಪ್ತನ ಶಿಷ್ಯ ಸೋಮಾನಂದ. ಸಿದ್ಧನಾಗಿದ್ದ ಭಟ್ಟಕಲ್ಲಟನೂ ವಸುಗುಪ್ತನ ಶಿಷ್ಯನೇ (ಕ್ರಿಸ್ತಾಬ್ದ 800-850ರ ಸುಮಾರಿಗೆ ಇದ್ದವರು). ಕಾಶ್ಮೀರಶೈವಸಂಪ್ರದಾಯದ ಮೂಲಪುರುಷರೆಂದರೆ ಮಹರ್ಷಿ ವಸುಗುಪ್ತ, ಭಟ್ಟಕಲ್ಲಟ ಮತ್ತು ದುರ್ವಾಸನ ಸಂತತಿಯವನಾದ ಸೋಮಾನಂದ. ಭಟ್ಟಕಲ್ಲಟನ ಪರಂಪರೆಯಲ್ಲಿ ಅವನ ಮಗ ಮುಕುಲ, ಅವನ ಶಿಷ್ಯ ಭಟ್ಟೇಂದುರಾಜ, ಅವನ ಶಿಷ್ಯ ಅಭಿನವಗುಪ್ತ—ಹೀಗೆ ಎಣಿಕೆಯಿದೆ.

ಸೋಮಾನಂದನು ಶಿವದೃಷ್ಟಿಯನ್ನು ರಚಿಸಿ ಪ್ರಸಿದ್ಧನಾದನು. ಅವನ ಮಗ

ಉತ್ಪಲದೇವನು ಈಶ್ವರಪ್ರತ್ಯಭಿಜ್ಞಾಕಾರಿಕೆಯನ್ನೂ ಅದಕ್ಕೆ ವೃತ್ತಿಯನ್ನೂ ರಚಿಸಿದನು. 'ಮಹಾಮಾಹೇಶ್ವರಾಚಾರ್ಯಶಿರೋಮಣಿ ರಾಜಾನಕ ಶ್ರೀಮದುತ್ಪಲದೇವ'ನ ಮಗ ಲಕ್ಷ್ಮಣಗುಪ್ತ; ಅಭಿನವಗುಪ್ತನು ಇವನ ಶಿಷ್ಯ. ತನ್ನ ಗುರುವಾದ ಲಕ್ಷ್ಮಣಗುಪ್ತನನ್ನು 'ತ್ರಯ್ಯಂಬಕಪ್ರಸರಸಾಗರವೀಚಿಸೋಮಾನಂದಾತ್ಮಜೋತ್ಪಲಜ'ನೆಂದು ಬಣ್ಣಿಸಿದ್ದಾನೆ.

ಸೋಮಾನಂದನದ್ದು ಇನ್ನೊಂದು ಹಿನ್ನೆಲೆಯನ್ನೂ ಶಿವದೃಷ್ಟಿ ಉಲ್ಲೇಖಿಸುತ್ತದೆ. ಶಿವನು ತನ್ನ ಮಾನಸಪುತ್ರ ತ್ರ್ಯಂಬಕಾದಿತ್ಯನಿಗೆ ಶೈವಸಂಪ್ರದಾಯಗಳನ್ನೆಲ್ಲ ತಿಳಿಸಿದನು; ತ್ರ್ಯಂಬಕನು ಗುಹೆಗೆ ಹೋಗಿ ತಪಸ್ಸುಮಾಡಿ ತನ್ನ ಮಾನಸಪುತ್ರರನ್ನು ಲೋಕಕ್ಕೆ ನೀಡಿದನು. ಇವರು ಹದಿನಾಲ್ಕು ಸಿದ್ಧರ ಸಂತತಿಗೆ ಕಾರಣರಾದರು. ಹದಿನೈದನೆಯ ಸಿದ್ಧನು ಸರ್ವಶಾಸ್ತ್ರವಿಶಾರದ; ಬಹಿರ್ಮುಖನಾದಾಗ ಮದುವೆಯಾದ; ಮಗನೊಬ್ಬ ಹುಟ್ಟಿದ. ಇವನು ಯಾತ್ರೆಮಾಡುತ್ತ ಕಾಶ್ಮೀರಕ್ಕೆ ಬಂದ. ಇವನ ಮಗ ಸಂಗಮಾದಿತ್ಯ; ಅವನ ಮಗ ವರ್ಷಾದಿತ್ಯ; ಅವನ ಮಗ ಅರುಣಾದಿತ್ಯ. ಅವನ ಮಗನೇ ಸೋಮಾನಂದನಾಥ. ಇವನು ರಚಿಸಿದ 'ಶಿವದೃಷ್ಟಿ'ಗೆ ಅಭಿನವಗುಪ್ತನು 'ಶಿವದೃಷ್ಟ್ಯಾಲೋಚನ'ವೆಂಬ ವ್ಯಾಖ್ಯಾನವನ್ನು

ರಚಿಸಿದ್ದಂತೆ ಸೂಚನೆಯಿದೆ. ಇಂದು ಅದು ದೊರಕುವುದಿಲ್ಲ. ಸೋಮಾನಂದನನ್ನು ಅಭಿನವನು 'ಶ್ರೀತ್ರ್ಯಂಬಕಸದ್ವಂಶಮಧ್ಯಮುಕ್ತಾಮಯಸ್ಥಿತಿ'ಯೆಂದು ಬಣ್ಣಿಸಿದ್ದಾನೆ.

ತ್ರ್ಯಂಬಕನ ಮಗಳ ಗುರುಸಂತತಿಯೊಂದು ಇದ್ದಿತು (ದುಹಿತೃಕ್ರಮಾತ್). ಇದನ್ನು ಅರ್ಧತ್ರ್ಯಂಬಕ ಎಂದು ವ್ಯವಹರಿಸುತ್ತಾರೆ (ಅತಿನಯ ಎಂದೂ ಹೆಸರಿದೆ). ಇದು ನಾಲ್ಕನೆಯ ಶಾಖೆ (ತುರ್ಯಾಖ್ಯ). ಇದು ಕಾಮರೂಪದಲ್ಲಿ (ಈಗಿನ ಅಸಮಪ್ರಾಂತ್ಯ) ಮೀನನಾಥನೆಂಬ ಸಿದ್ಧನಿಂದ (ಮಚ್ಛಂದೇನ ಮಹಾತ್ಮನಾ) ಪ್ರವರ್ತಿತವಾಯಿತೆಂದು 'ತಂತ್ರಾಲೋಕ'ದ ವ್ಯಾಖ್ಯಾನಕಾರ ಜಯರಥ ಹೇಳುತ್ತಾನೆ. ಮೀನನಾಥನಿಗೆ ತುರ್ಯನಾಥ ನೆಂದೂ ಹೆಸರಿದ್ದುದರಿಂದ ಈ ಶಾಖೆಗೆ ತುರ್ಯವೆಂಬ ಹೆಸರಾಯಿತು. ಈ ಪರಂಪರೆಯಲ್ಲಿ ('ದಕ್ಷಿಣಭೂಮಿಪೀಠವಸತಿಃ') ಸುಮತಿನಾಥ, ಅನಂತರ ಸೋಮದೇವ, ಅನಂತರ ಶಂಭುನಾಥರು ಆಚಾರ್ಯರಾಗಿ ಬಂದು, ಶಂಭುನಾಥನ ತರುವಾಯ ಅಭಿನವಗುಪ್ತನೇ ಆಚಾರ್ಯನಾದನಂತೆ. ಶಂಭುನಾಥನನ್ನು 'ತುರ್ಯಾಖ್ಯಸಂತತಿಮಹೋದಧಿಪೂರ್ಣಚಂದ್ರ' ನೆಂದು ಬಣ್ಣಿಸಲಾಗಿದೆ. ಶಂಭುನಾಥನಿಂದಲೇ ತನ್ನ ಹೃದಯಕಮಲ ಅರಳಿತೆಂದು ಅವನು ಹೇಳಿರುವುದನ್ನು ಈ ಮೊದಲೆ ಕಾಣಿಸಲಾಗಿದೆ. ('ಶ್ರೀಶಂಭುನಾಥಭಾಸ್ಕರಚರಣನಿಪಾತ ಪ್ರಭಾಪಗತಸಂಕೋಚಂ ಅಭಿನವಗುಪ್ತಹೃದಂಬುಜಂ') *(ತಂತ್ರಾಲೋಕ, 1, 51)*

ಹೀಗೆ ಅಭಿನವಗುಪ್ತನು ತ್ರ್ಯಂಬಕನಾಥನ ಅದ್ವಯಶೈವಸಂಪ್ರದಾಯದ ಮಠಕ್ಕೆ ಅಧಿಪತಿಯಾದನು. ಆದರೆ ಅಮರ್ದನ ದ್ವಯಶೈವಸಂಪ್ರದಾಯಕ್ಕೆ ಸೇರಿದ್ದ ವಾಮನಾಥ ನೆಂಬುವನ ಬಳಿಯೂ ಶಿಷ್ಯವೃತ್ತಿ ಮಾಡಿದನು ('ಅಮರ್ದಸಂತತಿಮಹಾರ್ಣವಕರ್ಣಧಾರಃ'); ಶ್ರೀನಾಥನ ದ್ವಯಾದ್ವಯಸಂಪ್ರದಾಯದ ಭೂತಿರಾಜತನಯನನ್ನೂ ತನ್ನ ಗುರುವಾಗಿ ಸ್ವೀಕರಿಸಿದ್ದನು ('ಶ್ರೀನಾಥಸಂತತಿಮಹಾಂಬರಘರ್ಮಕಾಂತಿಃ'). ಇವನನ್ನು ಮಹಾತ್ಮನೆಂದು ಕರೆದಿರುವುದಲ್ಲದೆ, ಲೋಕವೆಲ್ಲ ಅಜ್ಞಾನದ ಕತ್ತಲೆಯಲ್ಲಿದ್ದಾಗ ಸೂರ್ಯನಂತೆ ಬೆಳಗಿಸಿದವನು ಇವನೆಂದು ಬಣ್ಣಿಸಿದ್ದಾನೆ—

ಶ್ರೀಭೂತಿರಾಜಸ್ತದನುಸಮಭವತ್ತಸ್ಯ ಸೂನುರ್ಮಹಾತ್ಮಾ ।
ಯೇನಾಮೀ ಸರ್ವಲೋಕಾಸ್ತಮಸಿ ನಿಪತಿತಾಃ ಪ್ರೋದ್ಧೃತಾ ಭಾನುನೇವ ॥

ಭೂತಿರಾಜತನಯನೆಂದರೆ ಭಟ್ಟೇಂದುರಾಜನೇ ಎಂದೂ ಹೇಳುವುದಿದೆ. 'ಭಗವದ್ಗೀತಾರ್ಥಸಂಗ್ರಹ'ದಲ್ಲಿ ಅಭಿನವಗುಪ್ತನು ಕಾತ್ಯಾಯನಗೋತ್ರದ ಶೌಶುಕ, ಭೂತಿರಾಜ, ಭಟ್ಟೇಂದುರಾಜ ಎಂದು ಸಂತತಿಕ್ರಮವನ್ನು ಕಾಣಿಸಿರುವುದು ಇದನ್ನು ಸಮರ್ಥಿಸುವಂತಿದೆ. ಆದರೆ ಅಭಿನವಗುಪ್ತನು ಭಟ್ಟೇಂದುರಾಜನೆಂದೇ ಹೆಸರು ಹಿಡಿದು ಹಲವೆಡೆ ನಿರ್ದೇಶಿಸಿದ್ದಾನೆ; ಅಲ್ಲಿ ಎಲ್ಲಿಯೂ ಭೂತಿರಾಜತನಯನೆಂಬ ವರ್ಣನೆ ಕಾಣುವುದಿಲ್ಲ.

ಇದು ಹೇಗಾದರಿರಲಿ, ಅಭಿನವಗುಪ್ತನು ಸಿದ್ಧಾಂತ-ಸಾಧನೆಗಳಲ್ಲಿ ಹಿಡಿದದ್ದು ಹೊಸದೊಂದು ಮಾರ್ಗ. 'ಇತಿ ಪ್ರಕಟಿತೋ ಮಯಾ ಸುಘಟ ಏಷ ಮಾರ್ಗೋ ನವಃ' ಎಂದು ಅವನೇ ಹೇಳಿಕೊಂಡಿದ್ದಾನೆ. ಇದರಲ್ಲಿ ಅದ್ವಯ (ಅಭೇದ), ದ್ವಯ (ಭೇದ), ಮತ್ತು

ಭೈರವಸಮಾವೇಶ

ದ್ವಯಾದ್ವಯ (ಭೇದಾಭೇದ) ಮೂರೂ ಬೆರತುಕೊಂಡು, ಅದಕ್ಕಿಂತ ಉತ್ತಮವಾದುದಿಲ್ಲ ಎಂಬ ಕಾರಣದಿಂದ ಅದು 'ಅನುತ್ತರ' ಮಾರ್ಗವೆನಿಸಿಕೊಂಡಿತು. ಇದನ್ನು ಕಂಡುಕೊಂಡವನು ಅಭಿನವಗುಪ್ತನೇ. 'ಅತ್ರಾಭಿನವಗುಪ್ತೇನ ಭಾಸಿತಂ ತದನುತ್ತರಂ' ಎನ್ನುವ ಮಾತಿನ ಸ್ವಾರಸ್ಯವನ್ನು ಗಮನಿಸಿದಾಗ, ಅನುತ್ತರಮಾರ್ಗವನ್ನು ಪ್ರಚಾರಕ್ಕೆ ತಂದವನು ಅವನೇ ಎಂಬುದು ಸ್ಪಷ್ಟವಾಗುತ್ತದೆ. ಅವನು ಕಂಡುಕೊಂಡನೆಂದರೆ ತಾನೇ ಹುಟ್ಟಿಹಾಕಿದನೆಂದಲ್ಲ. 'ತಂತ್ರಾಲೋಕ'ದಲ್ಲಿ ಅವನೇ ಹೇಳಿರುವಂತೆ ತನ್ನ ಬುದ್ಧಿಶಕ್ತಿಯನ್ನು ಮಾತ್ರ ಅವಲಂಬಿಸಿ ಹೇಳುವವನಲ್ಲ ಅವನು—

ನ ಚೈತತ್ ಸ್ವೋಪಜ್ಞಮೇವಾಸ್ಮಾಭಿರುಕ್ತಂ;
ಅಪಿ ತು ಭಗವತಾ ಪೂರ್ವಾಚಾರ್ಯೈಶ್ಚ ಸರ್ವತ್ರೈವೋಕ್ತಮಿತಿ ।

ಪೂರ್ವದಲ್ಲಿ ಪ್ರಸಿದ್ಧವಾಗಿದ್ದುದು ಕಾಲಕ್ರಮದಲ್ಲಿ ಲುಪ್ತವೆನಿಸಿದಾಗ ಮತ್ತೆ ಅದನ್ನು ಕಾಣಿಸುವಾಗ ಅದರ ಸ್ವಾರಸ್ಯವನ್ನು ಕಂಡುಕೊಳ್ಳುವುದು ಮೊದಲ ಹೆಜ್ಜೆ ತಾನೆ? ಸೋಮಾನಂದನಾಥನೇ ಮೊದಲಾದವರಿಂದ ವಿವರಣೆಗೆ ಬಂದದ್ದು ಈ 'ಶಿವದೃಷ್ಟಿ'; ಇದೇ ಅನುತ್ತರ. ಪರಾತ್ರೀಶಿಕೆಯೆ ಅನುತ್ತರಪ್ರಕ್ರಿಯೆ ಎಂದು ಅಭಿನವಗುಪ್ತನೇ ಹೇಳುತ್ತಾನೆ. ಶಿವಶಕ್ತಿಸಂಘಟ್ಟಾತ್ಮಕವಾದುದು ಪರಾತ್ರಿಕಶಬ್ದವಾಚ್ಯವಾದುದೆಂದೂ ಹೇಳಿದನು. ತ್ರಿಕಶಾಸ್ತ್ರಕ್ಕೆ ಇನ್ನೊಂದು ಹೆಸರು ಪ್ರತ್ಯಭಿಜ್ಞಾದರ್ಶನ. ಶಿವನಿಗಿಂತ ಮಿಗಿಲಾದುದು ಇಲ್ಲ ಎಂಬರ್ಥದಲ್ಲಿ ಇದೇ ಅನುತ್ತರ ('ನ ವಿದ್ಯತೇ ಉತ್ತರಂ ಅಧಿಕಂ ಯತಃ'). ಇದೂ ಅಭಿನವಗುಪ್ತನ ವಿವರಣೆಯೇ. ಇದು ಮಾತಿಗೆ ಸಿಗುವುದಿಲ್ಲ ಎಂಬರ್ಥದಲ್ಲೂ ಅನುತ್ತರ ('ಉತ್ತರಂ ಚ ಶಬ್ದನಂ'). 'ಇದು ಹೀಗಿದೆ', 'ಅದು ಹಾಗಿದೆ' ಎಂದು ಹೇಳುವುದೆಲ್ಲ ಶಬ್ದನವೇ, ಇದು ಉತ್ತರ; ವಸ್ತುಗಳನ್ನು ಬೇರ್ಪಡಿಸಿ, ವಿಂಗಡಿಸಿ, ಒಡೆದು ಹೇಳುವುದು. ಇದು ಆಗಲಾರದಾದರೆ ಅನುತ್ತರ.

ಶಿವನು ವಿಶ್ವೋತ್ತೀರ್ಣನೂ ಹೌದು, ವಿಶ್ವಮಯನೂ ಹೌದು. ಹೀಗೆ ವ್ಯವಚ್ಛೇದ ಮಾಡಲಾಗದಿದ್ದರೆ ಅದು ಅನುತ್ತರ.

ಅಭಿನವಗುಪ್ತನು ಅನುತ್ತರನಾದ ಶಿವನನ್ನೆ ಎಡೆಬಿಡದೆ ಒಡಲಲ್ಲಿ ತುಂಬಿಕೊಂಡಿದ್ದನು; ತನ್ನ ಕೃತಿ 'ಪರಮಾರ್ಥಸಾರ'ದ ಕಡೆಯಲ್ಲಿ 'ಅಭಿನವಗುಪ್ತೇನ ಮಯಾ ಶಿವಚರಣ ಸ್ಮರಣದೀಪ್ತೇನ' ಎಂದು ಹೇಳಿಕೊಂಡಿದ್ದಾನೆ. ಶಿವನು ಅವನ ಒಡಲಲ್ಲೇ ನೆಲೆನಿಂತವನು. ಮತ್ತು ಅವನದು 'ಪರಃಶ್ರೇಯಃಸ್ವಭಾವ'; ಅವನು ಚಿತ್-ಆನಂದ ಎರಡೂ ಕಲೆತು ಒಂದಾಗಿರುವವನು. ಅವನ ಚರಣಗಳೆಂದರೆ ಚಿತ್-ಪ್ರಕಾಶದ ಬೆಳಕಿನ ಕಿರಣಗಳು. ಇವು ಅರಿವಿನಲ್ಲಿ ತುಂಬಿ ಬಂದರೆ ಅದು ಸ್ಮರಣ. ವಿಷಯಗಳನ್ನು ಅನುಭವಿಸುವಾಗಲೆಲ್ಲ, ಪ್ರತಿಗಳಿಗೆಯಲ್ಲೂ ಈ ಶಿವಾನುಭವ ಮರೆಯಾಗದಿದ್ದಾಗ ಅದೀಗ ದೀಪ್ತಿ. ಅಭಿನವಗುಪ್ತನದು ಈ ದೀಪ್ತಿ. ಮಿಗಿಲಿಲ್ಲದ ಆನಂದದ ರಸಾವೇಶದ ಬೆಳಕು ಅದು—

> **ಶಿವಸ್ಯ ಪರಶ್ರೇಯಃಸ್ವಭಾವಸ್ಯ ಸ್ವಾತ್ಮಸ್ಥಸ್ಯ ಚಿದಾನಂದೈಕಮೂರ್ತೇಃ ಯಾನಿ ಚರಣಾನಿ ಚಿದ್ರಶ್ಮಯಃ, ತೇಷಾಂ ಸ್ಮರಣಂ, ಶಬ್ದಾದಿವಿಷಯಗ್ರಹಣಕಾಲೇ ನಿಭಾಲನಂ ಪ್ರತಿಕ್ಷಣಂ ಸ್ವಾನುಭವಾಪ್ರಮೋಷಃ, ತೇನ ದೀಪ್ತಃ, ಪರಾನಂದ (ಪರಾಹಂತಾ) ಚಮತ್ಕಾರಭಾಸ್ವರಸ್ವಭಾವೋಽನೇನ ಉಕ್ತಃ ಸ್ಯಾತ್ ।**

ಅವನೊಂದಿಗೆ ಬೆರೆತ ಯಾರಾಗಲಿ ಅವನ ಅಪೂರ್ವವಾದ ವ್ಯಕ್ತಿತ್ವಕ್ಕೆ ಮಾರು ಹೋಗುತ್ತಿದ್ದರಂತೆ. ಅವನ ಗುರುಗಳು ಕೂಡ ತಮ್ಮೆಲ್ಲ ವಿದ್ಯೆಯನ್ನೂ ಅವನಿಗೆ ಧಾರಾಳವಾಗಿ ಒಪ್ಪಿಸಿಬಿಡುತ್ತಿದ್ದರಂತೆ. ಅವನನ್ನು ಶಿವನೆಂದೇ ಭಾವಿಸಿದ್ದವರು ಅವನ ಶಿಷ್ಯರು. ಇದಕ್ಕೆ ಕಾರಣ ಅವನು ಸಾಧಿಸಿದ್ದ ಆಧ್ಯಾತ್ಮಿಕ ಉನ್ನತಿ. 'ರುದ್ರಶಕ್ತಿಸಮಾವೇಶ' ಅವನಲ್ಲಿದ್ದಿತು. 'ಮಹಾಮಾಹೇಶ್ವರ' ಎನ್ನುವುದು ಶೈವಸಂಪ್ರದಾಯದಲ್ಲಿ ಸಾಧಕನಾದವನ ನಿರ್ದೇಶನ.

ಶಕ್ತಿಯುಳ್ಳವನು, ಶಿವಸ್ವರೂಪಿಯಾದವನು ಮಹೇಶ್ವರ. ತೀವ್ರಶಕ್ತಿಪಾತದಿಂದ ಪವಿತ್ರವಾದ ಅಂತಃಕರಣವುಳ್ಳವನು ಮಹಾಮಾಹೇಶ್ವರ. ಶೈವಾಗಮಸಿದ್ಧಾಂತದ ತತ್ತ್ವವನ್ನು ಯಥಾವತ್ತಾಗಿ ಅರಿತುಕೊಂಡು, ಶಾಂಭವೋಪಾಯವೆಂಬ ಸಾಧನೆಯ ಹಂತವನ್ನು ದಾಟಿ ಅನುಪಾಯವೆಂಬ ನೆಲೆಯಲ್ಲಿರುವವನು. ಭೋಗ-ಮೋಕ್ಷಗಳಿಗೆ ಇರುವ ಅಂತರ ಅವನಲ್ಲಿ ಮರೆಯಾಗಿರುತ್ತದೆ. ಎಲ್ಲ ಪರಾಮರ್ಶದ ವಿಶ್ರಾಂತಿಸ್ಥಾನದ ಅನುಭವ ಎಡೆಬಿಡದೆ ಇರುತ್ತದೆ; ಶಿವಸ್ವಭಾವದಲ್ಲೇ ನೆಲೆಗೊಂಡಿರುತ್ತಾನೆ. ಇವನು ಮಠಾಧಿಪತಿಯೂ ಆಗಿದ್ದು, ಗುರುಪರಂಪರೆಯಲ್ಲಿ ಬಂದವನಾದರೆ 'ಮಹಾಮಾಹೇಶ್ವರಾಚಾರ್ಯವರ್ಯ'; ಹಲವರು ಮಹಾಮಾಹೇಶ್ವರರಿಗೆ ಗುರು. ಹಾಗೆಂದೇ ಅವನನ್ನು ಜನ 'ಮಹಾಮಾಹೇಶ್ವರಾಚಾರ್ಯವರ್ಯ'ನೆಂದು ಗುರುತಿಸಿದರು. ಯೋಗಸಾಧನೆಯ ಫಲವಾಗಿ ಅಭಿನವನು 'ಸಮಾವಿಷ್ಟಮಹೇಶ್ವರಸ್ವಭಾವ'ನಾಗಿದ್ದ. ಹೀಗಿದ್ದವರ ಐದು ಲಕ್ಷಣಗಳು ಶ್ರೀಪೂರ್ವಶಾಸ್ತ್ರದಲ್ಲಿ ಹೀಗೆ ಎಣಿಕೆಗೊಂಡಿವೆ—

1. ಮೊದಲನೆಯ ಚಿಹ್ನೆ ರುದ್ರನಲ್ಲಿ (ಎಂದರೆ ಶಿವನಲ್ಲಿ, ಅನುತ್ತರತತ್ತ್ವದಲ್ಲಿ) ಗಟ್ಟಿಯಾಗಿ ನೆಲೆಗೊಂಡ ಭಕ್ತಿ ('ರುದ್ರೇ ಭಕ್ತಿಃ ಸುನಿಶ್ಚಲಾ');

2. ಎರಡನೆಯದು ಯೋಗದಿಂದ ಪಡೆದುಕೊಂಡ, ಒಡನೆಯೇ ಅನುಭವವನ್ನು ಒದಗಿಸುವ ಮಂತ್ರಸಿದ್ಧಿ ('ಮಂತ್ರಸಿದ್ಧಿಃ ಸದ್ಯಃ ಪ್ರತ್ಯಯಕಾರಿಕಾ');

3. ಎಲ್ಲ ವಸ್ತುಗಳನ್ನೂ, ಎಲ್ಲರನ್ನೂ ತನ್ನದಾಗಿ ಮಾಡಿಕೊಳ್ಳುವ ಸಿದ್ಧಿ ('ಸರ್ವತತ್ತ್ವವಶಿತ್ವಂ');

4. ಹಿಡಿದ ಕೆಲಸವನ್ನು ತಪ್ಪದೆ ಕೈಗೂಡಿಸಿಕೊಳ್ಳುವ ಸಿದ್ಧಿ ('ಪ್ರಾರಬ್ಧಕಾರ್ಯ ನಿಷ್ಪತ್ತಿಃ');

5. ಅಲಂಕಾರದಿಂದ ಕೂಡಿ, ಮನಸ್ಸನ್ನು ಸೆಳೆದುಕೊಳ್ಳುವ ಕವಿತಾಸಾಮರ್ಥ್ಯ ('ಕವಿತ್ವಂ ಸಾಲಂಕಾರಂ ಮನೋಹರಂ').

ಈ ಲಕ್ಷಣಪಂಚಕ ಇದ್ದವನಿಗೆ ಎಲ್ಲ ಶಾಸ್ತ್ರಗಳ ತಾತ್ಪರ್ಯವನ್ನು ಪ್ರಯತ್ನಪಡದೆ ಒಡನೆಯೇ ಪಡೆದುಕೊಳ್ಳುವ ಶಕ್ತಿಯಿರುತ್ತದೆ ('ಸರ್ವಶಾಸ್ತ್ರಾರ್ಥ ವೇತ್ತೃತ್ವಂ ಅಕಸ್ಮಾಚ್ಚಾಸ್ಯ ಜಾಯತೇ').

ಇವೆಲ್ಲ ಲಕ್ಷಣಗಳೂ ಅಭಿನವಗುಪ್ತನಲ್ಲಿ ಕಂಡುಬರುತ್ತಿದ್ದುವೆಂದು 'ತಂತ್ರಾಲೋಕ' ವ್ಯಾಖ್ಯಾನಕಾರನಾದ ಜಯರಥನು ಹೇಳಿದ್ದಾನೆ (8, 137). ಇಂಥ ಗುರುವಿನ ಸಾಮರ್ಥ್ಯ ವಿಶೇಷವೆಂದರೆ ತನ್ನ ಬಳಿಗೆ ಬಂದ ಶಿಷ್ಯನಿಗೆ 'ಶಕ್ತಿಪಾತ'ದಿಂದ ಜ್ಞಾನವನ್ನು ಅನುಗ್ರಹಿಸುವುದು. ಅವನ ಶಿಷ್ಯರಲ್ಲಿ ಒಬ್ಬನಾದ ಮಧುರಾಜನು ತನ್ನ 'ಗುರುನಾಥಪರಾಮರ್ಶೆ'ಯಲ್ಲಿ, ತನಗೆ ಯಾವ ಶಾಸ್ತ್ರದ ಪರಿಚಯವೂ ಇಲ್ಲದಿದ್ದಾಗಲೂ ಗುರುವಿನ ಉಪದೇಶವು ಮನಸ್ಸಿನ ಮಾಂದ್ಯವನ್ನು ತೊಡೆದುಹಾಕಿಬಿಟ್ಟಿತು ಎಂದು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾನೆ—

ನ ವೇದವೇದಾಂಗ ಪರಿಶ್ರಮೋ ಮೇ
ನ ತರ್ಕಶಿಕ್ಷಾ ನ ಚ ಕಾವ್ಯಶಿಕ್ಷಾ ।
ತಥಾಪಿ ತಾವತ್ ಪರಿಮಾರ್ಷ್ಟಿ ಮಾಂದ್ಯಂ
ಗುರೂಪದೇಶಪ್ರತಿಪತ್ತಿದಾರ್ಢ್ಯಂ ॥

ದಕ್ಷಿಣಾಮೂರ್ತಿಯ ಉಪದೇಶಪ್ರಕಾರವು ಮೌನದಿಂದಿರುವುದು; ಆದರೆ ಇದರಿಂದಲೇ ಶಿಷ್ಯರಿಗೆ ಜ್ಞಾನವೊದಗಿ ಸಂಶಯಗಳೆಲ್ಲ ಕತ್ತರಿಸಿ ಬೀಳುತ್ತವೆ ('ಗುರೋಃ ಮೌನಂ ವ್ಯಾಖ್ಯಾ, ಶಿಷ್ಯಾಸ್ತು ಛಿನ್ನಸಂಶಯಾಃ'). ಇದಕ್ಕೆ ನಿದರ್ಶನವಾಗಿದ್ದವನು ಅಭಿನವಗುಪ್ತ. ಈ ಸಾಮರ್ಥ್ಯವು ಶಿವನ ಇಚ್ಛಾಶಕ್ತಿಯ ಫಲವೇ ಎಂದು ಅವನ ಎಣಿಕೆ ('ದೃಶ್ಯತೇ ತತ್ ಶಿವಾಜ್ಞಯಾ'). ತನಗೆ 'ಉಪದೇಶಪ್ರತಿಪತ್ತಿದಾರ್ಢ್ಯ' ಹೇಗೆ ಬಂದಿತೆಂದು ಅವನದ್ದೇ ಒಕ್ಕಣೆಯಿದೆ—

ಇತಿ ಯಜ್ಜ್ಞೇಯಸತತ್ತ್ವಂ ದರ್ಶ್ಯತೇ ತಚ್ಛಿವಾಜ್ಞಯಾ ।
ಮಯಾ ಸ್ವಸಂವಿತ್ ಸತ್ತರ್ಕ ಪತಿಶಾಸ್ತ್ರಕ್ರಮಾತ್ ॥

ತನ್ನದೇ ಆದ ಅನುಭವ, ಸತ್ತರ್ಕ ಮತ್ತು ಶಿವಪರವಾದ ಶಾಸ್ತ್ರಗಳ ಕ್ರಮವಾದ ಅಧ್ಯಯನ ಇವು ಮೂರನ್ನು ಕಾರಣಗಳಾಗಿ ಹೇಳಿದ್ದಾನೆ. ಇವುಗಳಲ್ಲಿ ಸತ್ತರ್ಕವೆಂದರೆ ಸದ್ವಿದ್ಯೆ, ಶುದ್ಧವಿದ್ಯೆ; ಇದು ಶಿವನ ಅನುಗ್ರಹದಿಂದಲೇ ಒದಗಿಬರತಕ್ಕದ್ದು. ('ಸಾ ಚೇಚ್ಛಾ ಪರಮೇಶಿತುಃ'). ದೀಕ್ಷೆಯ ಅಗತ್ಯವಿರದೆ, ಪ್ರಯತ್ನವಿಶೇಷವಿಲ್ಲದೆ, ಎಲ್ಲವೂ ಶಿವನೇ ಎಂಬ ಅರಿವು ಮೂಡುವುದು ಸದ್ವಿದ್ಯೆ, ಸತ್ತರ್ಕ. ದಿಟವಾದ ಈ ತರ್ಕವು (ಬುದ್ಧಿಯ ಪ್ರಕಾರವು) ಅಜ್ಞಾನದ ಪೊರೆಯನ್ನು ಕಳಚಿ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತದೆ. ಶಿವಾನುಭವಕ್ಕೆ (ಬ್ರಹ್ಮಾನುಭವಕ್ಕೆ) ಇದು ನೇರವಾದ ದಾರಿ. ಆದ್ದರಿಂದಲೇ 'ತರ್ಕೋ ಯೋಗಾಂಗ ಮುತ್ತಮಂ' ಎನ್ನುವ ಮಾತಿರುವುದು. ಎಲ್ಲ ತಂತ್ರಗಳ ಸಾಧನೆಯೂ ಸದ್ವಿದ್ಯೆಯನ್ನು ಮುಟ್ಟಲೆಂದೇ ಇದೆ. ಮೋಕ್ಷವೆಂದರೆ ಇದೇ, ಸ್ವರೂಪಪ್ರಥನ, ಆತ್ಮಸಾಕ್ಷಾತ್ಕಾರ. ಇದೇ ಶುದ್ಧಸಂವಿತ್, ಪರಾಸಂವಿತ್, ಶಿವ, ಅನುತ್ತರ ಎನಿಸಿಕೊಳ್ಳುತ್ತದೆ.

ಅನುತ್ತರವೆಂಬ ಸ್ಥಿತಿಯಲ್ಲಿ ಪ್ರಪಂಚದ ಎಲ್ಲ ಭೇದವೂ ಮರೆಯಾಗಿ, ಏಕವೆಂಬ ತತ್ತ್ವದ ಅನುಭವವಾಗುತ್ತದೆ. ಆಗ ಪರತತ್ತ್ವದಲ್ಲಿ ತಾನು ಲಯಹೊಂದುವನು. ಅದಕ್ಕಿಂತ ಮಿಗಿಲಾದ ಸ್ಥಿತಿಯಿರದು. ವಿಗ್ರಹವನ್ನು ಮುಂದಿರಿಸಿಕೊಂಡು, ಕೈಯಾರೆ ಪೂಜೆಮಾಡುವಾಗ ಪೂಜೆಯೆಂಬ ಕ್ರಿಯೆ, ಪೂಜಕನೆಂಬ ಕರ್ತೃ, ಪೂಜ್ಯವೆಂಬ ಕರ್ಮ (ವಸ್ತು) ಈ ಭೇದವಿರುತ್ತದೆ. ಪೂಜೆ (ಅರ್ಚನೆ) ನಡೆಯುವ ಕೆಲಸ; ಪೂಜಕ (ಅರ್ಚಕ) ಮನುಷ್ಯ; ಪೂಜ್ಯವೆಂದರೆ ದೇವತೆ, ಅಥವಾ ದೇವತೆಯ ಪ್ರತೀಕ, ವಿಗ್ರಹ. ಇವುಗಳಲ್ಲಿ ಸಾಮಾನಾಧಿಕರಣ್ಯವಿರುವುದು ದಿಟವಾದರೂ ಭೇದದ ಬುದ್ಧಿ ಇದ್ದೇ ಇರುತ್ತದೆ. ಅಭಿನವ ಗುಪ್ತನ ಪ್ರಶ್ನೆ—

ಪೂಜಾಪೂಜಕಪೂಜ್ಯಭೇದಶರಣೈಃ
ಕೇಯಂ ಕಥಾನುತ್ತರೇ?

ಭೇದವು ಅನುತ್ತರಕ್ಕೆ ಎಡೆಮಾಡಿಕೊಡಲಾರದು. ಅನುತ್ತರಸ್ಥಿತಿಯಲ್ಲಿ ಯಾವ ಭೇದವೂ ತೋರಿಕೊಳ್ಳಲಾರದು. ಯಾವ ಮಾನಸಿಕ, ಶಾರೀರ, ವಾಚಿಕಕಲ್ಪನೆಯೂ ಕಾಣಿಸಿಕೊಳ್ಳಲಾರದು. ಬಾಹ್ಯವಾದ ಯಾವೊಂದು ಆಚರಣೆಗೂ ಇಲ್ಲಿ ಅವಕಾಶವಿರದು. ಪರತತ್ತ್ವವು ದಿಟವಾಗಿ ಪರಾಸಂವಿತ್; ಬರಿಯ ಅರಿವು. ನಿರ್ವಿಕಲ್ಪವಾದ ಆಕಾಶದಂತೆ ಅದು. ಅದರಲ್ಲಿ ಲಯಗೊಳ್ಳುವುದೇ ದಿಟವಾದ ಪೂಜೆ. ಹೂ-ಹಣ್ಣು ಮೊದಲಾಗಿ ಎಡೆಯಿರಿಸಿ ಪ್ರಾಕೃತಪುತ್ಥಳಿಯೆದುರು ಮಣಿಯುವುದಲ್ಲ—

ಪೂಜಾ ನಾಮ ನ ಪುಷ್ಪಾದ್ಯೈಃ ಯಾ ಮತಿಃ ಕ್ರಿಯತೇ ದೃಢಾ ।
ನಿರ್ವಿಕಲ್ಪೇ ಮಹಾವ್ಯೋಮ್ನಿ ಸಾ ಪೂಜಾ ಹ್ಯಾದರಾಲ್ಲಯಃ ॥

ಅಭಿನವಗುಪ್ತನ ನಿಲುವು ಇದು.

ಸಾಧಕನು ಮಂತ್ರವನ್ನು ಏಕಾಗ್ರತೆಯಿಂದ ಅನುಸಂಧಾನ ಮಾಡಿದಾಗ ಮಂತ್ರದ ರಹಸ್ಯಾರ್ಥವು ಹಂತಹಂತವಾಗಿ ಒಡಮೂಡಿಕೊಂಡು, ಕ್ರಮವಾಗಿ ಸ್ಫುಟವಾಗುತ್ತದೆ. ಹೀಗೆ ಕ್ರಮವರಿತು ತೋರಿಕೊಳ್ಳುವುದನ್ನು ಭಾವನೆಯೆನ್ನುತ್ತಾರೆ ('ಕ್ರಮಸ್ಫುಟತ್ವಕರಣಂ ಭಾವನಾಂ ಪ್ರಚಕ್ಷತೇ'). ಸತ್ತರ್ಕದಿಂದ ಭಾವನೆಗೆ ಅವಕಾಶವಾಗುತ್ತದೆ; ಇದರಿಂದ ಸಿದ್ಧವಾಗುವುದು ಸದ್ವಿದ್ಯೆ. ಮಂತ್ರದ ಅಂತರಾರ್ಥವು ಭಾವನೆಯಿಂದ ಸ್ಪಷ್ಟಗೊಂಡೊಡನೆ ಸಾಧಕನು ತಾನೇ ಮಂತ್ರವಾಗುವನು; ಮಂತ್ರದೊಂದಿಗೆ ತಾದಾತ್ಮ್ಯ ಕಾಣಿಸಿಕೊಳ್ಳುವುದು. ಮಂತ್ರದ ಅಂತರಾರ್ಥವು ವಿಶ್ವಾತ್ಮಕವಾದುದು, ವಿಶ್ವೋತ್ತೀರ್ಣವಾದುದು. ಅದರೊಂದಿಗೆ ಲಯ ಗೊಂಡಾಗ ಸಾಧಕನೂ ವಿಶ್ವಾತ್ಮಕನಾಗುವನು ('ಸರ್ವಾಕೃತಿಃ ವಿಶ್ವಮಯಃ'), ವಿಶ್ವೋತ್ತೀರ್ಣ ನಾಗುವನು ('ನಿರಾಕೃತಿಃ'). ಆ ಸ್ಥಿತಿಯಲ್ಲಿ 'ಅಹಂತಾ' (ಉಳಿದ ಎಲ್ಲದರಿಂದ ಬೇರೆಯಾಗಿ) ನಾನು ಎಂಬ ಕಲ್ಪನೆ ಬಿದ್ದುಹೋಗುವುದು.

ಹೀಗೆ ಅಹಂತೆಯಿಂದ ಸದ್ವಿದ್ಯೆಗೆ ಸಾಗುವುದನ್ನೇ ಪ್ರತಿಭಾಶಕ್ತಿಯೆಂದು ಕರೆಯುತ್ತಾರೆ. ಅಲಂಕಾರಶಾಸ್ತ್ರದಲ್ಲಾಗಲಿ ಶೈವದರ್ಶನದಲ್ಲಾಗಲಿ ಪ್ರತಿಭೆಯ ತಾತ್ಪರ್ಯ ಒಂದೇ. ವಾಸ್ತವವಾಗಿ ಒಳಗೇ ಇರುವುದನ್ನು ಹೊರಗಿರುವಂತೆ ಕಾಣಿಸುವುದು, ಒಂದೇ ಆಗಿರುವುದನ್ನು ಅನೇಕವಾಗಿರುವಂತೆ ತೋರಿಸುವುದು ಅವಿದ್ಯೆ. ಈ ಭೇದದ ಆಭಾಸ (ತೋರಿಕೆ) ವ್ಯವಹಾರವೆನಿಸಿಕೊಳ್ಳುತ್ತದೆ. ಇಲ್ಲಿ ಅಹಂತೆ ಕೆಲಸ ಮಾಡುತ್ತದೆ. ಅದಕ್ಕೆ ವಿಪರೀತವಾಗಿ, ಹೊರಗೆ ಕಾಣುವ ಎಲ್ಲವೂ ದಿಟವಾಗಿ ಒಳಗೇ ಇರುವುವು, ಅನೇಕವಾಗಿ ತೋರಿಕೊಳ್ಳುವುವೆಲ್ಲ ವಾಸ್ತವವಾಗಿ ಒಂದೇ ತತ್ತ್ವ ಎಂದು ಅರಿವಿನಲ್ಲಿ ಮೂಡಿಸಿಕೊಳ್ಳುವುದು ಸದ್ವಿದ್ಯೆ. ಅಹಂತೆಯಿಂದ ಸದ್ವಿದ್ಯೆಗೆ ಸಾಗಿದಾಗ ಸಾಧಕನು ಪರಮಪ್ರಕಾಶವಾದ ಶಿವನಲ್ಲಿ ನೆಲೆಗೊಳ್ಳುವನು;

ಬಾಹ್ಯಪ್ರಕಾಶವು ಶಿವನಿಂದ ಭಿನ್ನವಾದುದಲ್ಲ ಎಂಬುದು ಸ್ಪಷ್ಟವಾಗುವುದು. ವಿಶ್ವಮಯನಾದರೂ ವಿಶ್ವೋತ್ತೀರ್ಣನಾಗುವನು. ಇದು ಪ್ರತಿಭೆಯ ಫಲ. ಅಭಿನವಗುಪ್ತನು 'ತಂತ್ರಾಲೋಕ'ದಲ್ಲಿ (13, 118) ಹೇಳಿರುವುದು ಹೀಗೆ—

ಸ ಏವ ಪ್ರತಿಭಾಯುಕ್ತಃ ಶಕ್ತಿತತ್ತ್ವಂ ನಿಗದ್ಯತೇ ।
ತತ್ಪಾತಾವೇಶತೋ ಮುಕ್ತಃ ಶಿವಂ ಏವ ಭವಾರ್ಣವಾತ್ ॥

ಕವಿಯ ರಸಾವೇಶಸ್ಥಿತಿಯೂ ಸ್ವರೂಪದಲ್ಲಿ ಇದೇ ತಾನೆ? ಕ್ಷೇಮೇಂದ್ರನು "ಚಿತಿಃ ಸ್ವತಂತ್ರಾ ವಿಶ್ವಸಿದ್ಧಿರ್ಹೇತುಃ, ಸ್ವೇಚ್ಛಯಾ ಸ್ವಭಿತ್ತೌ ವಿಶ್ವಮುನ್ಮೀಲಯತಿ" (ಚಿತ್ತತ್ವವು ತನ್ನದೇ ಆದ ಸ್ವತಂತ್ರ ಇಚ್ಛೆಯಿಂದ, ತಾನೆಂಬ ಗೋಡೆಯ ಮೇಲೆ ವಿಶ್ವವೆಂಬ ಚಿತ್ರವನ್ನು ಮೂಡಿಸುತ್ತದೆ) ಎಂದು ಹೇಳಿದನಲ್ಲವೆ? ಶಿವನು ತನ್ನನ್ನು ವಿಶ್ವವಾಗಿ ತೋರಿಸಿಕೊಳ್ಳುವುದು ಆಭಾಸ; ವಿಶ್ವವೇ ತಾನೆಂದು ಅರಿವಿಗೆ ತಂದುಕೊಳ್ಳುವುದು ಪ್ರತಿಭೆ. ಕಾಶ್ಮೀರಶೈವದರ್ಶನದ ನಿಲುವು ಸಿದ್ಧಾಂತದಲ್ಲಿ ಆಭಾಸವಾದ; ಎಂದಾಗ ಪ್ರತಿಭೆಯು ಸಾಧನೆಯಲ್ಲಿ ಸೇರಲೇಬೇಕು. ಆಭಾಸದಿಂದ ಬಂಧನ; ಪ್ರತಿಭೆಯಿಂದ ಮುಕ್ತಿ. ಅಭಿನವಗುಪ್ತನ ಈ ನಿರೂಪಣೆಗಳನ್ನು ನೋಡಿ—

ಅನನ್ಯಾಪೇಕ್ಷಿತಾ ಚಾಸ್ಯ ವಿಶ್ವಾತ್ಮತ್ವಂ ಪ್ರತಿ ಪ್ರಭೋಃ ।
ತಾಂ ಪರಾಂ ಪ್ರತಿಭಾಂ ದೇವೀಂ ಸಂಗಿರಂತೇ ಹ್ಯನುತ್ತಮಾಂ ॥
ಯದುನ್ಮೀಲಿತಶಕ್ತ್ಯೈವ ವಿಶ್ವಮುನ್ಮೀಲತಿ ಕ್ಷಣಾತ್ ।
ಸ್ವಾತ್ಮಾಯತನವಿಶ್ರಾಂತಾಂ ವಂದೇ ತಾಂ ಪ್ರತಿಭಾಂ ಪರಾಂ ॥

ಯಾವೊಂದು ಆಸರೆಯನ್ನಾಗಲಿ ನೆರವನ್ನಾಗಲಿ ಬಯಸದೆ, ಅವಲಂಬಿಸದೆ ಶಿವನು ವಿಶ್ವವನ್ನೇ ಸೃಜಿಸುವನು, ವಿಶ್ವದ ಆತ್ಮವಾಗಿರುವನು, ವಿಶ್ವವೇ ಆಗಿರುವನು. ಇದು ಅವನ ಶಕ್ತಿ; ಎಣೆಯಿರದ, ಮಿಗಿಲಿರದ ಶಕ್ತಿ. ಶಿವನ ಪರಾಪ್ರತಿಭೆ ಇದು. ಪ್ರತಿಯೊಂದು ವಸ್ತುವಿನಲ್ಲೂ ಭಾಸವಾಗುವನೆಂದರ್ಥ. ಶಿವನಿಂದ ಹೊರಹೊಮ್ಮಿದ ಶಕ್ತಿ (ವಿಮರ್ಶೆ) ವಿಶ್ವವನ್ನು ಒಂದು ಕ್ಷಣದಲ್ಲಿ ಹೊರಹೊಮ್ಮಿಸುತ್ತದೆ. ದೇಶ, ಕಾಲ, ರೂಪ, ಪ್ರಯತ್ನಗಳ ನಿರ್ಬಂಧ ಅದಕ್ಕಿಲ್ಲ. ವಿಶ್ವವನ್ನೇ ಹೊರಹೊಮ್ಮಿಸಿ, ವ್ಯಾಪಿಸಿಕೊಂಡು ಇರುವುದಾದರೂ ತನ್ನಲ್ಲಿ ತಾನು ನೆಮ್ಮದಿಯಿಂದ ಇರುತ್ತದೆ. ವಿಶ್ವಾತ್ಮಕವಾಗಿದ್ದು ವಿಶ್ವೋತ್ತೀರ್ಣವೂ ಆಗಿದೆ. ಇದು ಪರಾಪ್ರತಿಭೆ.

- 6 -

'ಶ್ರೀಮದಭಿನವಗುಪ್ತಪಾದಪದ್ಮೋಪಜೀವಿನಃ'

ಅಭಿನವಗುಪ್ತನ ಪ್ರತಿಭೆಯಿಂದ, ಪ್ರಭಾವದಿಂದ ಆ ಪ್ರದೇಶದಲ್ಲೆಲ್ಲ 'ಗ್ರಾಹ್ಯಮವಶ್ಯಂ ಶಿವಶಾಸನಂ' ಎಂಬ ಅವನ ಆದೇಶವು (ತಂತ್ರಾಲೋಕ, ಆಹ್ನಿಕ 37) ಅನುರಣನಗೊಂಡಿತು. ಅವನ ಸುತ್ತ ಸಾವಿರಾರು ಶಿಷ್ಯರು, ಭಕ್ತರು ನೆರೆದರು. ಪ್ರತ್ಯಭಿಜ್ಞಾದರ್ಶನ, ತಂತ್ರಮಾರ್ಗ, ಯೋಗಸಂಪ್ರದಾಯ ಇವು ಪುಟಗೊಂಡು ಬಲಗೊಂಡು ಮೆರೆದವು. ಯೋಗಿಯಾಗಿ, ಸಂತನಾಗಿ, ಶಿವನೇ ಆಗಿ ಎಲ್ಲರೆದುರು ಅಭಿನವಗುಪ್ತನು ಕಂಗೊಳಿಸಿದನು.

ಭೈರವಗುಹಾಪ್ರವೇಶ

ಬದುಕಿನ ಕಡೆಗಾಲದಲ್ಲಿ ಅನೇಕ ಮಂದಿ ಶಿಷ್ಯರೊಡಗೂಡಿ ದೊಡ್ಡ ಬೆಟ್ಟವೊಂದರ ಮೇಲೇರಿ, ಅಲ್ಲಿದ್ದ ಭೈರವಗುಹೆಯನ್ನು ಹೊಕ್ಕು ಮರೆಯಾದನೆಂದು ಪ್ರತೀತಿ. ಈ ಬೆಟ್ಟವು ಈಗಿನ ಬಿರುವ ಎಂಬ ಹಳ್ಳಿಯಲ್ಲಿದೆ. ಶ್ರೀನಗರ ಮತ್ತು ಗುಲ್ಮಾರ್ಗ್ ನಡುವೆ ಮಗಂ ಎಂಬಲ್ಲಿಂದ ಐದು ಮೈಲಿಗಳಷ್ಟು ದೂರ ಇರುವ ಈ ಬೆಟ್ಟವನ್ನೇರುವುದು ಕಷ್ಟವೆಂದೂ, ಬೆಟ್ಟದ ಮೇಲೆ ಇರುವ ಗುಹೆಯ ಬಾಗಿಲು ತೀರ ಸಣ್ಣದೆಂದೂ, ಗುಹೆಯ ಒಳಗೆ ಆಳವಾದ ಕಮರಿಯೊಂದು ಇರುವುದೆಂದೂ ಅದನ್ನು ನೋಡಿಕೊಂಡು ಬಂದ ಕಾಂತಿಚಂದ್ರಪಾಂಡೆ ತಿಳಿಸುತ್ತಾರೆ. ಒಳಗೆ ಹೋದ ಅಭಿನವಗುಪ್ತನು ಹೊರಗೆ ಬರಲಿಲ್ಲವೆಂದು ಹಿಂದಿನಿಂದ ಬೇರೂರಿಕೊಂಡು ಬಂದ ಸುದ್ದಿ.

ಅಭಿನವಗುಪ್ತನನ್ನು ಅವನ ಶಿಷ್ಯರೂ ಅಭಿಮಾನಿಗಳೂ ಭೈರವನೆಂದೇ ಗುರುತಿಸಿದ್ದರಾಗಿ ಭೈರವಗುಹಾಪ್ರವೇಶವೆಂಬ ಪ್ರತೀತಿ. ಕಾಶ್ಮೀರಶೈವದರ್ಶನದಲ್ಲಿ ಭೈರವನೆಂಬುದು ಪಾರಿಭಾಷಿಕಪದ. ಪರಶಿವನೆಂದರ್ಥ. ಭೀ (ಸಂಸಾರದ ಬೆದರಿಕೆಯಿಂದ ಉಂಟಾದ) ರವ (ಕೂಗು, ಅಳು) ಎಂಬುದು ಮಾತಿನ ಸ್ವಾರಸ್ಯ. ಈ ಬೆದರಿಕೆಯನ್ನು ತಪ್ಪಿಸಿ, ಕೂಗನ್ನು ನಿಲ್ಲಿಸುವವನು ಭೈರವ. ಭಯದಿಂದ ಕಂಗಾಲಾಗಿರುವ ಜೀವಿಗಳಿಗೆ ಸ್ವಾಮಿಯಾದವನು. ಇನ್ನೊಂದು ಬಗೆಯ ಅರ್ಥವೂ ಇದೆ. ಭರಣ, ರವಣ, ವಮನ ಈ ಮೂರು ಮಾತುಗಳ ಮೊದಲಕ್ಷರಗಳನ್ನು ಕೂಡಿಸಿ ಭೈರವ. ಜಗತ್ತನ್ನು ತನ್ನೊಡಲಿನಿಂದ ಹೊರಹೊಮ್ಮಿಸುವುದು ವಮನ (ಸೃಷ್ಟಿ), ಹಾಗೆ ಹೊರಗೆ ಬಂದ ಜಗತ್ತನ್ನು ಕಾಪಿಡುವುದು ಭರಣ (ಸ್ಥಿತಿ); ಪಾರಿಶೇಷ್ಯನಿಯಮದಿಂದ, ಜಗತ್ತನ್ನು ಅಡಗಿಸುವುದು, ಮರೆಮಾಡುವುದು ರವಣ (ಸಂಹಾರ, ಹಾಹಾಕಾರ). ಮೂರು ಕ್ರಿಯೆಗಳನ್ನು ನಡೆಸುವಾಗಲೂ ತನ್ನ ನಿಜಸ್ವರೂಪವನ್ನು ಅಖಂಡವಾಗಿ, ಪೂರ್ಣವಾಗಿ, ಶುದ್ಧವಾಗಿ ಉಳಿಸಿಕೊಳ್ಳುವುದು ಭೈರವವೆನಿಸಿಕೊಳ್ಳುತ್ತದೆ. ('ಅಖಂಡಿತ ನಿಜಾಭಾಸಪ್ರಥನಾದಪಿ ಚಿದ್ವಿಭೋಃ'). ಶಿವನ ಸ್ವರೂಪ ಚಿತ್ (ಅರಿವು) ಮತ್ತು ಆನಂದ.

ಸಾಧಕನು ತಾನೇ ಶಿವ, ವಿಶ್ವಮಯ, ವಿಶ್ವೋತ್ತೀರ್ಣ, ಶಕ್ತಿಮಾನ್, ಜ್ಯೋತಿ ಎಂಬುದನ್ನು ಮನವರಿಕೆಮಾಡಿಕೊಂಡಾಗ ಅವನಿಗೆ ಭೈರವಾವೇಶ (ಅವನು 'ಭರಣರವಣವಮನಾತ್ಮಕಪರಮಭೈರವಾವೇಶಶಾಲಿ'). 'ಸ್ವಚ್ಛಂದತಂತ್ರ'ದಲ್ಲಿ ಸಾಧಕನು ತನ್ನನ್ನೇ ಭೈರವನೆಂದು ಕಂಡುಕೊಳ್ಳುವುದನ್ನು ವಿಧಿಸಿದೆ.

ಆತ್ಮನೋ ಭೈರವಂ ರೂಪಂ ಭಾವಯೇದ್ಯಸ್ತು ಪೂರುಷಃ ।
ತಸ್ಯ ಮಂತ್ರಾಃ ಪ್ರಸಿಧ್ಯಂತಿ ನಿತ್ಯಯುಕ್ತಸ್ಯ ಸುಂದರಿ ॥

ಈ ಹಿನ್ನೆಲೆಯಲ್ಲಿ ಅಭಿನವಗುಪ್ತನು ತನ್ನನ್ನೇ ಭೈರವನೆಂದು ಗುರುತಿಸಿಕೊಂಡಿರುವುದೂ ಇದೆ. ಪಂಚಕೃತ್ಯಪರಾಯಣನೂ ಅನುತ್ತರನೂ ಆದ ಶಿವನೆಂದೇ ತಾತ್ಪರ್ಯ. ಸಾಧಕನು 'ಶಿವತುಲ್ಯ'ನೆಂದೂ ಅವನ ಉದ್ಯಮವೇ 'ಭೈರವ'ನೆಂದೂ ಶಿವಸೂತ್ರದಲ್ಲಿ ಹೇಳಿದೆ. ಅಭಿನವಗುಪ್ತನು ಹಲವಾರು ಸಂದರ್ಭಗಳಲ್ಲಿ ತನಗೊದಗಿದ್ದ ಭೈರವಾವೇಶವನ್ನು ಸೂಚಿಸುತ್ತಾನೆ.

ಹೀಗಿರುವುದರಿಂದ ಅವನು ಕಡೆಗಾಲದಲ್ಲಿ ಭೈರವಗುಹೆಯನ್ನು ಹೊಕ್ಕು ಅಲ್ಲಿ ಮರೆಯಾದನೆಂಬ ಪ್ರತೀತಿಯಲ್ಲಿ ಅರ್ಥಗೌರವವಿದೆ. ಜೀವನ್ಮುಕ್ತನಾಗಿದ್ದವನು ಕಣ್ಮರೆಯಾದ ಪ್ರಸಂಗ.

ಅವನ ಶಿಷ್ಯಕೋಟಿಯು ಸಮೃದ್ಧವಾಗಿದ್ದಿತು. ಶಿಷ್ಯರಲ್ಲಿ ಪ್ರಮುಖರೆಂದರೆ ಕ್ಷೇಮರಾಜ, ಯೋಗರಾಜ, ಸುಭಟದತ್ತ, ಜಯರಥ, ಶೋಭಾಕರಗುಪ್ತ ಮತ್ತು ಭಾಸ್ಕರಕಂಠ. ಕ್ಷೇಮರಾಜನು ಅಭಿನವಗುಪ್ತನ ಧ್ವನ್ಯಾಲೋಕಲೋಚನಕ್ಕೆ ವ್ಯಾಖ್ಯೆಯನ್ನೂ ಪ್ರತ್ಯಭಿಜ್ಞಾಹೃದಯ, ಸ್ವಚ್ಛಂದತಂತ್ರೋದ್ಯೋತ, ವಿಜ್ಞಾನಭೈರವೋದ್ಯೋತ, ಸ್ಪಂದಸಂದೋಹ, ಶಿವಸೂತ್ರ ವಿಮರ್ಶಿನೀ, ಸ್ತವಚಿಂತಾಮಣಿವಿವೃತಿ ಮೊದಲಾಗಿ ಹದಿನೆಂಟು ಕೃತಿಗಳನ್ನು ರಚಿಸಿ ಪ್ರಸಿದ್ಧನಾಗಿದ್ದಾನೆ. ಗುರುವಿನಂತೆಯೆ ಅಲಂಕಾರಶಾಸ್ತ್ರ, ಪ್ರತ್ಯಭಿಜ್ಞಾದರ್ಶನ ಎರಡೂ

ಕ್ಷೇತ್ರಗಳಲ್ಲಿ ಕೃತಿರಚನೆ ಮಾಡಿದ್ದಾನೆ; ಅವನೂ ಮಹಾಮಾಹೇಶ್ವರನೇ. ಮಾಹೇಶ್ವರರೆಂದರೆ ಹಿಂದೆ ಹೇಳಿದಂತೆ 'ಶೈವಾಗಮಸಿದ್ಧಾಂತತತ್ತ್ವಂ ಯಥಾವದೀಕ್ಷಮಾಣಾಃ' ಎಂಬ ನಿರ್ದೇಶನವಿದೆ; ಶೈವಾಗಮದ ಸಿದ್ಧಾಂತವನ್ನು ಯಥಾರ್ಥವಾಗಿ ಅರಿತುಕೊಂಡು, ಅದನ್ನು ಸಾಧನೆಯಲ್ಲಿ ಅಳವಡಿಸಿಕೊಂಡು ಶಿವಾನುಭವವನ್ನು ಪಡೆದುಕೊಂಡ ಸಾಧಕರು.

ಯೋಗರಾಜನು ಅಭಿನವಗುಪ್ತನ 'ಪರಮಾರ್ಥಸಾರ'ಕ್ಕೆ ವಿವೃತಿಯೊಂದನ್ನು ಸಿದ್ಧಪಡಿಸಿದ್ದಾನೆ. ಸುಭಟದತ್ತನು ಗುರುವಿನ 'ತಂತ್ರಾಲೋಕ'ಕ್ಕೆ ವ್ಯಾಖ್ಯಾನವನ್ನು ರಚಿಸಿದನು. ತಂತ್ರಾಲೋಕಕ್ಕೆ ಜಯರಥನು ಬರೆದಿರುವ 'ವಿವೇಕ'ವೆಂಬ ವ್ಯಾಖ್ಯಾನ ವಿಸ್ತೃತವಾಗಿದೆ, ಪ್ರಬುದ್ಧವಾಗಿದೆ. ಇದಲ್ಲದೆ ರುಯ್ಯಕನ 'ಅಲಂಕಾರಸರ್ವಸ್ವ'ಕ್ಕೆ ಅಲಂಕಾರವಿಮರ್ಶಿನೀ ಎಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಶೋಭಾಕರಗುಪ್ತನು ಗುರುವಿನ 'ಭೈರವಸ್ತೋತ್ರ'ಕ್ಕೆ ಸಿದ್ಧಪಡಿಸಿರುವ ಟೀಕೆ ಸ್ವಾರಸ್ಯವಾದುದು. ಧೌಮ್ಯಾಯನಗೋತ್ರದ ಅವತಾರಕಂಠನ ಮಗ ಭಾಸ್ಕರಕಂಠನು ಅಭಿನವಗುಪ್ತನ 'ಪ್ರತ್ಯಭಿಜ್ಞಾವಿಮರ್ಶ'ನಿಗೆ ಉತ್ಕೃಷ್ಟವಾದ ವ್ಯಾಖ್ಯಾನವನ್ನು ರಚಿಸಿದ್ದಾನೆ; ಇದು ಭಾಸ್ಕರಿಯೆಂದೇ ಹೆಸರಾಗಿದೆ. ಯೋಗವಾಸಿಷ್ಠಕ್ಕೂ ಭಾಷ್ಯವೊಂದನ್ನು ಬರೆದಿದ್ದಾನಂತೆ.

ಅಭಿನವಗುಪ್ತನ ಶಿಷ್ಯನೇ ಆಗಿದ್ದ ಮಧುರಾಜನು (ಮಾಧುರನು) ತನ್ನ ಗುರುವಿನ ಹಿರಿಮೆಯನ್ನು ತಿಳಿಯಹೇಳುವ 'ಗುರುನಾಥಪರಾಮರ್ಶ' ಎಂಬ ಲಘುಕಾವ್ಯವೊಂದನ್ನು ರಚಿಸಿದ್ದಾನೆ. ಬೇರೆ ಬೇರೆ ವೃತ್ತಗಳಲ್ಲಿ ನಲವತ್ತೆಂಟು ಕವಿತೆಗಳಿರುವ ಈ ಕೃತಿಯಲ್ಲಿ ಗುರುಭಕ್ತಿಯೇ ಪ್ರಧಾನರಸ. ತನ್ನ ಗುರುವು ಜಗದ್ಧಿತಾವತಾರನೆಂದೂ ಸಚ್ಚಿದಂಬರಸ್ಥನೆಂದೂ ಅಭಿನವಪರಮೇಶ್ವರನೆಂದೂ ಶೈವಧರ್ಮದ ಪ್ರವರ್ತಕನಾದ ಶ್ರೀಕಂಠನಾಥನೇ ಎಂದೂ ನಂಬಿದ್ದವನು. ಗುರುವಿನ ಉಪದೇಶದಿಂದ ತಾನೂ ಸಿದ್ಧಪುರುಷನಾದೆನೆಂದೂ ಹೇಳಿಕೊಂಡಿದ್ದಾನೆ. "ಜೀವನ್ನೇವ ಶಿವೋಽಸ್ಮಿ ಸದ್ಗುರುಗಿರಾ ಜ್ಞಾನಕ್ರಿಯಾಶಕ್ತಿಭಿಃ' ಎಂಬ ಒಕ್ಕಣೆಯಿದೆ. ಗುರುವಿನ ಉಪದೇಶದಲ್ಲೇ ಜ್ಞಾನಶಕ್ತಿ, ಕ್ರಿಯಾಶಕ್ತಿಗಳು ಅಡಗಿದ್ದು, ಅದನ್ನು ಕೇಳಿದೊಡನೆ ಶಿಷ್ಯನು ಶಿವನಾಗಿಬಿಟ್ಟನೆಂದು ತಾತ್ಪರ್ಯ. ಗುರುದಕ್ಷಿಣೆಯಾಗಿ ಅವನು ತನ್ನ ಶರೀರವನ್ನೇ ಗುರುವಿಗೆ ಒಪ್ಪಿಸಿದ್ದಾನೆ—

ತದ್ದಕ್ಷಿಣೀಕೃತ್ಯ ಶಿವಾಯ ತಸ್ಮೈ
ನಿವೇದಿತಂ ಮೇ ಗುರವೇ ಶರೀರಂ ॥

ಇದರಲ್ಲಿ ಅಭಿನವಗುಪ್ತನ ಕೆಲವು ರಚನೆಗಳ (ಪರ್ಯಂತಪಂಚಾಶಿಕ; ಅಭಿನವಭಾರತೀ; ಕಥಾಮುಖತಿಲಕವೆಂಬ ನ್ಯಾಯಗ್ರಂಥ, ಈಗ ಉಪಲಬ್ಧವಿಲ್ಲ) ಉಲ್ಲೇಖವಿದೆ. ಗುರುಗಳ ಮತ್ತು ಯೋಗಿನಿಗಳ ಮೇಳದಲ್ಲಿ ಎಲ್ಲ ಶಾಸ್ತ್ರಸಂಪ್ರದಾಯದ ಸಾರವನ್ನೂ ಅಭಿನವಗುಪ್ತನಲ್ಲಿ ಇರಿಸಲಾಯಿತೆಂದು ಪ್ರಸ್ತಾಪವಿದೆ. ಕಡೆಯ ಪದ್ಯ ವಾಡಿಕೆಯಂತೆ ಪ್ರಾಕೃತದಲ್ಲಿದೆ.

ಮಧುರಾಜನ ಮಗ ವರದರಾಜನೂ ಶೈವಸಂಪ್ರದಾಯದಲ್ಲಿ ಬಹುಶ್ರುತನಾಗಿದ್ದನು. ಇವನು ವಸುಗುಪ್ತನ ಶಿವಸೂತ್ರಗಳಿಗೆ ಕ್ಷೇಮರಾಜನ ಜಾಡನ್ನು ಹಿಡಿದು ಶ್ಲೋಕರೂಪದ ವಾರ್ತಿಕವನ್ನು ಬರೆದಿದ್ದಾನೆ. ಮಹಾರ್ಥಮಂಜರಿಯ ಕರ್ತೃ ಮಹೇಶ್ವರಾನಂದನ ವಿಚಾರ ಆಗಲೇ ಬಂದಿದೆ. ಇವನು ಚೋಳದೇಶದವನಂತೆ. 'ಆನಂದತಾಂಡವವಿಲಾಸ'ವೆಂಬ ಸ್ತೋತ್ರವನ್ನು ರಚಿಸಿದ. ಮಹಾಪ್ರಕಾಶನೆಂಬ ಗುರುವಿನಿಂದ ಪ್ರತ್ಯಭಿಜ್ಞಾಸಂಪ್ರದಾಯದಲ್ಲಿ ದೀಕ್ಷೆಯನ್ನು ಪಡೆದುಕೊಂಡದ್ದು ತಿಳಿದುಬರುತ್ತದೆ. ಅಭಿನವಗುಪ್ತನ ಕ್ರಮಸಂಪ್ರದಾಯದಲ್ಲಿ ಆಸಕ್ತಿಯನ್ನು ತಳೆದು ಕೆಲವು ರಚನೆಗಳನ್ನು ಮಾಡಿದ್ದಾನೆ. ಮಹಾರ್ಥವೆಂದರೆ ಕಾಶ್ಮೀರಶೈವದ ತ್ರಿಕದರ್ಶನಕ್ಕಿಂತ ತುಂಬ ಬೇರೆಯಾದುದೇನಲ್ಲ ಎಂಬುದನ್ನು ಕಾಣಿಸಿದ್ದಾನೆ. ತನ್ನ ಮಹಾರ್ಥಮಂಜರಿಗೆ ತಾನೇ ಪರಿಮಳವೆಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ತಂತ್ರಾಗಮ ವಿಚಾರವಾಗಿ ಇದೊಂದು ಪ್ರಸಿದ್ಧವಾದ ಗ್ರಂಥ.

ಅಭಿನವಗುಪ್ತನ ತಮ್ಮ ಮನೋರಥನೇ ಶೈವಧರ್ಮದಲ್ಲಿ ಆಸ್ಥೆಯನ್ನು ತಳೆದು ಅಣ್ಣನ ಬಳಿ ಶಿಷ್ಯವೃತ್ತಿಮಾಡಿದನು.

ಅಭಿನವಗುಪ್ತನ ಪ್ರಭಾವ ಅಲಂಕಾರಶಾಸ್ತ್ರದಲ್ಲೂ ಶೈವಾಗಮಪ್ರಕ್ರಿಯೆಗಳಲ್ಲೂ ತುಂಬ ಕಾಲದವರೆಗೆ ಉಳಿದುಬಂದಿದೆ. ರಸವನ್ನು, ಧ್ವನಿಯನ್ನು, ಪ್ರತಿಭೆಯನ್ನು, ಶಿವಾನುಭವವನ್ನು,

ತಂತ್ರವನ್ನು ಕುರಿತಂತೆ ವಿಚಾರಮಾಡುವಾಗಲೆಲ್ಲ ಅಭಿನವಗುಪ್ತನ ಅಭಿಪ್ರಾಯಗಳಿಗೆ ಇಂದಿಗೂ ಮಾನ್ಯತೆಯಿದೆ. ಅವನ ಅಭಿಪ್ರಾಯಗಳಲ್ಲೇ ರಸವಿದೆ, ಧ್ವನಿಯಿದೆ. ಅವನ ಪ್ರತಿಭೆಯನ್ನು ಯಾರೂ ಮರೆಯುವಹಾಗಿಲ್ಲ. ಅವನ ಕೃತಿಗಳ ಹಿನ್ನೆಲೆಯಲ್ಲಿ ಅವನ ಅನುಭವ ಬೇರೂರಿ ನಿಂತಿದೆ. ತಂತ್ರಕ್ಕೊಂದು ಹೊಸ ಕಳೆಯನ್ನು ಕೊಟ್ಟವನು ಅವನು. ನಮ್ಮ ದೇಶದ ಸಂಸ್ಕೃತಿಗೆ ಅವನು ನೀಡಿರುವ ಕೊಡುಗೆ ವಿಪುಲವಾದುದು, ಮೌಲಿಕವಾದುದು. ದಿಟವಾದ ಅರ್ಥದಲ್ಲಿ ಅವನು 'ಅನುತ್ತರ'ನೇ.

ಯತ್ ಸಾರಸ್ವತರಸಸಿದ್ಧ ಏವ ಶುದ್ಧಃ
ಸರ್ವೋಽದ್ಧಾ ವಿಲಸತಿ ವಾಚ್ಯವಾಚಕಾತ್ಮಾ ।
ಕಾಶ್ಮೀರಾನ್ ಜಯತಿ ಜಗದ್ಧಿತಾವತಾರಃ
ಸ ಶ್ರೀಮಾನಭಿನವಗುಪ್ತದೇಶಿಕೇಂದ್ರಃ ॥

(ಗುರುನಾಥಪರಾಮರ್ಶ, 2)

●

ಅನುಬಂಧ - ಒಂದು

ಅಭಿನವಗುಪ್ತನ ಕೃತಿಗಳು

ಅಭಿನವಗುಪ್ತನ ಸಣ್ಣ-ದೊಡ್ಡ ರಚನೆಗಳ ಸಂಖ್ಯೆ ನಲವತ್ತನ್ನು ಮೀರುತ್ತದೆ. ಆದರೆ ಇವುಗಳಲ್ಲಿ ಅಚ್ಚಾಗಿರುವುವು ಕೆಲವು ಮಾತ್ರ. ಉಳಿದ ಕೆಲವು ಹಸ್ತಪ್ರತಿಯಲ್ಲಿವೆ; ಅಚ್ಚಾಗಿಲ್ಲ. ಉಲ್ಲೇಖಗೊಂಡ ಕೃತಿಗಳೇ ಹಲವಿವೆ; ಈಗ ಅವು ದೊರೆಯಲಾರವು. ಹಿಂದಿನ ಕಾಶ್ಮೀರ ಸರ್ಕಾರವು ಹಲವು ಕೃತಿಗಳನ್ನು ಪ್ರಕಟಮಾಡಿದೆ.

I. ಸಾಹಿತ್ಯವನ್ನು, ಅಲಂಕಾರಶಾಸ್ತ್ರವನ್ನು ಕುರಿತವು

1) ನಾಟ್ಯಶಾಸ್ತ್ರವಿವೃತಿ (ಅಭಿನವಭಾರತೀ) (ಭರತನ ನಾಟ್ಯಶಾಸ್ತ್ರದ ಮೇಲೆ)
2) ಧ್ವನ್ಯಾಲೋಕಲೋಚನ [ಆನಂದವರ್ಧನನ ಧ್ವನ್ಯಾಲೋಕ (ಅಥವಾ ಕಾವ್ಯಾಲೋಕ)ದ ಮೇಲೆ]
3) ಘಟಕರ್ಪರಕುಲಕವೃತ್ತಿ
4) ಕಾವ್ಯಕೌತುಕವಿವರಣ (ಭಟ್ಟತೋತನ 'ಕಾವ್ಯಕೌತುಕ'ದ ಮೇಲೆ) (ಉಪಲಬ್ಧವಿಲ್ಲ)
5) ನಾಟ್ಯಾಲೋಚನ (ಉಪಲಬ್ಧವಿಲ್ಲ)

II. ದರ್ಶನವನ್ನು (ಪ್ರತ್ಯಭಿಜ್ಞಾ ಇತ್ಯಾದಿ) ಕುರಿತವು

6) ತಂತ್ರಾಲೋಕ
7) ತಂತ್ರಸಾರ (ತಂತ್ರಾಲೋಕಸಾರ)
8) ತಂತ್ರವಟಧಾನಿಕಾ
9) ಅನುತ್ತರತ್ರಿಂಶಿಕಾ (ತ್ರೀಶಿಕಾ) ಲಘುವೃತ್ತಿ (ಉತ್ಪಲಮತಾನುಸಾರಿ) (ಅಚ್ಚಾಗಿಲ್ಲ)
10) ಪರಾತ್ರೀಶಿಕಾವೃತ್ತಿ (ಸೋಮಾನಂದನನ್ನುಸರಿಸಿ)
11) ಈಶ್ವರಪ್ರತ್ಯಭಿಜ್ಞಾ ವಿಮರ್ಶಿನೀ (ಉತ್ಪಲನ ಗ್ರಂಥದ ಮೇಲೆ) (ಲಘುವಿಮರ್ಶಿನೀ)
12) ಈಶ್ವರಪ್ರತ್ಯಭಿಜ್ಞಾವಿವೃತಿವಿಮರ್ಶಿನೀ (ಉತ್ಪಲನ ವಿವೃತ್ತಿಯ ಮೇಲೆ) (ಬೃಹತೀ ವಿಮರ್ಶಿನೀ)
13) ಪರಮಾರ್ಥಸಾರ
14) ಮಾಲಿನೀವಿಜಯವಾರ್ತಿಕ
15) ಶಿವದೃಷ್ಟ್ಯಾಲೋಚನ (ಸೋಮಾನಂದನ ಶಿವದೃಷ್ಟಿಯ ಮೇಲೆ) (ಉಪಲಬ್ಧವಿಲ್ಲ)
16) ಭಗವದ್ಗೀತಾರ್ಥಸಂಗ್ರಹ

17) ಪ್ರಬೋಧಪಂಚದಶಿಕಾ
18) ಭೇದವಾದವಿದಾರಣ (ಉಪಲಬ್ಧವಿಲ್ಲ)
19) ಶಿವಶಕ್ತ್ಯವಿನಾಭಾವಸ್ತೋತ್ರ (ಉಪಲಬ್ಧವಿಲ್ಲ)
20) ಕ್ರಮಕೇಳೀ (ಉಪಲಬ್ಧವಿಲ್ಲ)
21) ಪೂರ್ವಪಂಚಿಕಾ (ಶ್ರೀಪೂರ್ವಶಾಸ್ತ್ರ) (ಉಪಲಬ್ಧವಿಲ್ಲ)
22) ಪದಾರ್ಥಪ್ರವೇಶನಿರ್ಣಯ (ಉಪಲಬ್ಧವಿಲ್ಲ)
23) ತಂತ್ರೋಚ್ಚಯ (ಅಚ್ಚಾಗಿಲ್ಲ)
24) ದೇವೀಸ್ತೋತ್ರವಿವರಣ (ಆನಂದವರ್ಧನನ ದೇವೀಸ್ತೋತ್ರದ ಮೇಲೆ) (ಉಪಲಬ್ಧವಿಲ್ಲ)
25) ತತ್ತ್ವಾಧ್ವಪ್ರಕಾಶನ (ಅಚ್ಚಾಗಿಲ್ಲ)
26) ಪ್ರಕರಣವಿವರಣ (ಉಪಲಬ್ಧವಿಲ್ಲ)
27) ಪ್ರಕೀರ್ಣಕವಿವರಣ (ಉಪಲಬ್ಧವಿಲ್ಲ)
28) ಈಶ್ವರಸ್ತೋತ್ರ (ಅಚ್ಚಾಗಿಲ್ಲ)
29) ಅಮರೇಶ್ವರಸ್ತೋತ್ರ (ಉಪಲಬ್ಧವಿಲ್ಲ)
30) ಕಥಾಮುಖತಿಲಕ (ನ್ಯಾಯದರ್ಶನದ ಮೇಲೆ) (ಉಪಲಬ್ಧವಿಲ್ಲ)
31) ಶಾಸ್ತ್ರಪರಾಮರ್ಶ (ಅಚ್ಚಾಗಿಲ್ಲ)
32) ಮೃಗೇಂದ್ರತಂತ್ರವೃತ್ತಿದೀಪಿಕಾ (ಅಚ್ಚಾಗಿಲ್ಲ)
33) ಅನುತ್ತರತತ್ತ್ವವಿಮರ್ಶನೀವೃತ್ತಿ (ಉಪಲಬ್ಧವಿಲ್ಲ)
34) ಪರ್ಯಂತಪಂಚಾಶಿಕಾ (ಡಾ. ವಿ. ರಾಘವನ್ ಅವರಿಂದ ಸಂಪಾದಿತ)
35) ರಹಸ್ಯಪಂಚದಶಿಕಾ (ಅಚ್ಚಾಗಿಲ್ಲ)
36) ಬಿಂಬಪ್ರತಿಬಿಂಬವಾದ

III. ಕಾಂತಿಚಂದ್ರಪಾಂಡೆಯವರ ಗ್ರಂಥದಲ್ಲಿ ಪ್ರಕಟಗೊಂಡಿರುವುವು

37) ಕ್ರಮಸ್ತೋತ್ರ
38) ದೇಹಸ್ಥದೇವತಾಚಕ್ರಸ್ತೋತ್ರ
39) ಪರಮಾರ್ಥದ್ವಾದಶಿಕಾ
40) ಅನುತ್ತರಾಷ್ಟಿಕಾ
41) ಮಹೋಪದೇಶವಿಂಶತಿ
42) ಪರಮಾರ್ಥಚರ್ಚಾ
43) ಭೈರವಸ್ತವ
44) ಅನುಭವನಿವೇದನ

ಅನುಬಂಧ - ಎರಡು

ಗುರುನಾಥಪರಾಮರ್ಶ

(ಅಭಿನವಗುಪ್ತನ ಶಿಷ್ಯರಲ್ಲೊಬ್ಬ ಮಧುರಾಜನ ಲಘುಕಾವ್ಯ ಇದು; ಇದರಲ್ಲಿ ಬೇರೆ ಬೇರೆ ವೃತ್ತಗಳಲ್ಲಿರುವ ನಲವತ್ತೇಳು ಪದ್ಯಗಳಿವೆ. ತನ್ನ ಗುರುವಿನ ಹೆಗ್ಗಳಿಕೆಯನ್ನು ಎತ್ತಿ ತೋರಿಸುವುದು ಕವಿಯ ಆಶಯ. ಇದರಲ್ಲಿ ಅಭಿನವಗುಪ್ತನ ಸಮಗ್ರವಲ್ಲದಿದ್ದರೂ ಸ್ವಾರಸ್ಯವಾದ ಚಿತ್ರಣ ದೊರಕುತ್ತದೆ. ಅವನ ವ್ಯಕ್ತಿತ್ವ ಎಷ್ಟು ಉಜ್ವಲವಾಗಿದ್ದಿತು ಎಂಬುದನ್ನು ಊಹಿಸಿಕೊಳ್ಳಬಹುದು. ಈ ಕಾವ್ಯದಿಂದ ಕೆಲವು ಪದ್ಯಗಳನ್ನಾಯ್ದು ಇಲ್ಲಿ ಕೊಟ್ಟಿದೆ; ಭಾವಾನುವಾದವನ್ನೂ ಒದಗಿಸಿದ್ದೇನೆ.)

ಸ್ವಚ್ಛಂದಪ್ರಸೃಮರ ಗದ್ಯಪದ್ಯವಿದ್ಯಾ-
ವೈಶದ್ಯಪ್ರಕಟಿತ ತತ್ತದಾಗಮಾರ್ಥಾಃ ।
ಪಾಶಚ್ಛಿತ್ ಪರಮಶಿವಾದ್ವಯೋಪದೇಶೈಃ
ಪಾಂತ್ವಸ್ಮಾನಭಿನವಗುಪ್ತನಾಥಪಾದಾಃ ॥ ೧ ॥

ಶೈವಾಗಮಗಳ ತಾತ್ಪರ್ಯವನ್ನು ವಿಶದವಾಗಿ ಗದ್ಯಪದ್ಯರೂಪದ ಬರಹಗಳಲ್ಲಿ, ತನ್ನದೇ ಆದ ಸ್ವತಂತ್ರ ಧೋರಣೆಯಿಂದ ಹೊರಹೊಮ್ಮಿಸುವುದು ಅಭಿನವಗುಪ್ತರ ಹಿರಿಮೆ. ಶೈವಾಗಮದ ಸಾಧನೆಯೆಂದರೆ ಅದ್ವೈತಶಿವಾನುಭವ. ತಾನೇ ವಿಶ್ವಮಯ, ವಿಶ್ವೋತ್ತೀರ್ಣ ಶಿವನೆಂಬುದನ್ನು ಸಾಧಕನು ಗುರುತಿಸಿಕೊಳ್ಳುವುದು. ಈ ಬಗೆಯ ಪ್ರತ್ಯಭಿಜ್ಞೆಗೆ ಗುರುವಿನ ಅನುಗ್ರಹವು ಶಕ್ತಿಪಾತಸ್ವರೂಪವಾಗುತ್ತದೆ. ಗುರುವಿನ ಉಪದೇಶವನ್ನು ಗ್ರಹಿಸಿದೊಡನೆ ಪಾಶಗಳು (ಮಲಗಳು) ತೊಲಗಿಹೋಗುತ್ತವೆ; ಪಶುವಾಗಿದ್ದ ಜೀವಿಯು ಶಿವನಾಗುವನು. ಈ ಬಗೆಯ ಕೊಡುಗೆಯನ್ನು ನೀಡಿ ಗುರುವು ನಮ್ಮನ್ನೆಲ್ಲ ಕಾಪಿಡಲಿ.

(ಪ್ರಹರ್ಷಿಣೀವೃತ್ತ)

ಯತ್ಸಾರಸ್ವತರಸಸಿದ್ಧ ಏವ ಶುದ್ಧಃ
ಸರ್ವೋಽದ್ಧಾ ವಿಲಸತಿ ವಾಚ್ಯವಾಚಕಾತ್ಮಾ ।
ಕಾಶ್ಮೀರೀ ಜಯತಿ ಜಗದ್ಧಿತಾವತಾರಃ
ಸ ಶ್ರೀಮಾನಭಿನವಗುಪ್ತದೇಶಿಕೇಂದ್ರಃ ॥ ೨ ॥

ಅಭಿನವಗುಪ್ತರು ಸಾಹಿತ್ಯಸೃಷ್ಟಿಯಲ್ಲಿ ರಸವನ್ನೂಡಿಸುವ ಸಿದ್ಧಿಯನ್ನು ಪಡೆದು ಕೊಂಡವರು. ಹಾಗಿದ್ದೂ ಅವರು ಶುದ್ಧಸ್ವಭಾವದ ಆತ್ಮನಲ್ಲಿ ವಿಶ್ರಾಂತರಾದವರು. ಎಚ್ಚರ, ಕನಸು, ತನಿನಿದ್ರೆ, ತುರ್ಯ, ತುರ್ಯಾತೀತ ಎಂಬ ನಮ್ಮ ಐದು ಅವಸ್ಥೆಗಳಲ್ಲಿ ಮೊದಲ ಮೂರು ಜೀವಕ್ಕೆ ಸಂಬಂಧಿಸಿದ ಸ್ಥಿತಿಗಳು; ಉಳಿದೆರಡು ಆತ್ಮನ ಅವಸ್ಥೆಗಳು, ತುರ್ಯವೆಂದರೆ ಪ್ರಾಪಂಚಿಕ ಅನುಭವವನ್ನು ಮೀರಿದ್ದು. ತುರ್ಯಾತೀತ ಶುದ್ಧವೆನಿಸಿಕೊಳ್ಳುತ್ತದೆ. ಇಲ್ಲಿ ವಿಶ್ವಮಯನಾದವನು ವಿಶ್ವೋತ್ತೀರ್ಣನಾಗುವನು. ವಾಚ್ಯವೆಂದರೆ ಪ್ರಕಾಶ, ವಾಚಕವೆಂದರೆ ವಿಮರ್ಶೆ. ಆತ್ಮವು ಪ್ರಕಾಶವಿಮರ್ಶಮಯವಾಗಿರುವ ಅನುಭವ ಇಲ್ಲಿ ಸೂಚನೆಗೆ ಬಂದಿದೆ. ಕಾಶ್ಮೀರದೇಶದವರಾದ ಅಭಿನವಗುಪ್ತರು ಲೋಕದ ಹಿತಕ್ಕಾಗಿಯೆ ಅವತರಿಸಿ ಬಂದ ಶಿವ.

(ಅದೇ ವೃತ್ತ)

(ಮೂಲದಲ್ಲಿ ಕಾಶ್ಮೀರಾನ್ ಎಂದಿದೆ, 'ಕಾಶ್ಮೀರಿ' ಎನ್ನುವುದು ತಿದ್ದಿದ ರೂಪ)

ತರ್ಷಂ ಯಃ ಶಮಯತಿ ವಾಙ್ಮಯೌಘವರ್ಷೈಃ
ಭಕ್ತಾನಾಂ ಭವಮರುಮಾರ್ಗಚಂದ್ರಮೋತ್ಥಂ ।
ಹರ್ಷಂ ವಃ ಪ್ರದಿಶತು ಸಚ್ಚಿದಂಬರಸ್ಥಃ
ಸ ಶ್ರೀಮಾನಭಿನವಗುಪ್ತಕಾಲಮೇಘಃ ॥ ೩ ॥

ಅಭಿನವಗುಪ್ತರು ದಟ್ಟವಾದ ಕಾರ್ಮೋಡ; ಸತ್ (ಇರವು) ಚಿತ್ (ಅರಿವು) ಎಂಬ ಶೂನ್ಯಾಕಾಶದಲ್ಲಿರುವುದು ಇದು. ಎಂದರೆ ಶಿವಸ್ವರೂಪವಾಗಿರುವವರು ಅಭಿನವಗುಪ್ತರು. ಅವರ ಮಾತುಗಳೇ ಮೋಡದಿಂದ ಸುರಿಯುವ ಜಡಿಮಳೆ. ಭಕ್ತರಾದವರು ಸಂಸಾರವೆಂಬ ಬೆಂಗಾಡಿನಲ್ಲಿ ಅಲೆದಾಡುತ್ತ ಬಳಲಿ ಬಾಯಾರಿದಾಗ, ಅವರನ್ನು ತಣಿಸುವುದು ಅಭಿನವಗುಪ್ತರ ಮಾತುಗಳು. ನಿಮಗೆಲ್ಲ ಈ ಅಭಿನವಗುಪ್ತರ ಮಾತುಗಳು ಮುದವನ್ನು ನೀಡಲಿ!

(ಅದೇ ವೃತ್ತ)

ಯಸ್ತಾಪಂ ಹರತಿ ತಮಾಂಸಿ ಚ ಸ್ವಭಾಸಾ
ಸ್ವಚ್ಛಾತ್ಮಾ ಸಕಲಕಲಾಕಲಾಪಪೂರ್ಣಃ ।
ಆನಂದಂ ದಿಶತು ದೃಶಾಮಮಂದಮಂತಃ
ಸ ಶ್ರೀಮಾನಭಿನವಗುಪ್ತನಾಥಚಂದ್ರಃ ॥ ೪ ॥

ಅಭಿನವಗುಪ್ತರು ಹುಣ್ಣಿಮೆಯ ಚಂದ್ರನಂತೆ. ತಾನು ಬೆಳಗುತ್ತ ಈ ಚಂದ್ರನು ನಮ್ಮ ಒಡಲಿನ ಬೇಗೆಯನ್ನೂ ಕತ್ತಲೆಯನ್ನೂ ಒಮ್ಮೆಲೆ ತೊಲಗಿಸಬಲ್ಲವನು. ಲೋಕದ ಪಾಪದ ಸೋಂಕು ಇಲ್ಲದೆ ಶುದ್ಧವಾಗಿರುವನು. ಪೂರ್ಣಚಂದ್ರನಲ್ಲಿ ಎಲ್ಲ (ಹದಿನಾರು) ಕಲೆಗಳೂ ತುಂಬಿಕೊಂಡಿರುವಂತೆ ಇವರಲ್ಲೂ ಎಲ್ಲ ವಿದ್ಯಾವಿಭಾಗಗಳು ತುಂಬಿಕೊಂಡಿವೆ. ನಮ್ಮ ಒಳಗೆ ಹೆಚ್ಚಿನ ಆನಂದ ಒದಗಿಬರುವಂತೆ ಅನುಗ್ರಹಿಸಲಿ.

ಯೋ ಮೇಲನೇ ಕ್ವಚನ ದೇಶಿಕಯೋಗಿನೀನಾಂ
ಅದ್ಯಪ್ರಭೃತ್ಯಖಿಲ ಏಷ ಗುರುಕ್ರಮೌಘಃ ।
ತ್ವಯೇವ ಸಂಕ್ರಮಿತ ಇತ್ಯುಪಲಾಲಿತೋಽಭೂತ್
ತಸ್ಮೈ ನಮೋಽಭಿನವಗುಪ್ತಗುರೂತ್ತಮಾಯ ॥ ೭ ॥

ಗುರುವು ಯೋಗಿನಿಯರೊಂದಿಗೆ ಸೇರಿಕೊಂಡಿರುವ ಸಂದರ್ಭವೊಂದರಲ್ಲಿ, ಯೋಗಿನಿಯರು ಇವನನ್ನು ಕುರಿತು 'ಇಂದಿನಿಂದ ಎಲ್ಲ ಸಿದ್ಧ-ಗುರುಸಂಪ್ರದಾಯಕ್ರಮವೂ (ಗುರುಕ್ರಮ, ಕ್ರಮೌಘ) ನಿನ್ನಲ್ಲಿಯೇ ನೆಲೆಗೊಳ್ಳಲಿ, ನಿನಗೆ ಸಂಕ್ರಮಿಸಲಿ' ಎಂದು ಹೇಳಿದ ರಂತೆ. ಹಾಗೆ ಶಕ್ತಿಪಾತದಿಂದ ಸಂಪ್ರದಾಯದ ಉಪದೇಶಕ್ಕೆ, ದೀಕ್ಷೆಗೆ ಅಧಿಕಾರಿಯಾದವರು. ಅಂಥ ಅಭಿನವಗುಪ್ತರಿಗೆ ವಂದನೆ.

(ವಸಂತತಿಲಕಾವೃತ್ತ)

ಅಭಿನವಗುರುಸಾರಸ್ವತಪರಮರಸಾಸ್ವಾದಮೋದಮಾನಾನಾಂ ।
ಅಮೃತಮಪಿ ದತ್ತಮಮರ್ತ್ಯೈರರುಚಿಕೃದಸ್ಮಾಕಮಾರನಾಲಮಿವ ॥ ೧೧ ॥

ಅಭಿನವಗುಪ್ತರ ಮಾತುಗಳ, ಬರಹಗಳ ರಸವನ್ನು ಸವಿದು ಸಂತೋಷಿಸುತ್ತಿರುವ ನಮಗೆ ದೇವತೆಗಳು ಬಂದು ಅಮೃತವನ್ನು ನೀಡಿದರೂ ಅದು ರುಚಿಸಲಾರದು; ಗಂಜಿಯಂತೆ ಇದ್ದೀತು ಅಷ್ಟೆ!

(ಆರ್ಯಾವೃತ್ತ)

ಅಭಿನವಗುರುಸಾರಸ್ವತಚಂದ್ರಾತಪಚರ್ಚಿತೇ ಜಗತಿ ।
ಕಥಮಿವ ತಮಃಕಥಾ ವಾ ತಾಪಕಥಾ ವಾ ಪ್ರಗಲ್ಭತೇ ಸ್ಥಾತುಂ ॥ ೧೩ ॥

ಅಭಿನವಗುಪ್ತರ ಮಾತು-ಬರಹಗಳು ಈ ಬಿಸಿಲಿನ ಬೇಗೆಯಿಂದ ಬೆಂದಿರುವ ಪ್ರಪಂಚದಲ್ಲಿ ಚಂದ್ರನಿದ್ದಂತೆ. ಆಗ ಕತ್ತಲೆಯ ಮಾತೆಲ್ಲಿ? ಬೇಗೆಯ ಕತೆಯೆಲ್ಲಿ? ಅವೆರಡೂ ಚಂದ್ರನೆದುರು ನಿಲ್ಲಲಾರವು.

(ಅದೇ ವೃತ್ತ)

ಅಭಿನವಗುರುಸಾರಸ್ವತಮಾರ್ತಾಂಡಮರೀಚಿಪರಿಚಯೋನ್ನಿದ್ರೇ ।
ಹೃತ್ಪುಂಡರೀಕಕುಹರೇ ನಿವಸತಿ ನಿಯಮೇನ ಮೋಕ್ಷಲಕ್ಷ್ಮೀರ್ನಃ ॥ ೧೪ ॥

ಅಭಿನವಗುಪ್ತರ ಮಾತು-ಬರಹಗಳು ಸೂರ್ಯನ ಕಿರಣಗಳಂತೆ. ಅವುಗಳಿಂದ ನಿದ್ರೆ ಬಿಟ್ಟು ಎಚ್ಚೆತ್ತ ನಮ್ಮ ಒಡಲೆಂಬ ತಾವರೆಯೊಳಗೆ ಅಡಗಿ ನೆಲೆಗೊಂಡಿರುವ ಮೋಕ್ಷಲಕ್ಷ್ಮಿಯು ತೋರಿಕೊಳ್ಳುವಳು.

(ಅದೇ ವೃತ್ತ)

ನಿಜಹೃದಯಕುಹರನಿಹಿತಸ್ಫುರದಭಿನವಗುಪ್ತವಾಙ್ಮಯಘನಾನಾಂ ।
ಅಸ್ಮಾಕಮಾತ್ಮವಿದುಷಾಮವ್ಯಾಹತಮೇವ ಸಹಜಮೈಶ್ವರ್ಯಂ ॥ ೧೭ ॥

ನಮ್ಮ ಒಡಲಾಳದಲ್ಲಿ ನೆಲೆಸಿದ್ದು ಬೆಳಗುವ ಅಭಿನವಗುಪ್ತರ ಮಾತು-ಬರಹಗಳು ಆತ್ಮಜ್ಞಾನವನ್ನು ನಮ್ಮೊಳಗೆ ನೆಲೆಗೊಳ್ಳುವಂತೆ ಮಾಡಿ ನಮಗೆ ಸಹಜವಾದ ಈಶ್ವರಭಾವವನ್ನು ಎಡೆಬಿಡದೆ ಬೆಳಗುತ್ತವೆ.

(ಅದೇ ವೃತ್ತ)

ಅಭಿನವಪರಮೇಶ್ವರಪ್ರಸಾದಾತ್
ಸ್ವಹೃದಯಸನ್ನಿಹಿತಾತ್ಮದೇವತಾನಾಂ ।
ಜಡಘಟಪಟತಾಮ್ರಕಾಂಚನಾಶ್ಮ-
ಪ್ರಭೃತಿಷು ನ ಪ್ರತಿಮಾಸು ಪೂಜನಾಸ್ಥಾ ॥ ೧೮ ॥

ಅಭಿನವಗುಪ್ತರೆಂಬ ಪರಮಶಿವನ ಅನುಗ್ರಹದಿಂದ, ನಮ್ಮ ಒಡಲೊಳಗೇ ಇರುವ ಆತ್ಮವೇ ಶಿವನೆಂದು ಮನವರಿಕೆಯಾಯಿತು. ಇನ್ನು ಜಡವಾದ ಮಣ್ಣು, ಬಟ್ಟೆ, ತಾಮ್ರ, ಬಂಗಾರ, ಕಲ್ಲುಗಳಿಂದ ಮಾಡಿದ ಮೂರ್ತಿಗಳನ್ನು ಪೂಜಿಸಬೇಕೆಂಬ ಬಯಕೆ ತೊಲಗಿ ಹೋಯಿತು.

(ಪುಷ್ಪಿತಾಗ್ರವೃತ್ತ)

ಅಭಿನವಪರಮೇಶ್ವರಪ್ರಸಾದಾತ್
ಅಪಗತಭೌತಿಕವಿಗ್ರಹಾಗ್ರಹಾಣಾಂ ।
ಪರಧನಹರಣಾದಿ ಪಾಪಚಿಂತಾಃ
ಪರಪುರುಷಾಣಿ ವಚಾಂಸಿ ವಾ ಕಥಂ ಸ್ಯುಃ ॥ ೧೯ ॥

ಅಭಿನವಗುಪ್ತರೆಂಬ ಪರಮಶಿವನ ಅನುಗ್ರಹದಿಂದ, ನಮ್ಮ ಪ್ರಾಕೃತದೇಹದ ಮೇಲಣ ಅಭಿಮಾನ ತೊಲಗಿಹೋಯಿತು. ಇನ್ನು ಬೇರೆಯವರ ಹಣವನ್ನು ಅಪಹರಿಸುವುದು ಮೊದಲಾದ ಕೆಟ್ಟ ಆಲೋಚನೆಗಳಾಗಲಿ, ಬೇರೆಯವರಿಗೆ ನೋವಾಗುವಂಥ ಕೆಟ್ಟ ಮಾತುಗಳನ್ನಾಡುವುದಾಗಲಿ ನಮಗೆ ಹೇಗೆ ಇದ್ದಾವು?

(ಅದೇ ವೃತ್ತ)

ಸಿದ್ಧಾಂತ-ವಾಮ-ಭೈರವ-ಯಾಮಳ-ಕಾಲ-ತ್ರಿಕೈಕವೀರಾಣಾಂ ।
ಅಭಿನವಗುಪ್ತಃ ಶ್ರೀಮಾನಾಚಾರ್ಯಪದೇ ಸ್ಥಿತೋ ಜಯತಿ ॥ ೨೦ ॥

ಆಗಮ ಹೇಳುವಂಥ ಭೇದ, ಅಭೇದ, ಭೇದಾಭೇದಸಿದ್ಧಾಂತ; ಶಕ್ತಿಪ್ರಧಾನವಾದ ವಾಮಸಂಪ್ರದಾಯ; ಭೈರವನೇ ಪ್ರಮುಖದೈವವಾದ ಭೈರವತಂತ್ರ; ಶಿವಶಕ್ತಿಯರನ್ನೊಳಗೊಂಡ

ಯಾಮಳತಂತ್ರ; ಶಂಭುನಾಥನಿಂದ ಪಡೆದುಕೊಂಡ ಕುಲಪದ್ಧತಿ; ಪತಿ-ಪಶು-ಪಾಶಗಳ ರಹಸ್ಯವನ್ನು ಹೇಳುವ ತ್ರಿಕ; ಭೈರವನನ್ನೇ ಏಕವೀರನೆಂದು ಸಮರ್ಥಿಸುವ ಆಗಮಮತ—ಇವೆಲ್ಲ ಶೈವಪರಂಪರೆಗಳಿಗೂ ಅಭಿನವಗುಪ್ತರೇ ಆಚಾರ್ಯರೆಂದು ಪ್ರಸಿದ್ಧರಾದರು.

(ಆರ್ಯಾವೃತ್ತ)

ಅಭಿನವಗುಪ್ತನಾಥಲಿಖಿತಂ ಲಿಖಿತಂ ಹೃದಯೇ
ತದಿತರಶಾಸ್ತ್ರಕಾರಲಿಖಿತಂ ಲಿಖಿತಂ ಸಲಿಲೇ ।
ಸ್ವಹೃದಯದೇವತಾಮುಖಹುತಂ ಹುತಮಗ್ನಿಮುಖೇ
ತದಿತರದೇವತಾಸು ನಿಹಿತಂ ನಿಹಿತಂ ಭಸಿತೇ ॥ ೨೧ ॥

ಅಭಿನವಗುಪ್ತರು ಬರೆದದ್ದು ನಮ್ಮೊಡಲಲ್ಲಿ ಕೊರೆದಿಟ್ಟಂತೆ. ಉಳಿದ ಶಾಸ್ತ್ರಕಾರರು ಬರೆದದ್ದು ನೀರ ಮೇಲಣ ಬರಹಗಳು! ತನ್ನೊಡಲೊಳಗಿರುವ ದೇವತೆಗೆ (ಆತ್ಮಕ್ಕೆ) ನೀಡಿದ ಎಡೆ ಅಗ್ನಿಯಲ್ಲಿ ಮಾಡಿದ ಹೋಮದಂತೆ. ಬೇರೆ ದೇವತೆಗಳಿಗೆ ಮಾಡಿದ ಪೂಜೆ ಬೂದಿಯಲ್ಲಿ ಮಾಡಿದ ಹೋಮದಂತೆ.

(ಕೋಕಿಲವೃತ್ತ)

ಶ್ರೀಮಾನಭಿನವಗುಪ್ತಾಚಾರ್ಯಃ ಶ್ರೀಕಂಠನಾಥ ಏವೇತಿ ।
ಪ್ರತಿಪದ್ಯತಾಮಿತರಥಾ ವ್ಯಾಖ್ಯಾತೃತ್ವಂ ಕಥಂ ಭವೇದಿತ್ಥಂ ॥ ೨೨ ॥

ನಮ್ಮ ಗುರುಗಳಾದ ಅಭಿನವಗುಪ್ತರೇ ಶೈವಾಗಮದ ಉಗಮಕ್ಕೆ ಕಾರಣನಾದ ಶ್ರೀಕಂಠನಾಥ ಎಂಬ ಪರಮಶಿವನ ರೂಪವೆಂದೇ ತಿಳಿಯಬೇಕು. ಹಾಗಿಲ್ಲವಾದರೆ ಶೈವಸಂಪ್ರದಾಯಕ್ಕೆ ಇಷ್ಟು ಪ್ರಾಮಾಣಿಕವಾಗಿ ವ್ಯಾಖ್ಯಾನ ಮಾಡಿದುದು ಹೇಗೆ?

(ಶ್ರೀಕಂಠನಾಥನ ಆಣತಿಯಂತೆ ತ್ರ್ಯಂಬಕ, ಆಮರ್ದ, ಶ್ರೀನಾಥ ಎಂಬ ಮೂವರು ಸಿದ್ಧಪುರುಷರು ಕಾಣಿಸಿಕೊಂಡು ಅಭೇದ, ಭೇದ, ಭೇದಾಭೇದಶೈವಸಂಪ್ರದಾಯಗಳಿಗೆ ಪ್ರವರ್ತಕರಾದರು.)

(ಆರ್ಯಾವೃತ್ತ)

ಅಭಿನವಗುಪ್ತಮುಖೇಂದೋರಮೃತಕಲೋಲ್ಲಾಸಿಸುಂದರಾದುದಿತಾ ।
ಜ್ಞಾನೇಂದುಕೌಮುದೀ ನಃ ಪೂರ್ಣಂ ಪುಷ್ಣಾತು ಶಿವಭೋಗಂ ॥ ೨೪ ॥

ಅಭಿನವಗುಪ್ತರ ಮೊಗವೆಂಬುದೇ ಚಂದ್ರ; ಅವರಾಡುವ ಮಾತುಗಳು ಬೆಳದಿಂಗಳ ಹೊಳಹು; ಅಮೃತಬಿಂದುಗಳು. ಅವುಗಳ ಎಡೆಬಿಡದ ಬೆಳಕಿನ ಚೆಲುವಿನಿಂದ ಜ್ಞಾನವೆಂಬ ನೈದಿಲೆಯು ಅರಳಿ ನಮ್ಮಲ್ಲಿ ಶಿವನ ಅನುಭವವನ್ನು ತುಂಬಿಸಲಿ

(ಆರ್ಯಾವೃತ್ತ)

ಅಂಜನೇನ ಹೃದಯೇ ಮಮಾಂಜಿತೇ
ಭಂಜನೇನ ಭವವಾಸನಾರುಜಾಂ ।
ದೃಶ್ಯತೇಽಭಿನವಗುಪ್ತದೇಶಿಕೈಃ
ಸಂಚಿತಃ ಶಿವನಿಧಿಃ ಪದೇ ಪದೇ ॥ ೨೫ ॥

ಭೂಮಿಯೊಳಗೆ ಅಡಗಿರುವ ನಿಧಿಯನ್ನು ಕಾಣಲು ಕಣ್ಣಿಗೆ ಅಂಜನವನ್ನು ಹಾಕಿಕೊಳ್ಳುವ ಸಂದರ್ಭವನ್ನು ಇಲ್ಲಿ ಕವಿ ಹಿಡಿದಿದ್ದಾನೆ. ನನ್ನ ಒಡಲಲ್ಲಿ ಪ್ರಪಂಚದ ಸೋಂಕಿನ ರೋಗ ಇದ್ದಿತು; ಅದನ್ನು ತೊಲಗಿಸಿ ಗುರುವು ನನ್ನ ಒಡಲಿಗೆ ಅಂಜನವನ್ನು ಹಾಕಿದನು. ಅದರ ಫಲವಾಗಿ ಶಿವನೆಂಬ ನಿಧಿಯು ಹೆಜ್ಜೆಹೆಜ್ಜೆಗೆ ಕಾಣಿಸಿಕೊಳ್ಳುತ್ತಿದೆ.

(ರಥೋದ್ಧತಾವೃತ್ತ)

ಅಭಿನವಗುಪ್ತದೇಶಿಕಮುಖೋದ್ಗತಸೂಕ್ತಿಸುಧಾ-
ಸುರತಟಿನೀಪ್ರವಾಹಲಹರೀ ಲವಮಾತ್ರಮಪಿ ।
ಶ್ರುತಿಸರಣಿಂ ಪವಿತ್ರಯತಿ ಯಸ್ಯ ಸ ಏವ ಕೃತೀ
ಯದಿ ಹೃದಯಂ ಪ್ರವಿಷ್ಟಮಥ ಕಿಂ ಶಿವ ಏವ ಹಿ ಸಃ ॥ ೨೭ ॥

ಅಭಿನವಗುಪ್ತರೆಂಬ ಗುರುವಿನ ಮುಖದಿಂದ ಹೊರಬಂದ ಮಾತುಗಳು ಗಂಗಾ ಪ್ರವಾಹವಿದ್ದಂತೆ; ಅದರ ಒಂದಿಷ್ಟಾದರೂ ಭಾಗ ಯಾರ ಕಿವಿಯೊಳಗಾದರೂ ಬಿದ್ದು ಪವಿತ್ರವನ್ನಾಗಿ ಮಾಡಿದರೆ ಅವನೇ ಕೃತಾರ್ಥ. ಇನ್ನು ಅದು ಹೃದಯವನ್ನೂ ಹೊಕ್ಕಿತೆಂದರೆ ಅವನು ಶಿವನೇ ಆಗಿಬಿಟ್ಟ!

(ಕೋಕಿಲಕವೃತ್ತ)

ಅಭಿನವಗುಪ್ತಯುಕ್ತಿಪರಿಶೀಲನಪಾಟವತಃ
ತ್ರುಟಿತಸಮಸ್ತಸಂಶಯತಮಃಪಟಲೇ ಹೃದಯೇ ।
ಮುಕುರ ಇವಾವಭಾತಿ ಮುಖಮಂಡಮಖಂಡಮಿದಂ
ಪೃಥಗಪಿ ಭಾಸಮಾನಮಪೃಥಕ್ ಸ್ವವಿಮರ್ಶಮಯಂ ॥ ೨೮ ॥

ಅಭಿನವಗುಪ್ತರ ಯುಕ್ತಿಯುಕ್ತವಾದ ವಿಚಾರವನ್ನು ಪರಿಶೀಲನಮಾಡುವ ಜಾಣತನ ನನಗಿದೆಯಾಗಿ, ನನ್ನ ಒಡಲ ಒಳಗಿದ್ದ ಸಂಶಯಗಳೆಲ್ಲ ಕತ್ತರಿಸಿಹೋದುವು. ನನ್ನ ಮುಖವು ಪೂರ್ಣವಾಗಿ ಕನ್ನಡಿಯಲ್ಲಿ ಕಾಣುವಂತೆ ನನ್ನ ಸ್ವರೂಪವು ಒಡಲೊಳಗೆ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತಿದೆ. ಕನ್ನಡಿಯು ಮುಖದಿಂದ ಬೇರೆಯೇ ಆದರೂ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವು ಬಿಂಬಕ್ಕಿಂತ ಹೊರತಾದುದಲ್ಲ. ಶಿವನು ಬಿಂಬ, ವಿಶ್ವವು ಪ್ರತಿಬಿಂಬ. ಪ್ರಕಾಶವು ವಿಮರ್ಶೆಗಿಂತ ಬೇರೆಯಾದುದು. ಆದರೆ ಪ್ರಕಾಶವಿಲ್ಲದೆ ವಿಮರ್ಶೆಯೆಲ್ಲಿದೆ? ಚಂದ್ರನನ್ನು ಬಿಟ್ಟು ಚಂದ್ರಿಕ (ಬೆಳದಿಂಗಳು) ಇರುವುದಾದೀತೆ? ಪ್ರಕಾಶವು ಶಿವ;

ವಿಮರ್ಶೆಯು ಶಕ್ತಿ. ಆತ್ಮವು ಶಿವನೇ ಎಂದು ಗುರುತಿಸಿಕೊಂಡಾಗ ಅದು ಸ್ವವಿಮರ್ಶ; ಪ್ರತ್ಯಭಿಜ್ಞಾನ.

(ಅದೇ ವೃತ್ತ)

ದಿಶಿ ದಿಶಿ ವಿಹರಾಮ್ಯಹಂ ವೀತಶಂಕಾಕಲಂಕಃ ಸುಖಂ
ಭಗವತಿ ಪರಮೇಶ್ವರೇಽನುತ್ತರೇ ಭಕ್ತಿಮಾನಾತ್ಮನಿ ।
ಸ್ಫುರದಭಿನವಗುಪ್ತನಾಥಾನನಾಂಭೋಜವಾಗ್‌ವಾಹಿನೀ
ರಸಪರಿಮಲಮಜ್ಜನೋನ್ಮಜ್ಜನಾನಂದಲೀಲಾಪರಃ ॥ ೩೦ ॥

ಅಭಿನವಗುಪ್ತನಾಥರ ಮುಖವೆಂಬ ತಾವರೆಯಿಂದ ಹೊರಸೂಸುವ ಮಾತುಗಳು ರಸಭರಿತವಾದ ಪರಿಮಳಯುಕ್ತವಾದ ನೀರಿನಿಂದ ತುಂಬಿದ ಕೊಳ; ಅದರಲ್ಲಿ ಮುಳುಗಿ ಮೇಲೆದ್ದು ಆನಂದದಿಂದ ಆಟವಾಡುತ್ತ, ಭಗವಂತನೂ ಪರಮೇಶ್ವರನೂ ಅನುತ್ತರನೂ (ಮಿಗಿಲಿಲ್ಲದವನೂ) ನನ್ನ ಆತ್ಮನೂ ಆದವನಲ್ಲಿ ಭಕ್ತಿಯನ್ನು ಹೊಂದಿದವನಾಗಿ, ಸಂದೇಹಗಳೆಂಬ ಕೊಳೆಗಳನ್ನೆಲ್ಲ ಕಳೆದುಕೊಂಡು ದಿಕ್ಕು ದಿಕ್ಕುಗಳಲ್ಲಿ ಸುಖವಾಗಿ ವಿಹಾರಮಾಡುವೆನು.

(ನಾರಾಚವೃತ್ತ)

ಮಹಾಮಾಹೇಶ್ವರಶ್ರೀಮದಾಚಾರ್ಯಾಭಿನವೋಕ್ತಯಃ ।
ಹೃದಯೇ ಪ್ರತಿತಿಷ್ಠಂತು ಪ್ರತಿಷ್ಠಂತಾಂ ಪಶೂಕ್ತಯಃ ॥ ೩೧ ॥

ಮಹಾಮಾಹೇಶ್ವರಪದವನ್ನು ಪಡೆದುಕೊಂಡ ಆಚಾರ್ಯರು ಅಭಿನವಗುಪ್ತರು; ಅವರ ಮಾತುಗಳು ನನ್ನ ಒಡಲಲ್ಲಿ ಮೂಡಿಕೊಂಡು ನೆಲೆಸಲಿ. ಪಾಶಗಳಿಂದ ಕೂಡಿದ ಜೀವದ ಅನಿಸಿಕೆಗಳು ಅಡಗಲಿ (ತ್ರಿಕಶಾಸ್ತ್ರದಲ್ಲಿ ಪಶುವೆಂದರೆ ಜೀವ; ಪತಿಯಾದ ಶಿವನನ್ನು ಮರೆಮಾಚಿಬಿಡುವ ಪಾಶದಿಂದಾಗಿ ಅವನು ಪಶು).

(ಅನುಷ್ಟುಪ್‌ವೃತ್ತ)

ಮನಸ್ಯೆವ ಗಮ್ಯತೇ ಯಾ ಪರಿಪಂಥಿನ ಏವ ಪಾಲಕಾ ಯಸ್ಯಾಂ ।
ಪ್ರತಿಪದವಿಶ್ರಾಂತಿಮಯೀ ಪದ್ಧತಿರಿಯಮಭಿನವಾ ಜಯತಿ ॥ ೩೨ ॥

ಅಭಿನವಗುಪ್ತರು ತಿಳಿಸಿಕೊಟ್ಟ ಸಂಪ್ರದಾಯವು ಎಂದೆಂದಿಗೂ ಉಳಿದಿರಲಿ, ಬೆಳೆಯಲಿ; ಮನಸ್ಸಿನಲ್ಲಿ ಅದು ಮೂಡಿಬಂದರೆ, ನಮ್ಮ ಹಗೆಗಳೂ ಹಿತವರಾದಾರು; ಹೆಜ್ಜೆ ಹೆಜ್ಜೆಗೆ ಶುದ್ಧವಾದ ಆತ್ಮನ ನೆಲೆಯಲ್ಲಿರುವ ನೆಮ್ಮದಿಯನ್ನು ಈ ಸಂಪ್ರದಾಯವು ಒಳಗೊಂಡಿದೆ.

(ಆರ್ಯಾವೃತ್ತ)

ಸದಾಭಿನವಗುಪ್ತವಾಗಮೃತಪಾನಗೋಷ್ಠೀರಸಾತ್
ಪರಾಕೃತಸಮಸ್ತಪಾಶವವಿಕಲ್ಪನಾವಿಪ್ಲವಂ ।
ಮಮ ತ್ವಯಿ ನಿವೇಶಿತಂ ಮಯಿ ತವಾಪಿ ಮಗ್ನಂ ಮನಃ
ಪರಸ್ಪರರಸಾಸ್ಪದಂ ಭುವಿ ಪರೇಶ ಸಂಪದ್ಯತಾಂ ॥ ೩೩ ॥

ಅಭಿನವಗುಪ್ತರ ಮಾತುಗಳೆಂಬ ಅಮೃತವನ್ನು ಕುಡಿಯುವ ಗೋಷ್ಠಿಯಲ್ಲಿ ಪಾಲ್ಗೊಂಡು ಪಡೆದುಕೊಂಡ ರುಚಿಯಿಂದಾಗಿ ಪಶುವಿನ (ಎಂದರೆ ಮಲಗಳಿಂದ ಕೂಡಿದ ಜೀವನ) ಮನಸ್ಸಿನ ಆಲೋಚನೆಗಳೆಂಬ ಗೊಂದಲವನ್ನು ನಿನ್ನಲ್ಲಿ ಇರಿಸಿದ್ದೇನೆ; ನಿನ್ನ ಅನುಗ್ರಹವೆಂಬ ಎಣಿಕೆಯು ನನ್ನಲ್ಲಿ ನೆಲೆಗೊಂಡಿದೆ. ಹೀಗೆ ಪರಸ್ಪರವಾದ ರುಚಿಯು ಇಲ್ಲಿ ಮೂಡಿಬರಲಿ.

(ಪೃಥ್ವೀವೃತ್ತ)

ಚಮತ್ಕುರ್ವಂತು ಮಾಂ ಸರ್ವೇ ನ್ಯಕ್ಕುರ್ವಂತ್ವಥವಾ ಬುಧಾಃ ।
ನ ಮದ್ಗುರ್ವಧಿಕಃ ಕಶ್ಚಿದ್ವಿಪಶ್ಚಿಚ್ಛಿವನಿಶ್ಚಯೇ ॥ ೩೪ ॥

ಎಲ್ಲ ಪಂಡಿತರೂ ಬೇಕಿದ್ದರೆ ನನ್ನನ್ನು ಹೊಗಳಲಿ, ಇಲ್ಲವಾದರೆ ತೆಗಳಲಿ. ಇದಂತೂ ನನ್ನ ಬಲವಾದ ನಂಬಿಕೆ. ಶಿವನನ್ನು ನಿರ್ಣಯಿಸುವುದರಲ್ಲಿ ಯಾವ ವಿದ್ವಾಂಸನೂ ನನ್ನ ಗುರುವನ್ನು ಮೀರಿಸಲಾರನು.

(ಅನುಷ್ಟುಪ್‌ವೃತ್ತ)

ವಸ್ತುನಿ ವಸ್ತುನಿ ಯೋಽಸೌ ನಿವಸತಿ ಕಾರ್ತ್ಸ್ನ್ಯೇನ ಕಾರ್ತ್ಸ್ನ್ಯೇನ ।
ವಿಸ್ಮಯನಿಧಯೇ ತಸ್ಮೈ ನಮೋ ನಮಃ ಶ್ರೀಮತೇ ಗುರವೇ ॥ ೩೬ ॥

ವಿಶ್ವದಲ್ಲಿ ಶಿವನಿಂದ ಪೃಥಿವಿಯವರೆಗೆ ಮೂವತ್ತಾರು ತತ್ತ್ವಗಳು. ಶಿವನು ಈ ತತ್ತ್ವಗಳೆಲ್ಲದರಲ್ಲಿ ಇದ್ದಾನೆ; ಶಿವನಿಂದ ತತ್ತ್ವಗಳು ಬೇರೆ ಎನ್ನುವಂತಿಲ್ಲ. ಶಿವನು ವಿಶ್ವಮಯ. ಒಂದೊಂದು ತತ್ತ್ವದಲ್ಲೂ ಅಂಶರೂಪದಲ್ಲಿದ್ದು, ಸಮಷ್ಟಿರೂಪದಿಂದ ಶಿವ ಎಂದೂ ಹೇಳಲಾಗದು. ಒಂದೊಂದು ವಸ್ತುವಿನಲ್ಲೂ ಅವನು ಪರಿಪೂರ್ಣಸ್ವರೂಪದಲ್ಲೇ ಇದ್ದಾನೆ. ತತ್ತ್ವಗಳಿಂದಾದ ವಿಶ್ವವನ್ನು ಮೀರಿಯೂ ಇದ್ದಾನೆ; ಅವನು ವಿಶ್ವೋತ್ತೀರ್ಣ. ನನ್ನ ಗುರು ಶಿವನೇ. ತನ್ನ ವಿಶ್ವಮಯವಾದರೂ ವಿಶ್ವೋತ್ತೀರ್ಣರೂಪವನ್ನು ಶಿಷ್ಯರಿಗೆ ತಿಳಿಸಿಕೊಟ್ಟು ಆಶ್ಚರ್ಯಕ್ಕೆಡೆಮಾಡಿಕೊಟ್ಟಿದ್ದಾನೆ. ಇಂಥ ಸೋಜಿಗದ ಗಣಿಯಾದ ಶ್ರೀಗುರುವಿಗೆ ನಮಸ್ಕಾರ.

(ಆರ್ಯಾವೃತ್ತ)

ಗುರುರೇವ ಶಿವಃ ಶಿವತ್ವದಾಯೀ
ಸ ಪುನಃ ಕರ್ಮವಶೇನ ಭೋಗದಾತಾ ।
ಶಿವ ಏವ ಗುರುಃ ಕೃಪಾತ್ತಮೂರ್ತಿಃ
ಪಶುಪಾಶಚ್ಛಿದಿಹಾನ್ಯಥಾ ಕಥಂ ಸ್ಯಾತ್ ॥ ೩೭ ॥

ಗುರುವೇ ಶಿವ; ನಮಗೆ ಶಿವತ್ವವನ್ನು ನೀಡುವವನು ಅವನೇ. ನಮ್ಮ ಕರ್ಮಗಳಿಗನು ಸಾರವಾಗಿ ಭೋಗವನ್ನೂ ಒದಗಿಸುವನು. ಶಿವನೇ ತನ್ನ ಕರುಣೆಯಿಂದ ಗುರುವಿನ ರೂಪವನ್ನು ತಳೆದು ನಮ್ಮೆದುರು ಕಾಣಿಸಿಕೊಳ್ಳುವನು; ಜೀವದ ಕೊಳೆಗಳನ್ನು ಕತ್ತರಿಸಿ ಬಿಸುಡುವನು. ಹಾಗಲ್ಲದೆ ಇರಲು ಸಾಧ್ಯವೆ?

(ಮಾಲಭಾರಿಣೀವೃತ್ತ)

ಯಾ ಚಿದುಲ್ಲಸತಿ ವಿಶ್ವಸತ್ತಯಾ
ಸಾ ಶಿವೋऽಹಮಿತಿ ವಿಶ್ವಸತ್ತಯಾ ।
ಆಕಲಯ್ಯ ಸಕೃದೇವ ಮುಚ್ಯತೇ
ದೇಶಿಕೈರಸಕೃದೇವ ಮುಚ್ಯತೇ ॥ ೩೮ ॥

ಯಾವ ಚಿತ್‌ಶಕ್ತಿಯು ವಿಶ್ವದ ಸಾರವಾಗಿ ಹೊರಹೊಮ್ಮಿ ತೋರಿಕೊಳ್ಳುವುದೋ ಅದೇ ಶಿವನು ತಾನೇ ಎಂಬ ವಿಶ್ವಾಸದಿಂದ ಒಮ್ಮೆ ಕಂಡುಕೊಂಡರೆ ಸಾಕು, ಬಂಧಗಳಿಂದ ಬಿಡುಗಡೆಯಾಗುತ್ತದೆ. ಹೀಗೆಂದು ನನ್ನ ಗುರುವು ಅಡಿಗಡಿಗೆ ಹೇಳುತ್ತಿರುವನು.

(ರಥೋದ್ಧತಾವೃತ್ತ)

ಅಸ್ಪಷ್ಟಪೂರ್ವೋತ್ತರಕರ್ಮಯೋಗಮಿದಂ ಕೃತಂ ಪಶ್ಚಿಮಮೇವ ಯೇನ ।
ತದ್ದಕ್ಷಿಣೀಕೃತ್ಯ ಶಿವಾಯ ತಸ್ಮೈ ನಿವೇದಿತಂ ಮೇ ಗುರವೇ ಶರೀರಂ ॥ ೪೧ ॥

ಯಾವ ಗುರುವು ನನಗೇ ತಿಳಿಯದ ನನ್ನ ಮೊದಲ ಮತ್ತು ಅನಂತರದ ಕರ್ಮದೊಂದಿಗೆ ಇರುವ ನಂಟನ್ನು ಕಡೆಯದನ್ನಾಗಿ ಮಾಡಿಬಿಟ್ಟನೋ (ಎಂದರೆ ನಾಶಮಾಡಿದನೋ) ಅಂಥ ಗುರುವಾದ ಶಿವನಿಗೆ ನನ್ನ ದೇಹವನ್ನೇ ಗುರುದಕ್ಷಿಣೆಯಾಗಿ ಸಲ್ಲಿಸಿದ್ದೇನೆ.

(ಉಪಜಾತಿವೃತ್ತ)

ಜೀವನ್ನೇವ ಶಿವೋऽಸ್ಮಿ ಸದ್ಗುರುಗಿರಾ ಜ್ಞಾನಕ್ರಿಯಾಶಕ್ತಿಭಿಃ
ಜ್ಞಾನೇನ ಪ್ರತಿಪಾದಿತೇನ ಜವನತಃ ಸಂಚೇಷ್ಟಮಾನೋऽಪ್ಯಹಂ ।
ಪ್ರಾರಬ್ಧಾಖಿಲಪೂರ್ವಕರ್ಮಸದಸದ್‌ಭೋಗೋಪಕ್ಷಯಾತ್
ದೇಹೇऽಸ್ಮಿನ್ ಪತಿತೇ ಚರಾಚರಜಗತ್ ಸ್ವಾತ್ಮಾ ಸ ಏವೇಶ್ವರಃ ॥ ೪೩ ॥

ಸಾಮಾನ್ಯಜನರಂತೆ ನಾನು ಓಡಿಯಾಡುತ್ತಿದ್ದರೂ, ಕೆಲಸ ಮಾಡುತ್ತಿರುವೆನಾದರೂ ನನ್ನ ಸದ್ಗುರುಗಳ ಉಪದೇಶದಿಂದ, ಅದರಲ್ಲಡಗಿರುವ ಜ್ಞಾನಶಕ್ತಿ-ಕ್ರಿಯಾಶಕ್ತಿಗಳಿಂದ, ಅದು ನಿರೂಪಿಸುವ ಆತ್ಮಜ್ಞಾನದಿಂದ ನಾನು ಬದುಕಿರುವಾಗಲೇ ಶಿವನಾಗಿಬಿಟ್ಟಿದ್ದೇನೆ. ನನ್ನೆಲ್ಲ ಪ್ರಾರಬ್ಧಕರ್ಮಗಳಿಂದ ಒಳ್ಳೆಯದು, ಕೆಟ್ಟದು ಎಲ್ಲ ಅನುಭವಿಸಿ ಕರ್ಮವನ್ನು ಕಳೆದುಕೊಂಡಮೇಲೆ

ದೇಹವು ಬಿದ್ದಾಗ, ಸ್ಥಾವರಜಂಗಮಾತ್ಮಕವಾದ ಜಗತ್ತಿನ ಆತ್ಮವೇ ನಾನಾಗಿಬಿಡುವೆ; ಅದೇ ಈಶ್ವರನ ಸ್ಥಿತಿ.

(ಶಾರ್ದೂಲವಿಕ್ರೀಡಿತವೃತ್ತ)

ನ ವೇದವೇದಾಂಗಪರಿಶ್ರಮೋ ಮೇ ನ ತರ್ಕಶಿಕ್ಷಾ ನ ಚ ಕಾರ್ಯಶಿಕ್ಷಾ ।
ತಥಾಪಿ ತಾವತ್ ಪರಿಮಾರ್ಷ್ಟಿ ಮೌಢ್ಯಂ ಗುರೂಪದೇಶಪ್ರತಿಪತ್ತಿದಾರ್ಢ್ಯಂ ॥ ೪೬ ॥

ನನಗೆ ವೇದಗಳಲ್ಲಾಗಲಿ ವೇದಾಂತಗಳಲ್ಲಾಗಲಿ ಅಧ್ಯಯನ ನಡೆದಿಲ್ಲ, ನಾನೇನು ತರ್ಕವೇ ಮೊದಲಾದ ಶಾಸ್ತ್ರಗಳನ್ನು ಕಲಿತಿಲ್ಲ; ಏನು ಸಾಧನೆ ಮಾಡಬೇಕೆಂಬುದನ್ನು ಕುರಿತು ಯಾರೂ ನನಗೇನು ತಿಳಿಸಿಲ್ಲ. ಆದರೂ ನನ್ನ ಗುರುವಾದ ಅಭಿನವಗುಪ್ತರ ಉಪದೇಶವನ್ನು ಕೇಳಿದುದರ ಫಲವಾಗಿ ನನ್ನಲ್ಲಿದ್ದ ಅಜ್ಞಾನವು ತೊಲಗಿಹೋಗಿದೆ.

(ಉಪೇಂದ್ರವಜ್ರಾವೃತ್ತ)

ಜಾಣಂ ಕಾಣಂ ಕುಣಂತೋ ಣಂ ಜೀವಂತಾಣಂ ಸಿವತ್ತಣಂ ।
ವಾಚಾ ಹೀಣೋ ವಿಆಜೇಣ ಣಿಚ್ಚಪುಣ್ಣೋ ಸ ದೇಸಿಓ ॥ ೪೭ ॥

ಇದು ಪ್ರಾಕೃತದಲ್ಲಿದೆ; ಇದರ ಸಂಸ್ಕೃತಛಾಯೆ ಹೀಗೆ—

ಯೇಷಾಂ ಕೇಷಾಂ ಕುರ್ವನ್ನನು ಜೀವತಾಂ ಶಿವತ್ವಂ ।
ವಾಚಾ ಹೀನೋ ವ್ಯಾಜೇನ ನಿತ್ಯಪೂರ್ಣಃ ಸ ದೇಶಿಕಃ ॥

ಯಾವುದಾದರೊಂದು ನೆವದಿಂದ ಸದಾ ಪರಿಪೂರ್ಣನಾದ ನನ್ನ ಗುರುವು ಮೌನದಿಂದಲೇ ಮನುಷ್ಯರಿಗೆ ಶಿವಾನುಭವವನ್ನು ಒದಗಿಸಿಬಿಡುವನು.

(ಅನುಷ್ಟುಪ್‌ವೃತ್ತ)

ಅನುಬಂಧ - ಮೂರು

ಭಗವದ್ಗೀತಾರ್ಥಸಂಗ್ರಹ

(ಅಭಿನವಗುಪ್ತನ ಉಪಲಬ್ಧಕೃತಿಗಳಲ್ಲಿ ಇದೊಂದು. ಕಾಶ್ಮೀರಶೈವಸಂಪ್ರದಾಯದಲ್ಲಿ ಭಗವದ್ಗೀತೆಗೆ ಆಗಮಪ್ರಾಮಾಣ್ಯವಿದೆ. ದುರ್ವಾಸಮುನಿಯು ಕೃಷ್ಣನಿಗೆ ಶೈವಾಗಮಗಳನ್ನು ಬೋಧಿಸಿದನೆಂದು ಹರಿವಂಶ ಹೇಳುತ್ತದೆ. ಮಹಾಭಾರತದ ಅನುಶಾಸನಿಕಪರ್ವದಲ್ಲಿ ಉಪಮನ್ಯುಋಷಿಯು ಕೃಷ್ಣನಿಗೆ ಶೈವಾಗಮಗಳ ತಾತ್ಪರ್ಯವನ್ನು ತಿಳಿಯಪಡಿಸಿದ್ದು ವಿಸ್ತಾರವಾಗಿ ಬಂದಿದೆ.

ಕಾಶ್ಮೀರಶೈವಸಂಪ್ರದಾಯದ ಪ್ರವರ್ತಕಪುರುಷನೆನ್ನಬಹುದಾದ ವಸುಗುಪ್ತಮಹರ್ಷಿಯು ಶಿವಸೂತ್ರಗಳಿಗೆ ಕಾರಣನಾದವನು. ಇವನು ಭಗವದ್ಗೀತೆಗೆ ಬರೆದ ವಾಸವೀಟಿಕೆಯ ಕೆಲವು ಅಧ್ಯಾಯಗಳು ದೊರತಿವೆ. ಮುಂದೆ ರಾಜಾನಕ ಲಾಸಕನೆಂಬುವನೂ ಗೀತೆಗೆ ವ್ಯಾಖ್ಯಾನವನ್ನು ಬರೆದಿದ್ದಾನೆ. ರಾಜಾನಕರಾಮಕಂಠನ ಸರ್ವತೋಭದ್ರವೆಂಬ ವ್ಯಾಖ್ಯಾನವೂ ಇದೆ.

ಅಭಿನವಗುಪ್ತನ ವ್ಯಾಖ್ಯಾನವು ಗೀತೆಯ ಗೂಢಾರ್ಥವನ್ನು ತಿಳಿಸುವ ಉದ್ದೇಶದಿಂದ ಹೊರಟಿದೆ. ತನ್ನ ಗುರುವಾದ ಭಟ್ಟೇಂದುರಾಜನಲ್ಲೇ ಗೀತೆಯನ್ನು ಅಧ್ಯಯನ ಮಾಡಿದೆನೆಂದೂ, ತನ್ನ ಮಿತ್ರನಾದ ಲೋಟಕನೆಂಬುವನ ಕೋರಿಕೆಯನ್ನು ಮನ್ನಿಸಿ ಈ ವ್ಯಾಖ್ಯಾನವನ್ನು ರಚಿಸಿದುದಾಗಿಯೂ ಹೇಳಿಕೊಂಡಿದ್ದಾನೆ. ಇದು ತ್ರಿಕಸಿದ್ಧಾಂತಪರವಾದ ವ್ಯಾಖ್ಯಾನ. ಈ ಗೀತಾಪಾಠದಲ್ಲಿ 715 ಶ್ಲೋಕಗಳಿವೆ. ಎಲ್ಲ ಶ್ಲೋಕಗಳಿಗೂ ವ್ಯಾಖ್ಯಾನವಿಲ್ಲ; ಅಲ್ಲಲ್ಲಿ ರಹಸ್ಯಾರ್ಥಗಳನ್ನು ತೋರಿಸುವ ಒಕ್ಕಣೆಯಿದೆ. ಪ್ರತಿ ಅಧ್ಯಾಯಕ್ಕೂ ಸಂಗ್ರಹಶ್ಲೋಕವೊಂದು ಇರುವುದು ಸ್ವಾರಸ್ಯವಾಗಿದೆ.

ಈ ಸಂಗ್ರಹಶ್ಲೋಕಗಳನ್ನೇ ಇಲ್ಲಿ ಕೊಡಲಾಗಿದೆ.)

ಅಧ್ಯಾಯ ಒಂದು

ವಿದ್ಯಾವಿದ್ಯೋಭಯಾಘಾತಸಂಘಟ್ಟವಿವಶೀಕೃತಃ ।
ಯುಕ್ತ್ಯಾ ದ್ವಯಮಪಿ ತ್ಯಕ್ತ್ವಾ ನಿರ್ವಿವೇಕೋ ಭವೇನ್ಮುನಿಃ ॥ ೧ ॥

ನಮ್ಮಲ್ಲಿನ ವಿದ್ಯೆ, ಅವಿದ್ಯೆ, ಇವೆರಡೂ ಒಟ್ಟಿಗೆ ಬಂದು ನಮ್ಮ ಮೇಲೆ ಎರಗಿ

ನಮ್ಮನ್ನು ಮರಳುಮಾಡುತ್ತವೆ. ಬುದ್ಧಿವಂತನಾದವನು (ಮುನಿಯು) ಎರಡನ್ನೂ ಕೈಬಿಟ್ಟು ಮನಸ್ಸಿನಲ್ಲಿ ಯಾವ ವಿಕಲ್ಪವೂ ಒದಗದಂತೆ ಎಚ್ಚರ ವಹಿಸಬೇಕು.

ಅಧ್ಯಾಯ ಎರಡು

ಅಹೋ ನು ಚೇತಸಶ್ಚಿತ್ರಾ ಗತಿಸ್ತ್ಯಾಗೇನ ಯತ್ಕಿಲ ।
ಆರೋಹತ್ಯೇವ ವಿಷಯಾಂಥ್ರೇಯಂಸ್ತಾಂಸ್ತು ಪರಿತ್ಯಜೇತ್ ॥ ೨ ॥

ಮನಸಿನ ಪರಿ ಎಷ್ಟು ಸೋಜಿಗವಾದುದು! ಅದು ಒಂದು ಕಲ್ಪನೆಯನ್ನು ಬಿಟ್ಟಿತೆಂದರೆ ಇನ್ನೊಂದಕ್ಕೆ ಅಂಟಿಕೊಳ್ಳುತ್ತದೆ. ಒಂದಾದ ಮೇಲೊಂದು ವಿಷಯಗಳು ತೋರಿಕೊಳ್ಳುತ್ತಲೇ ಇರುತ್ತವೆ. ಅವುಗಳನ್ನೆಲ್ಲ ಬಿಟ್ಟುಬಿಡುವುದೇ ಲೇಸು!

ಅಧ್ಯಾಯ ಮೂರು

ಧನಾನಿ ದಾರಾನ್ ದೇಹಂ ಚ ಯೋಽನ್ಯತ್ವೇನಾಧಿಗಚ್ಛತಿ ।
ಕಿಂ ನಾಮ ತಸ್ಯ ಕುರ್ವಂತಿ ಕ್ರೋಧಾದ್ಯಾಶ್ಚಿತ್ತವಿಭ್ರಮಾಃ ॥ ೩ ॥

ಸಂಪತ್ತು, ಸ್ತ್ರೀಯರು, ಇವೆಲ್ಲ, ಕಡೆಗೆ ತನ್ನ ಶರೀರವೇ, ತನ್ನ ಸ್ವರೂಪದಿಂದ ಬೇರೆಯಾದುವು ಎಂದು ಮನದಟ್ಟುಮಾಡಿಕೊಂಡವನಿಗೆ ಸಿಟ್ಟು ಮೊದಲಾದ ಮನಸ್ಸಿನ ತೋರಿಕೆಗಳು ಏನು ತಾನೆ ಮಾಡಬಲ್ಲವು?

ಅಧ್ಯಾಯ ನಾಲ್ಕು

ವಿಧತ್ತೇ ಕರ್ಮ ಯತ್ ಕಿಂಚಿದಕ್ಷೇಚ್ಛಾಮಾತ್ರಪೂರ್ವಕಂ ।
ತೇನೈವ ಶುಭಭಾಜಃ ಸ್ಯುಸ್ತೃಪ್ತಾಃ ಕರಣದೇವತಾಃ ॥ ೪ ॥

ಯಾವುದೇ ಕೆಲಸವಾಗಲಿ ಇಂದ್ರಿಯಗಳ ಬಯಕೆಯಿಂದ ಮಾತ್ರ ಒದಗಿ ಬರುವುದು ಎಂಬುದನ್ನು ತಿಳಿದರೆ, ಆಯಾ ಇಂದ್ರಿಯದೇವತೆಗಳು ತೃಪ್ತರಾಗುವರು; ಒಳ್ಳೆಯ ಫಲವೇ ಬರುವುದು.

ಅಧ್ಯಾಯ ಐದು

ಸರ್ವಾಣ್ಯೇವಾತ್ರ ಭೂತಾನಿ ಸಮತ್ವೇನಾನುಪಶ್ಯತಃ ।
ಜಡವದ್ ವ್ಯವಹಾರೋಽಪಿ ಮೋಕ್ಷಾಯೈವಾವಕಲ್ಪತೇ ॥ ೫ ॥

ಇಲ್ಲಿ ಎಲ್ಲ ಪ್ರಾಣಿಗಳನ್ನೂ ಸಮತ್ವಬುದ್ಧಿಯಿಂದ ಕಂಡುಕೊಂಡವನು ತನ್ನ ವ್ಯವಹಾರದಲ್ಲಿ ಮಂದನಾಗಿದ್ದರೂ ಮೋಕ್ಷವನ್ನಂತೂ ಪಡೆಯುತ್ತಾನೆ.

ಅಧ್ಯಾಯ ಆರು

ಭಗವನ್ನಾಮಸಂಪ್ರಾಪ್ತಿಮಾತ್ರಾತ್ ಸರ್ವಮವಾಪ್ಯತೇ ।
ಫಲಿತಾಃ ಶಾಲಯಃ ಸಮ್ಯಗ್ ವೃಷ್ಟಿಮಾತ್ರೇऽವಲೋಕಿತೇ ॥ ೬ ॥

ಭಕ್ತಿ-ಶ್ರದ್ಧೆಗಳಿಂದ ಪರಮೇಶ್ವರನ ಸ್ಮರಣೆಗೆ ಅನುಕೂಲವಾಗುವ ನಾಮಸಂಕೀರ್ತನೆ ಮಾಡುವುದಷ್ಟರಿಂದಲೇ ಮನುಷ್ಯನು ತನಗೆ ಬೇಕಾದುದೆಲ್ಲವನ್ನೂ ಪಡೆದುಕೊಳ್ಳುತ್ತಾನೆ. ಮಳೆ ಕಾಣಿಸಿಕೊಂಡೊಡನೆ ಭತ್ತದ ಮೊಳಕೆಗಳೊಡೆಯುವುದಿಲ್ಲವೆ?

ಅಧ್ಯಾಯ ಏಳು

ಸ್ಫುಟಂ ಭಗವತೋ ಭಕ್ತಿರಾಹಿತಾ ಕಲ್ಪಮಂಜರೀ ।
ಸಾಧಕೇಚ್ಛಾಸಮುಚಿತಾಂ ಯೇನಾಶಾಂ ಪರಿಪೂರಯೇತ್ ॥ ೭ ॥

ಭಗವಂತನಲ್ಲಿ ಸ್ಫುಟವಾದ, ದೃಢವಾದ ಭಕ್ತಿಯನ್ನಿರಿಸಿಕೊಂಡರೆ ಅದು ಕಲ್ಪಲತೆಯಂತೆ; ಸಾಧಕನ ಸ್ಥಿತಿಗತಿಗಳಿಗನುಕೂಲವಾದ ಬಯಕೆಗಳನ್ನೆಲ್ಲ ಅದು ಪೂರೈಸಬಲ್ಲುದು.

ಅಧ್ಯಾಯ ಎಂಟು

ಸರ್ವತತ್ತ್ವಗತತ್ವೇನ ವಿಜ್ಞಾತೇ ಪರಮೇಶ್ವರೇ ।
ಅಂತರ್ಬಹಿರ್ನ ಸಾವಸ್ಥಾ ನ ಯಸ್ಯಾಂ ಭಾಸತೇ ವಿಭುಃ ॥ ೮ ॥

ಪರಮೇಶ್ವರನು ಎಲ್ಲೆಲ್ಲೂ, ಎಲ್ಲದರಲ್ಲಿಯೂ ಇದ್ದಾನೆ ಎಂಬುದನ್ನು ಅರಿತುಕೊಂಡ ಸಾಧಕನಿಗೆ ಒಳಗಾಗಲಿ ಹೊರಗಾಗಲಿ ಪರಮೇಶ್ವರನು ಕಾಣಿಸಿಕೊಳ್ಳದ ಎಡೆಯೇ ಇರದು, ಎಲ್ಲ ಸ್ಥಿತಿಗಳಲ್ಲೂ ಅವನ ಹೊಳಹು ಇದ್ದೇ ಇರುತ್ತದೆ.

ಅಧ್ಯಾಯ ಒಂಬತ್ತು

ಅದ್ವೈತೇ ಬ್ರಹ್ಮಣಿ ಪರಾ ಸರ್ವಾನುಗ್ರಹಶಾಲಿನೀ ।
ಶಕ್ತಿರ್ವಿಜೃಂಭತೇ ತೇನ ಯತನೀಯಂ ತದಾಪ್ತಯೇ ॥೯ ॥

ಎರಡನೆಯದಾದ ಯಾವುದೇ ತತ್ತ್ವವಿರದ, ಅದ್ವಯಬ್ರಹ್ಮನಲ್ಲಿ ಎಲ್ಲವನ್ನೂ ಎಲ್ಲರನ್ನೂ ಅನುಗ್ರಹಿಸುವ ಶಕ್ತಿಯು ತಾನೇ ತಾನಾಗಿ ಮೆರೆಯುತ್ತಿದೆ. ಅದನ್ನು ಪಡೆದುಕೊಳ್ಳಲು ಎಲ್ಲರೂ ಪ್ರಯತ್ನಿಸಬೇಕು.

ಅಧ್ಯಾಯ ಹತ್ತು

ಇಚ್ಛಾಯಾಮಿಂದ್ರಿಯೇ ವಾಪಿ ಯದೇವಾಯಾತಿ ಗೋಚರಂ ।
ಹಠಾದ್ವಿಲಾಪಯಂಸ್ತತ್ ತತ್ ಪ್ರಶಾಂತಂ ಬ್ರಹ್ಮ ಭಾವಯೇತ್ ॥ ೧೦ ॥

ನಮ್ಮ ಮನಸ್ಸಿನ ಅಥವಾ ಇಂದ್ರಿಯಗಳ ಬಯಕೆಗಳಿಗೆ ಯಾವುದೆಲ್ಲ ವಿಷಯವಾಗಿ ತೋರಿಕೊಳ್ಳುವುದೋ ಅದನ್ನೆಲ್ಲ ತನ್ನಲ್ಲೇ (ಎಂದರೆ ಬ್ರಹ್ಮದಲ್ಲೇ) ಬಲವಂತವಾಗಿ ಲಯಗೊಳಿಸಬೇಕು; ಹಾಗೆ ವಿಕಲ್ಪಗಳೆಲ್ಲ ತೊಲಗಿಹೋದಮೇಲೆ ಪ್ರಶಾಂತಸ್ಥಿತಿಯಲ್ಲಿರುವ ಬ್ರಹ್ಮವನ್ನು ಧ್ಯಾನದಲ್ಲಿ ಮೂಡಿಸಿಕೊಳ್ಳಬೇಕು.

ಅಧ್ಯಾಯ ಹನ್ನೊಂದು

ಶುದ್ಧಾಶುದ್ಧವಿಮಿಶ್ರೋತ್ಥಸಂವಿದೈಕ್ಯವಿಮರ್ಶನಾತ್ ।
ಭೂರ್ಭುವಸ್ಸ್ವಸ್ತ್ರಯಂ ಪಶ್ಯನ್ ಸಮತ್ವೇನ ಸಮೋ ಮುನಿಃ ॥ ೧೧ ॥

ಶುದ್ಧ, ಅಶುದ್ಧ, ಮಿಶ್ರ ಈ ಮೂರು ಸ್ಥಿತಿಗಳಲ್ಲೂ ತೋರಿಕೊಳ್ಳುವ ಅರಿವು ಒಂದೇ ಎಂಬುದನ್ನು ಮನವರಿತು ಕಂಡುಕೊಂಡಾಗ ಎಚ್ಚರ, ಕನಸು, ತನಿನಿದ್ರೆ, ಇವು ಮೂರು ಅವಸ್ಥೆಗಳನ್ನು (ಅಥವಾ ಭೂಮಿ, ಅಂತರಿಕ್ಷ, ಸ್ವರ್ಗ ಇವು ಮೂರು ಲೋಕಗಳನ್ನು) ಸಮನಾಗಿ ಕಂಡುಕೊಂಡು ಮುನಿಯು ತಾನೂ ವಿಕಾರರಹಿತನಾಗಿ ಸಾಮ್ಯಸ್ಥಿತಿಯಲ್ಲೆ ಇರುವನು.

ಅಧ್ಯಾಯ ಹನ್ನೆರಡು

ಪರಮಾನಂದವೈವಶ್ಯಸಂಜಾತಾವೇಶಸಂಪದಃ ।
ಸ್ವಯಂ ಸರ್ವಾಸ್ವವಸ್ಥಾಸು ಬ್ರಹ್ಮಸತ್ತಾ ಹ್ಯಯತ್ನತಃ ॥ ೧೨ ॥

ತನ್ನಲ್ಲಿಯೇ ಅಡಗಿರುವ ಅರಿವಿನ ಆನಂದದಲ್ಲಿ ಮುಳುಗಿರುವುದರಿಂದ ಉಂಟಾದ ಆವೇಶವೆಂಬ ಸಂಪತ್ತನ್ನು ಪಡೆದುಕೊಂಡವನು ಎಲ್ಲ ಸ್ಥಿತಿಗತಿಗಳಲ್ಲೂ ತಾನೇ ಬ್ರಹ್ಮನೆಂಬ ಇರವಿನ ಅನುಭವವನ್ನು ಏನೊಂದು ಶ್ರಮವೂ ಇಲ್ಲದೆ ಹೊಂದುವನು.

ಅಧ್ಯಾಯ ಹದಿಮೂರು

ಪುಮಾನ್ ಪ್ರಕೃತಿರಿತ್ಯೇಷ ಭೇದಃ ಸಂಮೂಢಚೇತಸಾಂ ।
ಪರಿಪೂರ್ಣಾಸ್ತು ಮನ್ಯಂತೇ ನಿರ್ಮಲಾತ್ಮಮಯಂ ಜಗತ್ ॥ ೧೩ ॥

ಪುರುಷನಾದ ತಾನು, ತನಗೆ ವಿಷಯವಾದ ಪ್ರಕೃತಿ ಬೇರೆ ಬೇರೆಯೆಂಬ ಎಣಿಕೆ ತಿಳಿವಳಿಕೆಯಿರದ ಸಾಮಾನ್ಯರಲ್ಲಿ ಅಷ್ಟೆ. ಪೂರ್ಣಜ್ಞಾನಿಗಳಾದರೋ ಹೀಗೆ ಭೇದವೆಣಿಸದೆ ಜಗತ್ತೆಲ್ಲವೂ ಶುದ್ಧವಾದ ಆತ್ಮದಿಂದಲೇ ಬೆಳಗುತ್ತಿದೆ ಎಂಬುದನ್ನು ಕಂಡುಕೊಳ್ಳುವರು.

ಅಧ್ಯಾಯ ಹದಿನಾಲ್ಕು

ಲಸದ್ ಭಕ್ತಿರಸಾವೇಶ ಹೀನಾಹಂಕಾರವಿಭ್ರಮಃ ।
ಸ್ಥಿತೇಽಪಿ ಗುಣಸಂಮರ್ದೇ ಗುಣಾತೀತಃ ಸಮೋ ಯತಿಃ ॥ ೧೪ ॥

ಭಗವಂತನಲ್ಲಿರಿಸಿದ ಭಕ್ತಿಯು ಬೆಳಗುತ್ತಿರಲು ನಾನು ತಾನೆಂಬ ವಿಕಲ್ಪವು ಮರೆಯಾಗಿಬಿಡುತ್ತದೆ. ಆಗ ಸತ್ತ್ವ, ರಜಸ್ಸು, ತಮಸ್ಸೆಂಬ ಮೂರು ಗುಣಗಳ ಸಂಭ್ರಮದ ನಡುವೆಯೇ ಇರುತ್ತಿದ್ದರೂ, ಭಕ್ತನು ಗುಣಗಳ ಹಿಡಿತವನ್ನು ದಾಟಿರುತ್ತಾನೆ; ಅವನು ವಿಕಾರವನ್ನು ಹೊಂದದೆ ಸಮನಾಗಿಯೇ ಇರುವನು.

ಅಧ್ಯಾಯ ಹದಿನೈದು

ಹೃತ್ವಾ ದ್ವೈತಮಹಾಮೋಹಂ ಕೃತ್ವಾ ಬ್ರಹ್ಮಮಯೀಂ ಚಿತಿಂ ।
ಲೌಕಿಕೇ ವ್ಯವಹಾರೇಽಪಿ ಮುನಿರ್ನಿತ್ಯಂ ಸಮಾವಿಶೇತ್ ॥ ೧೫ ॥

ಪರಮೇಶ್ವರನು ಬೇರೆ, ವಿಶ್ವವು ಬೇರೆ ಎಂಬ ಭ್ರಾಂತಿಯನ್ನು ಪರಿಹರಿಸಿಕೊಂಡು, ಎಲ್ಲವೂ ಬ್ರಹ್ಮವೇ ಎಂಬ ಬುದ್ಧಿಯನ್ನು ಬೆಳೆಸಿಕೊಂಡ ಮುನಿಯು ಲೋಕವ್ಯವಹಾರದಲ್ಲೇ ತೊಡಗಿದ್ದರೂ ತನ್ನ ಆತ್ಮದಲ್ಲೇ ನೆಮ್ಮದಿಯಿಂದ ನೆಲೆಸಿರುವನು.

ಅಧ್ಯಾಯ ಹದಿನಾರು

ಅಬೋಧೇ ಸ್ವಾತ್ಮಬುದ್ಧ್ಯೈವ ಕಾರ್ಯಂ ನೈವ ವಿಚಾರಯೇತ್ ।
ಕಿಂತು ಶಾಸ್ತ್ರೋಕ್ತವಿಧಿನಾ ಶಾಸ್ತ್ರಂ ಬೋಧವಿವರ್ಧನಂ ಹಿ ತತ್ ॥ ೧೬ ॥

ಏನನ್ನು ಹೇಗೆ ಯಾವಾಗ ಮಾಡಬೇಕೆಂಬ ವಿಚಾರವಾಗಿ ನಮಗೆ ತಿಳಿಯದಿದ್ದಾಗ, ನಮ್ಮ ಸಣ್ಣಬುದ್ಧಿಗೆ ತೋರಿದ್ದೇ ಸರಿಯೆಂಬ ನಿರ್ಣಯಕ್ಕೆ ಬರಬಾರದು. ಆದರೆ ಈ ವಿಚಾರವಾಗಿ ಶಾಸ್ತ್ರ ಏನು ಹೇಳುತ್ತದೆ ಎಂದು ತಿಳಿದುಕೊಳ್ಳಬೇಕು, ಅದರಂತೆ ಮಾಡಬೇಕು. ಶಾಸ್ತ್ರ ಇರುವುದೇ ನಮ್ಮ ತಿಳಿವಳಿಕೆಯನ್ನು ಹೆಚ್ಚಿಸಲೆಂದು.

ಅಧ್ಯಾಯ ಹದಿನೇಳು

ಸ ಏವ ಕಾರಕಾವೇಶಃ ಕ್ರಿಯಾ ಸೈವಾವಿಶೇಷಿಣೀ ।
ತಥಾಪಿ ವಿಜ್ಞಾನವತಾಂ ಮೋಕ್ಷಾರ್ಥೇ ಪರ್ಯವಸ್ಯತಿ ॥ ೧೭ ॥

ನಮ್ಮಲ್ಲಿ ಲೌಕಿಕ ಅನುಭವಗಳನ್ನು ಒದಗಿಸುವ ಇಂದ್ರಿಯಾದಿಗಳನ್ನು ಪ್ರೇರೇಪಿಸುವವನು ಭಗವಂತನೇ. ಅವನ ಶಕ್ತಿಯನ್ನು ಹೀಗೆ, ಹಾಗೆ ಎಂದು ನಿರ್ದೇಶಿಸುವುದು ಸಾಧ್ಯವಿಲ್ಲ. ಹಾಗಿದ್ದರೂ ತಿಳಿವಳಿಕೆ ಇದ್ದವರಿಗೆ ಎಲ್ಲ ಲೌಕಿಕ ಅನುಭವಗಳೂ ಮೋಕ್ಷದಲ್ಲೇ ಕೊನೆಗಾಣುತ್ತವೆ.

ಅಧ್ಯಾಯ ಹದಿನೆಂಟು

ಭಂಕ್ತ್ವಾ ಜ್ಞಾನವಿಮೋಹಮಂಥರಮಯೀಂ ಸತ್ತ್ವಾದಿ ಭಿನ್ನಾಂ ಧಿಯಂ
ಪ್ರಾಪ್ಯ ಸ್ವಾತ್ಮವಿಭೂತಸುಂದರತಯಾ ವಿಷ್ಣುಂ ವಿಕಲ್ಪಾತಿಗಂ ।
ಯತ್ ಕಿಂಚಿತ್ ಸ್ವರಸೋದ್ಯದಿಂದ್ರಿಯನಿಜವ್ಯಾಪಾರಮಾತ್ರಸ್ಥಿತೇ-
ರ್ಹೇಲಾತಃ ಕುರುತೇ ತದಸ್ಯ ಸಕಲಂ ಸಂಪದ್ಯತೇ ಶಂಕರಂ ॥ ೧೮ ॥

ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರು ವಿಧವಾದ ಗುಣಗಳಿಂದ ಮರೆಯುವ ಬುದ್ಧಿಯನ್ನು ಅಡಗಿಸಿ, ತನ್ನ ಆತ್ಮವೇ ವಿಕಲ್ಪಗಳಿಂದ ದೂರನಾಗಿರುವ ವಿಷ್ಣು (ವ್ಯಾಪಕನಾದ ಬ್ರಹ್ಮ) ಎಂಬುದನ್ನು ಅನುಭವಿಸಿದವನು ಯಾವ ಕೆಲಸದಲ್ಲಾದರೂ ಒಂದಿಷ್ಟೂ ಶ್ರಮವಿಲ್ಲದೆ ತೊಡಗಿರುತ್ತಾನೆ. ಈ ಸ್ಥಿತಿಯಲ್ಲಿರುವಾಗ ಇಂದ್ರಿಯಾದಿಗಳು ತಂತಮ್ಮ ವ್ಯಾಪಾರಗಳಲ್ಲಿರುತ್ತವೆ ಅಷ್ಟೆ; ಇವನಿಗೇನು ಅದರ ತೊಡಕಿರದು. ಇವನಿಂದ ಅವೇನೂ ನಡೆಯುವುದಿಲ್ಲ. ಹೀಗಿರುವಾಗ ಆಗುವುದೆಲ್ಲವೂ ಇವನ ಒಳಿತಿಗಾಗಿಯೇ.

ಅನುಬಂಧ - ನಾಲ್ಕು

ಅಭಿನವಗುಪ್ತನ ದಾರ್ಶನಿಕ ನೆಲೆ

ಶೈವಧರ್ಮವು ಆಗಮಪ್ರೋಕ್ತವಾಗಿ ಕಾಶ್ಮೀರವನ್ನು ಪ್ರವೇಶಿಸಿದ್ದು ಯಾವಾಗ ಎಂಬುದು ತಿಳಿದುಬರುವುದಿಲ್ಲ. ಆದರೆ ಮಹರ್ಷಿಯೆನಿಸಿದ ವಸುಗುಪ್ತನು ಸಿದ್ಧರ ಆದೇಶದ ಮೇಲೆ (ಅಥವಾ ಸ್ವಪ್ನದಲ್ಲಿ ಶಿವನಿಂದ ದೊರೆತ ಸೂಚನೆಯಂತೆ) ಶಿವಸೂತ್ರಗಳನ್ನು ಪ್ರಕಟಪಡಿಸಿದ್ದು ಕಾಶ್ಮೀರಶೈವಸಂಪ್ರದಾಯದ ಉಗಮವೆನಿಸುತ್ತದೆ. ವಸುಗುಪ್ತನು ಶಿವಸೂತ್ರಗಳ ರಹಸ್ಯವನ್ನು ತನ್ನ ಶಿಷ್ಯನಾಗಿದ್ದ ಭಟ್ಟಕಲ್ಲಟನಿಗೆ ಅರುಹಿದನಂತೆ. ಸಿದ್ಧಸಂತಾನರೂಪವಾದ ಈ ದರ್ಶನವನ್ನು ಇನ್ನೊಬ್ಬ ಶಿಷ್ಯ ಸೋಮಾನಂದನಾಥನೂ ಗ್ರಹಿಸಿ ಪ್ರಚುರಪಡಿಸಿದನು. ಇವನ 'ಶಿವದೃಷ್ಟಿ' ಪ್ರಸಿದ್ಧವಾಗಿದೆ. ಸೋಮಾನಂದನ ಮಗ ಮತ್ತು ಶಿಷ್ಯ ಉತ್ಪಲದೇವ; ಅವನ ಶಿಷ್ಯ ಲಕ್ಷ್ಮಣಗುಪ್ತನ ಶಿಷ್ಯ ಅಭಿನವಗುಪ್ತ. ಕಲ್ಲಟನ ಶಿಷ್ಯ ಮುಕುಲಭಟ್ಟ, ಅವನ ಶಿಷ್ಯ ಭಟ್ಟೇಂದುರಾಜ; ಅವನು ಅಭಿನವನ ಇನ್ನೊಬ್ಬ ಗುರು. ಹೀಗೆ ಎರಡೂ ಪರಂಪರೆಗಳು ಸಮ್ಮಿಳಿತವಾಗಿ ಅಭಿನವಗುಪ್ತನಿಂದ ಊರ್ಜಿತವಾದುವು.

ಕಾಶ್ಮೀರಶೈವದರ್ಶನದ ಉಗಮಕ್ಕೆ ಹತ್ತಿರದವನು ಅಭಿನವ. ಈ ದರ್ಶನವನ್ನು ಸ್ಪಷ್ಟಪಡಿಸುವುದರಲ್ಲಿ, ನಿರ್ದಿಷ್ಟಗೊಳಿಸುವಲ್ಲಿ ಅವನ ಪಾತ್ರ ಹಿರಿದಾದುದು. ಇದನ್ನು ತ್ರಿಕಶಾಸ್ತ್ರವೆಂದೂ ಪ್ರತ್ಯಭಿಜ್ಞಾದರ್ಶನವೆಂದೂ ಕರೆಯುತ್ತಾರೆ. ದರ್ಶನದ ಮುಖ್ಯಪ್ರಮೇಯಗಳಾದ ಪತಿ (ಶಿವ), ಪಶು (ಜೀವ), ಪಾಶ (ಮಲಗಳು) ಇವು ಮೂರು; ಜೀವ, ಶಕ್ತಿ, ಶಿವ ಎಂಬ ಮೂರು ತತ್ತ್ವಗಳು (ನರಶಕ್ತಿಶಿವಾತ್ಮಕಂ ತ್ರಿಕಂ); ಪರಾ, ಅಪರಾ, ಪರಾಪರ ಎಂಬ ನೆಲೆಗಳು ಮೂರು; ಶಾಂಭವ, ಶಾಕ್ತ, ಆಣವ ಎಂಬ ಉಪಾಯಗಳು ಮೂರು; ಪರಾ, ಪಶ್ಯಂತೀ, ಮಧ್ಯಮಾ ಎಂಬ ಅಭಿವ್ಯಕ್ತಿ ದೆಶೆಗಳು ಮೂರು; ಇಚ್ಛಾ, ಜ್ಞಾನ, ಕ್ರಿಯೆಗಳೆಂಬ ಶಕ್ತಿಗಳು ಮೂರು; ಭೇದ, ಅಭೇದ, ಭೇದಾಭೇದ ಎಂಬ ಅನುಭವಗಳು ಮೂರು—ಹೀಗೆ ಇದು ತ್ರಿಕ-ಶಾಸ್ತ್ರ. ತನ್ನ ದಿಟವಾದ ಸ್ವರೂಪ ಶಿವನೇ (ಎಂದರೆ ಬ್ರಹ್ಮವೇ); ವಿಶ್ವವೆಲ್ಲವೂ ಶಿವನ ಶಕ್ತಿಯೇ, ವಿಶ್ವಮಯನಾಗಿ ವಿಶ್ವೋತ್ತೀರ್ಣನಾಗಿರುವ ಶಿವ ತನ್ನಿಂದ ಬೇರೆಯಾದವನಲ್ಲ, ಶಿವನನ್ನು ಬಿಟ್ಟು ಬೇರೇನೂ ಇರದು ಎಂದು ಶಿವಾಭಿನ್ನದೃಷ್ಟಿಯಿಂದ ತನ್ನನ್ನು ತಾನು ಗುರುತಿಸಿಕೊಳ್ಳುವುದು ಪ್ರತ್ಯಭಿಜ್ಞೆ.

ಶಿವಾಗಮಗಳ ಮೇಲೆ ಸಿದ್ಧವಾದ ಈ ದರ್ಶನದ ಉಪಜೀವ್ಯಗ್ರಂಥವೆಂದರೆ ವಿಜಯಮಾಲಿನೀತಂತ್ರ. ಇದರ ಆಧಾರದ ಮೇಲೇ ಸೋಮಾನಂದನಾಥನು 'ಶಿವದೃಷ್ಟಿ'ಯನ್ನು ರಚಿಸಿದ್ದು. 'ಸ್ವಚ್ಛಂದತಂತ್ರ'ವೆನ್ನುವುದು ಈ ದರ್ಶನಕ್ಕೆ ಇನ್ನೊಂದು ಆಕರ. ಅನುತ್ತರವೆಂಬ

ಶಿವಾನುಭವವನ್ನು ಸಿದ್ಧಾಂತರೂಪವಾಗಿ ಸಾಧನಾವಿಶಿಷ್ಟವಾಗಿ ವಿಜಯಮಾಲಿನೀತಂತ್ರದ ಧೋರಣೆಯನ್ನು ಹಿಡಿದು ಅಭಿನವಗುಪ್ತನು ತನ್ನ 'ತಂತ್ರಾಲೋಕ'ವೆಂಬ ಮೇರುಕೃತಿಯನ್ನು ಸಿದ್ಧಪಡಿಸಿದ್ದಾನೆ. ಕಾಶ್ಮೀರಶೈವದರ್ಶನದ ಗೊತ್ತುಗುರಿಗಳನ್ನು ಇದು ಚೆನ್ನಾಗಿ ಹಿಡಿದೆತ್ತಿ ತೋರಿಸುತ್ತದೆ.

ಶಿವನ ಶಕ್ತಿಗಳು ಐದು—ಚಿತ್ (ಪ್ರಕಾಶ), ಆನಂದ (ಸ್ವಾತಂತ್ರ್ಯ), ಇಚ್ಛಾ (ಚಮತ್ಕಾರ), ಜ್ಞಾನ (ವಿಮರ್ಶ), ಕ್ರಿಯಾ (ಸರ್ವಾಕಾರದಿಂದ ಸ್ಫುರಣ). ಶಿವನು ಪಂಚಕೃತ್ಯ ಪರಾಯಣ; ಅವನ ಕರ್ಮಗಳು ಐದು, ಅವಕ್ಕಾಗಿ ಅವನು ಧರಿಸುವ ರೂಪಗಳೂ ಐದು—ಸೃಷ್ಟಿ (ಸರ್ವಕರ್ತೃತ್ವಸಂಪನ್ನ), ಸ್ಥಿತಿ (ಸರ್ವಜ್ಞ), ಸಂಹಾರ (ಪರಿಪೂರ್ಣ), ತಿರೋಧಾನ (ನಿತ್ಯ), ಅನುಗ್ರಹ (ಸರ್ವವ್ಯಾಪಕ). ವಿಶ್ವನಾದ ಶಿವನು ಸ್ವೇಚ್ಛೆಯಿಂದ ಸಂಕುಚಿತನಾಗಿ ಅಣುವಾಗುವನು. ಇದೇ ಜೀವಭಾವ. ವಹ, ಕಂಚುಕ, ಮಲ, ಅಜ್ಞಾನ, ಆವರಣ ಎಂಬ ಪಂಚವಿಧಪಾಶಗಳಿಂದ ಈ ಭಾವ ಸಿದ್ಧವಾಗುತ್ತದೆ. ಪಾಶಬದ್ಧನಾದವನು ಪಶು (ಜೀವ, ಅಣು). ಆವರಣದ ಬಗೆ ಹೀಗೆ. ಕಲಾ ಎಂಬಂಶದಿಂದ ಸರ್ವಕರ್ತನಾದ ಶಿವನು ಅಲ್ಪಕರ್ತನೆನಿಸಿಕೊಳ್ಳುತ್ತಾನೆ. ವಿದ್ಯೆಯಿಂದಾಗಿ ಸರ್ವಜ್ಞನಾದವನು ಅಲ್ಪಜ್ಞನಾಗುತ್ತಾನೆ. ನಿಯತಿಯಿಂದಾಗಿ ಸರ್ವವ್ಯಾಪಕನಾದವನು ಶರೀರವನ್ನು ಪಡೆದು ವ್ಯಕ್ತೀಭಾವವನ್ನು ತಳೆಯುತ್ತಾನೆ. ರಾಗದಿಂದಾಗಿ ಪೂರ್ಣನಾದವನು ಅಪೂರ್ಣನಂತೆ ತೋರಿಕೊಳ್ಳುತ್ತಾನೆ. ಕಾಲವೆಂಬ ಅಂಶದಿಂದಾಗಿ ನಿತ್ಯ-ಅಕಾಲ ಶಿವನು ಅನಿತ್ಯಪುರುಷನಾಗುತ್ತಾನೆ.

ಈ ಆವರಣ ಮರೆಯಾದರೆ ಪಶುವೆಂದು ತೋರಿಕೊಳ್ಳುತ್ತಿದ್ದವನು ಶಿವನಾಗಿಬಿಡುತ್ತಾನೆ (ಪಶುಪತಿ); ವ್ಯಕ್ತಿಯಾಗಿದ್ದವನು ವಿಶ್ವನಾಗುತ್ತಾನೆ; ವಾಮನಭಾವ ಇದ್ದದ್ದು ಹೋಗಿ ವಿರಾಟ್‌ಸ್ವರೂಪದ ಅನುಭವವಾಗುತ್ತದೆ. ಪಾಶಬದ್ಧನಾಗಿದ್ದವನು ಪಾಶಮುಕ್ತನಾಗುತ್ತಾನೆ. ಮೋಕ್ಷವೆಂದರೆ ತನ್ನ ಸ್ವರೂಪವನ್ನು ತಾನು ಅರಿತುಕೊಂಡು ಅನುಭವಿಸುವುದಷ್ಟೆ, ಬೇರೇನೂ ಅಲ್ಲ. ರಾಗದ್ವೇಷಾದಿಗಳಿಂದ ಕಲುಷಿತವಾದ ಚಿತ್ತವೇ ಸಂಸಾರ; ಆವರಣಗಳನ್ನು ಕಳಚಿಕೊಂಡು ಸಂಸಾರದಿಂದ ಬಿಡುಗಡೆಯನ್ನು ಹೊಂದುವನು. ಅದು ದಿಟವಾಗಿ ಶಿವಸಾಕ್ಷಾತ್ಕಾರವೇ. ಇದನ್ನೆ ಪ್ರತ್ಯಭಿಜ್ಞೆಯೆನ್ನುತ್ತಾರೆ. ತನ್ನ ಸ್ವರೂಪವನ್ನು ತಾನು ಗುರುತಿಸಿಕೊಳ್ಳುವುದು. ಇದೇ ಜ್ಞಾನವೂ ಹೌದು.

'ಇಹ (ಇಲ್ಲಿ, ಎಂದರೆ ತ್ರಿಕಶಾಸ್ತ್ರದಲ್ಲಿ) ಜ್ಞಾನಂ (ಪೂರ್ಣಪ್ರಥಾತ್ಮಕವಾದ ಏಕಾತ್ಮ ಪ್ರಾಪ್ತಿ) ಮೋಕ್ಷಕಾರಣಂ' ಎನ್ನುವಾಗ ಜ್ಞಾನ (ಅಥವಾ ತಿಳಿವಳಿಕೆ) ವಿಶ್ವಮಯನಾಗಿರುವ ಶಿವನೇ ತನ್ನ ಆತ್ಮ ಎಂಬ ಅರಿವು ಅಷ್ಟೆ ('ವಿಶ್ವಭಾವೈಕಭಾವಾತ್ಮಸ್ವರೂಪಪ್ರಥನಮಾತ್ರಂ'). ಶಿವನೇ ಬೇರೆ, ವಿಶ್ವವೇ ಬೇರೆ, ತನ್ನ ಆತ್ಮನೇ ಬೇರೆ ಎಂಬ ಭ್ರಾಂತಿಯನ್ನು ದ್ವೈತಪ್ರಥೆ ಎನ್ನುತ್ತಾರೆ; ಇದೇ ಅಜ್ಞಾನ, ಮಿಥ್ಯಾಜ್ಞಾನ. ಶಿವಾನುಭೂತಿಯ ಜ್ಞಾನದಿಂದ ಆತ್ಮಸಾಕ್ಷಾತ್ಕಾರದಿಂದ ಈ ಅಜ್ಞಾನ ತೊಲಗಿಹೋಗುತ್ತದೆ. ಅದರ ಬಂಧದಿಂದ ಬಿಡುಗಡೆ. ಶುದ್ಧಶಿವರೂಪವಾದ ಆತ್ಮದರ್ಶನ ('ಶಿವೈಕಾತ್ಮ್ಯಪ್ರಾಪ್ತಿರೂಪದಶಾ').

ಎಂದ ಮಾತ್ರಕ್ಕೆ ಜಗತ್ತು ಮಿಥ್ಯೆ ಎಂದೇನಲ್ಲ. ಶಿವಶಕ್ತಿಸಾಮರಸ್ಯದಿಂದ ವಿಶ್ವದ ಉಗಮವಾಗುತ್ತದೆ; ಅದು ಭಾವಸತ್ತಾರೂಪವಾದುದು. ಈ ಸಾಮರಸ್ಯವನ್ನು ವಿಮರ್ಶೆಯೆನ್ನುತ್ತಾರೆ. ಶಿವನು ದೀಪ (ಪ್ರಕಾಶ), ಶಕ್ತಿಯು ಬೆಳಕು (ವಿಮರ್ಶ). ಶಕ್ತಿಯೇ ಬೇರೆ, ಶಿವನೇ ಬೇರೆ ಎನ್ನುವುದು ತಪ್ಪುಕಲ್ಪನೆ (ದ್ವೈತಪ್ರಥೆ, ಮಿಥ್ಯಾದೃಷ್ಟಿ). ಶಿವನು ಶಕ್ತಿಯುಳ್ಳವನು (ಶಕ್ತಿಮಾನ್); ಶಕ್ತಿಯಿಂದ ಶಿವನು ಬೇರೆಯಲ್ಲ, ಶಿವನಿಂದ ಶಕ್ತಿಯು ಬೇರೆಯಲ್ಲ. ಶಕ್ತಿಗಳು ಅಸಂಖ್ಯ. ಮುಖ್ಯವಾಗಿ ಶಕ್ತಿಯೆಂದರೆ ಹಿಂದೆ ಹೇಳಿದಂತೆ ಚಿತ್ (ಪ್ರಕಾಶಶಕ್ತಿ), ಆನಂದ (ಸ್ವಾತಂತ್ರ್ಯಶಕ್ತಿ), ಇಚ್ಛಾ (ಚಮತ್ಕಾರಶಕ್ತಿ), ಜ್ಞಾನ (ವಿಮರ್ಶಶಕ್ತಿ), ಕ್ರಿಯಾ (ಸರ್ವಾಕಾರಸ್ಫುರಣಶಕ್ತಿ) ಎಂದು ಐದು ಬಗೆಗಳು. ಶಿವನು ತನ್ನ ದಿಟವಾದ ಸ್ವರೂಪವನ್ನು ಮರೆಯಿಸಿ, ತನ್ನಿಂದ ಬೇರೆಯಾಗಿ ಜಗತ್ತು ಇರುವಂತೆ, ಜೀವದಂತೆ ತೋರಿಕೊಳ್ಳುವುದು ಶಿವನ ತಿರೋಧಾನಕ್ರಿಯೆಯೇ; ಮೊದಲೇ ಹೇಳಿದ ಪಂಚಕೃತ್ಯಗಳಲ್ಲಿ ಒಂದು. ಅವನ ಅನುಗ್ರಹವನ್ನು ಪಡೆದುಕೊಂಡರೆ ಈ ತಿರೋಧಾನ ನಿವೃತ್ತಿಯಾಗುತ್ತದೆ.

ಇದಕ್ಕೆ ಉಪಾಯವೂ ಶಿವನೇ; ಉಪೇಯನೂ ಅವನೇ. ತತ್ತ್ವಸಾಕ್ಷಾತ್ಕಾರಕ್ಕೆ ಮಲಗಳ ಅಪಾಕರಣವಾಗಬೇಕು. ಇದಕ್ಕೆ ಆಣವ (ಕ್ರಿಯೆ ಪ್ರಧಾನವಾಗಿರುವುದು), ಶಾಕ್ತ (ಜ್ಞಾನ ಪ್ರಧಾನವಾಗಿರುವುದು), ಮತ್ತು ಶಾಂಭವ (ಇಚ್ಛೆ ಪ್ರಧಾನವಾಗಿರುವುದು) ಎಂಬ ಮೂರು ಉಪಾಯಗಳಿವೆ. ಕರ್ಮಕಾಂಡ, ಪೂಜೆ, ಜಪ, ಧ್ಯಾನ ಎಲ್ಲವೂ ಮೊದಲನೆಯದರಲ್ಲೆ ಸೇರಿಕೊಂಡುಬರುತ್ತವೆ. ಅದು ಸಾಮಾನ್ಯಜೀವನಿಗೆ ಅಗತ್ಯವೆನಿಸುವ ದಾರಿ; ಆದ್ದರಿಂದಲೇ ಅದು ಆಣವ (ಅಣುವೆಂದರೆ ಜೀವ, ಪಾಶಬದ್ಧನಾದವನು, ತಾನು ಬೇರೆ ಶಿವ ಬೇರೆ ವಿಶ್ವ ಬೇರೆ ಎಂಬ ಭೇದದ ಅರಿವುಳ್ಳವನು. ಇಂಥವನಿಗೆ ಸಂಬಂಧಿಸಿದ್ದು). ಎರಡನೆಯ ಉಪಾಯದಲ್ಲಿ ತಾನು ದಿಟವಾಗಿ ಶಿವನೇ, ಶಿವನು ವಿಶ್ವಮಯನೂ ಹೌದು ಎಂಬ ಅರಿವು ಮೂಡುತ್ತದೆ. ಇಲ್ಲಿ ಭೇದಾಭೇದವೆಂಬ ಅರಿವು; ಶಿವ, ಆತ್ಮ ಇವರಿಬ್ಬರ ನಡುವೆ ಭೇದವೂ ಇದೆ, ಅಭೇದವೂ ಇದೆ. ಮೂರನೆಯದಾದ ಶಾಂಭವೋಪಾಯದಲ್ಲಿ ಶಿವನೊಬ್ಬನೇ ಇರುವವನು, ಅವನಿಂದ ಬೇರೆಯಾಗಿ ಮತ್ತೇನೂ ಇರಲಾರದು ಎಂಬ ಅನುಭವ.

ಹೀಗೆ ಉಪಾಯಗಳನ್ನು ಈ ದರ್ಶನವು ಸೂಚಿಸಿದ್ದರೂ (ಸೋಪಾಯ) ವಾಸ್ತವವಾಗಿ ಶಿವನನ್ನು ಪಡೆದುಕೊಳ್ಳಲು, ಅನುಭವಿಸಲು ಯಾವ ಉಪಾಯವೂ ಇರದು. ಇದನ್ನು 'ಅನುಪಾಯ', 'ನಿರುಪಾಯ' 'ವಿಜ್ಞಾನ', 'ಶಕ್ತಿಪಾತ' ಎಂದೆಲ್ಲ ನಿರ್ದೇಶಿಸುತ್ತಾರೆ. ಶಕ್ತಿಪಾತದ ಕಲ್ಪನೆ ಸ್ವಾರಸ್ಯವಾದುದು. ಶಕ್ತಿಪಾತವಾಗುವುದು ಅಣುವಿಗೆ (ಜೀವನಿಗೆ). ಶಕ್ತಿಯನ್ನು ಪಾತನಮಾಡುವವನು ಶಿವ. ಇಲ್ಲಿ ಸ್ವಲ್ಪ ವಿವರಣೆಯ ಅಗತ್ಯವಿದೆ. ಅಣುವು ಚಿತ್ (ಚೈತನ್ಯ), ಅಚಿತ್ (ಜಡ) ಎರಡನ್ನೂ ಒಮ್ಮೆಲೆ ಕೂಡಿಕೊಂಡ ರೂಪ. ಚಿತ್ ಎನ್ನುವುದು ಐಶ್ವರ್ಯ, ಅಚಿತ್ತೆಂದರೆ ಮಲ. ಅಣುವು ಚಿದ್ರೂಪದಲ್ಲಿ ಶಿವನೇ; ಅಚಿದ್ರೂಪವಾಗುವುದು ಮಾಯೆಯಿಂದ. ಅಣುವನ್ನಾವರಿಸಿರುವುದು ಮಾಯೆ. ಈ ದರ್ಶನದಲ್ಲಿ ಮಾಯೆಗೆ ವಿಶಿಷ್ಟ ಅರ್ಥವಿದೆ. ಶಿವನೊಂದಿಗೆ ಎಡೆಬಿಡದ ನಂಟನ್ನು

ಹೊಂದಿರುವ ಅವನ ಶಕ್ತಿಗೆ ಮಾಯೆಯೆಂದು ಹೆಸರು. ಶಿವನು ಒಬ್ಬನೇ ಆದರೂ ಅನೇಕವಾಗಿರುವಂತೆ ತೋರಿಕೊಳ್ಳುವ ಸ್ವಾತಂತ್ರ್ಯವೇ ಮಾಯೆಯ ಸ್ವರೂಪ. ಮಾಯೆಯಿಂದಾಗಿ ಜೀವನಿಗೆ ತನ್ನ ಆತ್ಮದ ಸ್ವರೂಪ ಮರೆಯಾಗುತ್ತದೆ, ಸ್ವಾತಂತ್ರ್ಯದ ಅರಿವೂ ಹಿಂದಕ್ಕೆ ಸರಿಯುತ್ತದೆ, ಶಿವನ ಪೂರ್ಣಜ್ಞಾನಕ್ರಿಯಾತ್ಮಕವಾದ ರೂಪ ಮರೆತುಹೋಗುತ್ತದೆ, ವಿಶ್ವದ ವಸ್ತುಗಳು ಬೇರೆ ಬೇರೆಯಾಗಿ ತೋರಿಕೊಂಡು ಅವೆಲ್ಲವೂ ಶಿವನಾಗಿರುವ ಪೂರ್ಣಸ್ವರೂಪದ ಅನುಭವ ಸಾಧ್ಯವಾಗುವುದಿಲ್ಲ.

ಹೀಗೆ ವಿಶ್ವಚೈತನ್ಯದ ಏಕತೆಯನ್ನು ಮರೆಮಾಡಿ, ಸೃಷ್ಟಿಯ ಬಹುತ್ವಕ್ಕೆ ಕಾರಣವಾಗುವ ಮಾಯೆ ಸೃಷ್ಟಿಯ ಮೊಟ್ಟಮೊದಲ ಅಭಿವ್ಯಕ್ತಿ. ಮಾಯೆಯಿಂದಾಗಿ ಆತ್ಮತತ್ತ್ವದ ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯೆಗಳೆಂಬ ಐದು ಶಕ್ತಿಗಳು ಮರೆಯಾಗಿಬಿಡುತ್ತವೆ. ಇದು ಶಿವನ ತಿರೋಧಾನಶಕ್ತಿ. ಶಿವನ ಅನುಗ್ರಹಶಕ್ತಿಯಿಂದ ಮಾಯೆ ಸಡಿಲವಾಗಿ ಕಳಚಿಕೊಳ್ಳುತ್ತದೆ. ಶಕ್ತಿಪಾತವೆನ್ನುವುದು ಈ ಅನುಗ್ರಹ ಶಕ್ತಿಯ ಅಭಿವ್ಯಕ್ತಿ. ಶಕ್ತಿಪಾತದಲ್ಲಿ ತೀವ್ರ, ಮಧ್ಯಮ, ಮಂದ ಎಂಬ ಭೇದಗಳಿವೆ. ಒಂದೊಂದರಲ್ಲೂ ಉತ್ಕೃಷ್ಟ, ಮಧ್ಯಸ್ಥ, ನಿಕರ್ಷ ಎಂದು ಮತ್ತೆ ಮೂರು ಭೇದಗಳು. ಹೀಗೆ ಶಕ್ತಿಪಾತ ಒಂಬತ್ತು ತೆರನಾಗಿರುತ್ತದೆ. ಗುರುವಿನ, ಶಾಸ್ತ್ರಾಧ್ಯಯನದ ಅಪೇಕ್ಷೆಯಿಲ್ಲದೆ ಪ್ರತ್ಯಭಿಜ್ಞಾಜ್ಞಾನದ ಉದಯವಾಗುವುದು. ತೀವ್ರ ಶಕ್ತಿಪಾತದಿಂದ ಜೀವನ್ಮುಕ್ತಿ, ದೃಢವಾದ ಶಕ್ತಿಪಾತದಿಂದ ಸಾಧಕನು ತಾನೇ ಶಿವರೂಪದಿಂದ ಕಂಗೊಳಿಸುವುದು.

ತ್ರಿಕಶಾಸ್ತ್ರವೆನ್ನುವಾಗ ಶಿವ, ಶಕ್ತಿ, ನರ (ಜೀವ) ಎಂಬ ಮೂರು ತತ್ತ್ವಗಳ ಎಣಿಕೆಯಿದ್ದರೂ, ದಿಟವಾಗಿ ಒಂದೇ ತತ್ತ್ವದ ಮೂರು ಮುಖಗಳು ಅವು. ತ್ರಿಶಿಕಾ ಎನ್ನುವ ಮಾತಿನ ಅರ್ಥವೇ ರಹಸ್ಯಮಯವಾದ ಪರಮತತ್ತ್ವ. ಅದಕ್ಕಿಂತ ಮಿಗಿಲಾದುದು, ಬೇರೆಯಾದುದು ಯಾವುದೂ ಇರದು. ಯಾವೊಂದು ಉಪಾಯದ (ನುತ್) ಅಗತ್ಯವಿರದೆ ಸಂಸಾರದ ಕ್ಲೇಶವನ್ನು ದಾಟಿಹೋಗುವುದು (ತರ) ಅನುತ್ತರವೆನಿಸಿಕೊಳ್ಳುತ್ತದೆ. (ಅನುತ್ + ತರ, ಅವಿದ್ಯಮಾನ ಕ್ರಮಾತ್ಮಕಕ್ರಿಯಾ). ಅನುತ್ ಎಂದರೆ ಆಕಾಶವೆಂದೂ ಅರ್ಥವಿದೆ; ಆಕಾಶವನ್ನೂ ಮೀರಿದ್ದು ಅನುತ್ತರ. ಆಕಾಶವೆನ್ನುವುದು ಭೂತಕೋಟಿಯಲ್ಲಿ ಸೂಕ್ಷ್ಮತಮ ವಾದುದು. ಮೂವತ್ತಾರು ತತ್ತ್ವಗಳು ಕೂಡಿ ವಿಶ್ವ ತಾನೆ? ಇವುಗಳಲ್ಲಿ ಆಕಾಶವೇ ಅನುತ್ (ಎಂದರೆ ಅಲ್ಲಿ ಹೋಗುವುದು ಬರುವುದು ಏನೂ ಇರದು.) ಇದನ್ನೂ ಮೀರಿದವನು ಪರಮಶಿವ.

ಮೂವತ್ತಾರು ತತ್ತ್ವಗಳ ಎಣಿಕೆ ಶೈವದರ್ಶನದಲ್ಲಿ ಮುಖ್ಯವಾದುದು; ಶಿವನಿಂದ ಹೊರ ಹೊಮ್ಮುವ ಕ್ರಮ (ವಮನಯುಕ್ತಿ) ಹೀಗಿದೆ—

1. ಶಿವತತ್ತ್ವ (ಅನಾಶ್ರಿತಶಿವ) (ಅಹಂತಾ-ಇದಂತಾ ಇವೆರಡರ ಸಾಮರಸ್ಯ)
2. ಶಕ್ತಿ (ಶಿವನು ಅ-ಹಂ ಎಂದು ವಿಕಾಸಗೊಳ್ಳುವುದು)

3. ಸದಾಶಿವ (ಸ್ವಾತಂತ್ರ್ಯಶಕ್ತಿ; ಅಭೇದಹಾನಿ; ಅಹಂನಲ್ಲಿ ಇದಂ ತೋರಿಕೊಳ್ಳುವುದು)
4. ಈಶ್ವರ (ಅಭೇದದ ಹಾನಿಯಲ್ಲಿ ಭೇದದ ಸೂಕ್ಷ್ಮಾಭಿವ್ಯಕ್ತಿ)
5. ಶುದ್ಧವಿದ್ಯಾ (ಭೇದ-ಅಭೇದಗಳು ಸಮನಾಗಿ ತೋರಿಕೊಳ್ಳುವುದು)
6. ಮಹಾಮಾಯಾ (ಅಭೇದ ಕಡಮೆಯಾಗಿ ಭೇದ ಹೆಚ್ಚುವುದು)
ಮಾಯಾ (ಸಂಪೂರ್ಣವಾಗಿ ಭೇದವೇ ಇರುವುದು; ಅವಿದ್ಯೆ)
7. ಪುರುಷ (ಮಾಯೆಯಲ್ಲಿರುವ ವ್ಯಕ್ತಿ)
8. ಕಾಲ
9. ವಿದ್ಯಾ
10. ರಾಗ (ಮಾಯೆಯಿಂದುಂಟಾದ ತತ್ತ್ವಗಳು; ವ್ಯಕ್ತಿಯನ್ನು ಆವರಿಸುತ್ತವೆ)
11. ಕಲಾ
12. ನಿಯತಿ
13. ಪ್ರಕೃತಿ (ಸತ್ತ್ವ, ರಜಸ್ಸು, ತಮಸ್ಸು ಸಮನಾಗಿರುವ ಸ್ಥಿತಿ)
14. ಬುದ್ಧಿ (ಪ್ರಕೃತಿಯ ಮೊಟ್ಟಮೊದಲ ವಿಕಾರ)
15. ಮನಸ್ಸು
16. ಅಹಂಕಾರ (ಬುದ್ಧಿಯ ವಿಕಾರಗಳು)
17. ಶ್ರೋತ್ರ
18. ತ್ವಕ್
19. ಚಕ್ಷು (ಜ್ಞಾನೇಂದ್ರಿಯಗಳು; ಅಹಂಕಾರದ ವಿಕಾರಗಳು)
20. ರಸನಾ
21. ಘ್ರಾಣ
22. ವಾಕ್
23. ಪಾಣಿ
24. ಪಾದ (ಕರ್ಮೇಂದ್ರಿಯಗಳು; ಇವೂ ಅಹಂಕಾರದ ವಿಕಾರಗಳೇ)
25. ಉಪಸ್ಥ
26. ಪಾಯು
27. ಶಬ್ದ
28. ಸ್ಪರ್ಶ
29. ರೂಪ (ತನ್ಮಾತ್ರಗಳು)
30. ರಸ
31. ಗಂಧ

32. ಆಕಾಶ
33. ವಾಯು
34. ತೇಜ (ತನ್ಮಾತ್ರಗಳಿಂದ ಉಂಟಾದ ಮಹಾಭೂತಗಳು)
35. ಜಲ
36. ಪೃಥ್ವೀ

ಇದು ಮಾಲಿನೀವಿಜಯೋತ್ತರತಂತ್ರದಲ್ಲಿ ಹೇಳಿರುವ ಕ್ರಮ. ಶಿವತತ್ತ್ವ ಮೊದಲ ಆವಿರ್ಭಾವವಾದರೆ ಪೃಥ್ವೀತತ್ತ್ವ ಕಟ್ಟಕಡೆಯದು. ಅದರಲ್ಲಿ ಉಳಿದೆಲ್ಲ ತತ್ತ್ವಗಳೂ ಅಡಗಿವೆ. ಒಂದೊಂದು ತತ್ತ್ವವೂ ಎಲ್ಲ ತತ್ತ್ವಗಳ ಸಂಗ್ರಹ. ಈ ಮೂವತ್ತಾರು ತತ್ತ್ವಗಳು ಶಿವಮಯವಾದ ವಿಶ್ವವಾದರೆ, ವಿಶ್ವೋತ್ತೀರ್ಣಶಿವನನ್ನು ಮೂವತ್ತೇಳನೆಯ ಅನುತ್ತರತತ್ತ್ವವೆಂದು ಅಭಿನವಗುಪ್ತನು 'ಪರ್ಯಂತಪಂಚಾಶಿಕೆ'ಯಲ್ಲಿ ಹೇಳಿದ್ದಾನೆ.

ಹೀಗೆ ವಿಶ್ವೋತ್ತೀರ್ಣಶಿವನನ್ನು 'ಶುದ್ಧ ಅಹಂ' ಎಂದು ನಿರ್ದೇಶಿಸುತ್ತಾರೆ. 'ಅ-ಹಂ' ಎನ್ನುವಾಗ ವರ್ಣಮಾತೃಕೆಗಳ (ಅ, ಆ, ಇ, ಈ ಇತ್ಯಾದಿ) ಪ್ರತ್ಯಾಹಾರರೂಪವಾದ 'ಅ-ಹ'ಕ್ಕೆ (ಅಕಾರದಿಂದ ಹಕಾರದವರೆಗೆ) ಅವಿಭಾಗದ್ಯೋತಕವಾಗಿ ಬಿಂದುವನ್ನು ಕೂಡಿಸಿರುವುದು ತಾತ್ಪರ್ಯ. ಪೃಥ್ವಿಯಿಂದ ಅನಾಶ್ರಿತಶಿವನವರೆಗಿರುವ ಎಲ್ಲ ತತ್ತ್ವಗಳನ್ನೂ ಮೀರಿರುವ, ಅಪರಿಚ್ಛಿನ್ನಸಂವಿತ್‌ರೂಪದ ಪರಮಶಿವ. ಎಂದರೆ ಅಖಂಡವಾದ ಅರಿವು, ಸ್ವಾತ್ಮಮಾತ್ರಸಂವಿತ್. ಶಿವಶಕ್ತಿಸಾಮರಸ್ಯದಲ್ಲಿ ಅಡಗಿರುವ ಆನಂದ ಇದರ ಸ್ವರೂಪ.

ಮೂವತ್ತಾರು ತತ್ತ್ವಗಳು ಗ್ರಾಹ್ಯವೆನಿಸಿಕೊಳ್ಳುತ್ತವೆ. 'ಇದು' ಎಂದು ನಿರ್ದೇಶಿಸಬಹುದಾದುದು; 'ಇದಂತಾ'ಭಾವದಿಂದ ನೋಡುವಾಗ ಸುಖ-ದುಃಖಾದಿಗಳ ಅನುಭವವಾಗುತ್ತದೆ. ಈ ತತ್ತ್ವಗಳ ಸ್ವರೂಪವನ್ನು ಅರಿತುಕೊಂಡರೆ ಪರಶಿವನು ವಿಶ್ವಮಯ ಎಂಬುದು ಖಚಿತವಾಗುತ್ತದೆ. ಜೀವಿಯಾದವನು (ಅಣು) ಇಡೀ ವಿಶ್ವವು ತನ್ನಲ್ಲೇ (ಅಹಂತಾ) ಅಡಗಿದೆ ಎಂಬ ಭಾವನೆಯನ್ನು ಗಟ್ಟಿ ಮಾಡಿಕೊಳ್ಳಬಹುದು. ಇದಾದ ನಂತರ ದೇಹವು ಚಿಚ್ಛಕ್ತಿಯ ಬಾಹ್ಯಾಕಾರವಾದ ಪ್ರಾಣಶಕ್ತಿಯಲ್ಲಿ ನೆಲೆಗೊಂಡಂತೆ, ಪ್ರಾಣಶಕ್ತಿಯು ಧೀಶಕ್ತಿಯಲ್ಲಿ ನೆಲೆಗೊಂಡಂತೆ, ಧೀಶಕ್ತಿಯು ಸಾಮ್ಯಸ್ಥಿತಿಯಲ್ಲಿ ನೆಲೆಗೊಂಡಂತೆ, ಸಾಮ್ಯಸ್ಥಿತಿಯು ಕೇವಲ ಚಿತ್‌ನಲ್ಲಿ (ಮೇಲೆ ಹೇಳಿದ ಸಂವಿತ್‌ನಲ್ಲಿ) ನೆಲೆಗೊಂಡಂತೆ ಧ್ಯಾನಮಾಡುವುದು ಸಾಧ್ಯವಾಗುತ್ತದೆ. ಇದು ಸಾಧನಭಾಗ.

'ಪ್ರಾಕ್ ಸಂವಿತ್ ಪ್ರಾಣೇ ಪರಿಣತಾ' ಎಂಬ ಮಾತಿದೆ. ಮೊದಲಲ್ಲಿ ಸಂವಿತ್ ಅಥವಾ ಚಿತ್ ಎಂಬ ಶಕ್ತಿ ಪ್ರಾಣವಾಗಿ ಮಾರ್ಪಟ್ಟಿತೆಂದರ್ಥ. ಪ್ರಾಣಗಳು ಐದು. ಪ್ರಾಣಕ್ಕಿಂತ ಬಾಹ್ಯವಾದುದು ಅಪಾನ; ಇದು ಪ್ರಮಾತೃವಿಗೆ (ಎಂದರೆ ಗ್ರಾಹಕನಿಗೆ, ವಿಶ್ವದ ವಿವರಗಳನ್ನು ಅನುಭವಿಸುವವನಿಗೆ) ಆಸರೆಯಾದುದು. ಅಪಾನಕ್ಕಿಂತ ಬಾಹ್ಯವಾದುದು ಸಾಮಾನವೆಂಬ ಪ್ರಾಣ; ಇದರಲ್ಲಿ ಇಂದ್ರಿಯಗಳಿಂದ ಬೇರೆ ಬೇರೆಯಾಗಿ ಗ್ರಾಹ್ಯವಾಗುವುದನ್ನೆಲ್ಲ

ಒಂದಾಗಿ ಸಾಧಿಸುವುದಾಗುತ್ತದೆ. ಸಮಾನಕ್ಕಿಂತ ಬಾಹ್ಯವಾದುದು ಉದಾನವೆಂಬ ಪ್ರಾಣ. ಇಲ್ಲಿ ಪ್ರಮಾತೃ (ಗ್ರಾಹಕ) ಮತ್ತು ಪ್ರಮೇಯ (ಗ್ರಾಹ್ಯ) ಎರಡೂ ಒಂದಾಗಿಬಿಡುತ್ತವೆ. ಎಲ್ಲಕ್ಕಿಂತ ಬಾಹ್ಯವಾದುದು ವ್ಯಾನವೆಂಬ ಪ್ರಾಣ. ಸಾಧಕನಿಗೆ ಇಲ್ಲಿ ಭೇದಗಳೆಲ್ಲ ಮರೆಯಾಗಿ ಬ್ರಹ್ಮಾನಂದದ ಅನುಭವವಾಗುತ್ತದೆ.

ಆನಂದವೆಂದರೆ ಶಿವನ ರೂಪವೇ; ಅವನ ಇನ್ನೊಂದು ರೂಪ ತ್ (ಅರಿವು). ಆನಂದ ಎನ್ನುವುದು ಶಿವನ ಸ್ವಾತಂತ್ರ್ಯಶಕ್ತಿಯ ಅಭಿವ್ಯಕ್ತಿ. ಪ್ರಾಣವು ಹೊರಮುಖವಾಗಿ ಹರಿದು, ಜೀವಿಯು ಸ್ಥೂಲಪ್ರಮಾತೃವಾದಾಗ ಹೊರಗಣ ವಿಶ್ರಾಂತಿಸ್ಥಿತಿಯನ್ನು ಅನುಭವಿಸುವಾಗ ನಿರಾನಂದ. ಸಾಧನೆಯ ಹಲವು ಹಂತಗಳಲ್ಲಿ ನಿಜಾನಂದ, ಪರಾನಂದ, ಪೂರ್ಣಾನಂದ, ಮಹಾನಂದ, ಬ್ರಹ್ಮಾನಂದ, ಚಿದಾನಂದ ಎಂಬ ಆನಂದಾನುಭವಗಳು ಒದಗಿಬರುತ್ತವೆ.

ಅಭಿನವನು ಆರು ಅಂಗಗಳಿರುವ (ಷಡಂಗ) ಯೋಗವನ್ನು ಹೇಳಿದ್ದಾನೆ. ಅವನ ಪ್ರಕಾರ, ಪ್ರಾಣ ಮತ್ತು ಮನಸ್ಸು ಒಂದನ್ನೊಂದು ಆಶ್ರಯಿಸಿರುತ್ತವೆ. ಇವೆರಡನ್ನು ಕುರಿತ ಸಾಧನೆಯೇ ಯೋಗ. ವಾಡಿಕೆಯ ಪಾತಂಜಲಯೋಗದಲ್ಲಿ ಹೇಳಿರುವ ಯಮ, ನಿಯಮ, ಆಸನಗಳು ದೇಹವನ್ನಷ್ಟೆ ಕುರಿತವು. ಇವು ಪರೋಕ್ಷವಾದುವು. ಸಾಕ್ಷಾತ್ತಾಗಿ (ಎಂದರೆ ನೇರವಾಗಿ) ಯೋಗಕ್ಕೆ ನೆರವಾಗುವುವು ಪ್ರಾಣಾಯಾಮ, ಧ್ಯಾನ, ಪ್ರತ್ಯಾಹಾರ, ಧಾರಣಾ, ತರ್ಕ ಮತ್ತು ಸಮಾಧಿ. ಇವುಗಳಲ್ಲಿ ತರ್ಕದ (ಸತ್ತರ್ಕದ) ಪಾತ್ರ ಹೆಚ್ಚಿನದು ('ತರ್ಕೋ ಯೋಗಾಂಗಮುತ್ತಮಂ'). ಆತ್ಮ-ಶಿವ ಇವರ ಏಕತ್ವವನ್ನು ವಿವೇಚನೆಮಾಡುವುದು ತರ್ಕ, ಅಥವಾ ಸತ್ತರ್ಕ. ಇದೇ ಸದ್ವಿದ್ಯೆಯೂ ಹೌದು. ದೈವಾನುಗ್ರಹದಿಂದಲೇ ಇದು ಸಾಧ್ಯವಾಗುವುದು ('ಸಾ ಚೇಚ್ಛಾ ಪರಮೇಶಿತುಃ'). ಬ್ರಹ್ಮಾನುಭವಕ್ಕೆ ಇದು ಸಾಕ್ಷಾತ್ಸಾಧನೆ. ಅಜ್ಞಾನದ ತೆರೆಯನ್ನು ಹರಿದು ಒಳಗೆ ಹೋಗಬಲ್ಲುದು; ಭೇದಾಭಾಸವನ್ನು ಬೇರುಸಹಿತ ಕಿತ್ತು ಬಿಸುಡುತ್ತದೆ. ಇದನ್ನೇ ಅಭಿನವನು ಪ್ರತ್ಯಭಿಜ್ಞೆಯೆಂದೂ ಹೊಸ ದಾರಿಯೆಂದೂ ('ಮಾರ್ಗೋ ನವಃ') ಕರೆದಿದ್ದಾನೆ.

●

ಅಭಿಜ್ಞಾನ

ನಂ. 7-8, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಆವರಣ, ಬಸವನಗುಡಿ ರಸ್ತೆ
ನರಸಿಂಹರಾಜ ಕಾಲೊನಿ, ಬೆಂಗಳೂರು - 560 019 ✆ 652 14 14

ಸಂಸ್ಕೃತಿ-ಕಲೆ-ಸಾಹಿತ್ಯ—ಈ ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಂಡು **ಅಭಿಜ್ಞಾನ** 1996ರಲ್ಲಿ ಜನ್ಮತಾಳಿತು. ಭಾರತೀಯಪರಂಪರೆಯನ್ನು ಪ್ರತಿಬಿಂಬಿಸುವಂಥ ಚಟುವಟಿಕೆಗಳ ಕಡೆಗೆ ನಮ್ಮ ಮುಖ್ಯ ಲಕ್ಷ್ಯ; ಆದರೆ ಜಗತ್ತಿನ ಪ್ರತಿಯೊಂದು ಸಾತ್ತ್ವಿಕಸ್ವರೂಪವೂ ನಮಗೆ ಪೂಜ್ಯ, ಪೌರಸ್ತ್ಯ-ಪಾಶ್ಚಾತ್ಯಪ್ರಪಂಚದ ಶುದ್ಧ-ಶುಭ್ರಪ್ರಜ್ಞಾಪ್ರವಾಹದ ಸಂಗಮಸ್ಥಾನ **ಅಭಿಜ್ಞಾನ**.

ಅಭಿಜ್ಞಾನದೊಂದಿಗೆ ನೀವು ಹೇಗೆ ಗುರುತಿಸಿಕೊಳ್ಳಬಹುದು?

- ❑ ಅಭಿಜ್ಞಾನದ ಪ್ರಕಟನೆಗಳನ್ನು ಕೊಂಡು ಓದುವುದರ ಮೂಲಕ,
- ❑ ಅಭಿಜ್ಞಾನದ ಸದಸ್ಯರಾಗುವ ಮೂಲಕ,
- ❑ ಅಭಿಜ್ಞಾನ ಏರ್ಪಡಿಸುವ ಸಾಂಸ್ಕೃತಿಕಕಾರ್ಯಕ್ರಮಗಳಲ್ಲಿ ಬಂಧು-ಮಿತ್ರರೊಡಗೂಡಿ ಭಾಗವಹಿಸುವ ಮೂಲಕ,
- ❑ ಅಭಿಜ್ಞಾನದ ಉದ್ದೇಶಿತ ಗ್ರಂಥಭಂಡಾರಕ್ಕೆ ನಿಮ್ಮಲ್ಲಿರುವ ಪ್ರಾಚೀನ / ನವೀನ ಪುಸ್ತಕ ಸಂಪತ್ತನ್ನು ಕೊಡುಗೆಯಾಗಿ ನೀಡುವ ಮೂಲಕ,
- ❑ ಅಭಿಜ್ಞಾನದ ಚಟುವಟಿಕೆಗಳಿಗೆ ಉದಾರವಾಗಿ ತನು-ಮನ-ಧನಸಹಾಯವನ್ನು ಒದಗಿಸುವ ಮೂಲಕ,

ಅಭಿಜ್ಞಾನದ ಗ್ರಂಥಲೋಕಕ್ಕೆ ಸದಸ್ಯರಾಗುವುದು ಹೇಗೆ?

- ❑ ಸಂಸ್ಕೃತಿ-ಕಲೆ-ಸಾಹಿತ್ಯಗಳ ಕಡೆಗೆ ಒಲವು-ಅಭಿಮಾನ-ಕಾಳಜಿಗಳುಳ್ಳ ಸಹೃದಯರೆಲ್ಲರಿಗೂ ಅಭಿಜ್ಞಾನದ ಸದಸ್ಯತ್ವಕ್ಕೆ ಆದರದ ಸ್ವಾಗತ. ಅಭಿಜ್ಞಾನದ ಹೆಸರಿಗೆ ಐದುನೂರು ರೂಪಾಯಿಗಳ (ರೂ. 500/-) ಡಿ. ಡಿ. / ಚೆಕ್*/ ಎಂ. ಓ. ಅಥವಾ ನೇರವಾಗಿ ನಗದನ್ನು ಸಲ್ಲಿಸಿ, ಸದಸ್ಯರಾಗಬಹುದು.

ಸದಸ್ಯರಿಗೇನು ಪ್ರಯೋಜನ?

- ❑ ಸದಭಿರುಚಿಯ ಚಟುವಟಿಕೆಗಳ ಮೂಲಕ ಸಮಾಜಸ್ವಾಸ್ಥ್ಯವನ್ನು ಮತ್ತಷ್ಟು ಹೆಚ್ಚಿಸುವ ಸಂಕಲ್ಪದಿಂದ ಕಾರ್ಯಪ್ರವೃತ್ತವಾಗಿರುವ ಅಭಿಜ್ಞಾನದಂಥ ಒಂದು ಸಾಂಸ್ಕೃತಿಕ ಸಂಘಟನೆಗೆ ಯೋಗದಾನ ನೀಡಿದ ಆತ್ಮತೃಪ್ತಿ-ಸಂತೋಷ.
- ❑ ಅಭಿಜ್ಞಾನದ ಎಲ್ಲ ಪ್ರಕಟನೆಗಳ ಮೇಲೂ ಸದಸ್ಯರಿಗೆ ಶೇ. 20ರಷ್ಟು ರಿಯಾಯಿತಿ.

ಆತ್ಮೀಯರೇ, ಅಭಿಜ್ಞಾನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರೋತ್ಸಾಹಿಸಿ, ಬೆಂಬಲಿಸಿ, ಬೆಳಸಿ.

ಅಭಿಜ್ಞಾನದ ಪರವಾಗಿ
ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ

---

* ಬೆಂಗಳೂರಿನ ಹೊರತು ಬೇರೆ ಊರುಗಳ ಚೆಕ್‌ಗಳಿಗೆ ರೂ. 20ನ್ನು ಸೇರಿಸಿ.

ಅಭಿಜ್ಞಾನದ ಪ್ರಕಟನೆಗಳು

1.	ಸಾಮಾನ್ಯಧರ್ಮ *	ಶತಾವಧಾನಿ ಡಾ. ಆರ್. ಗಣೇಶ್	ರೂ. 15
2.	ನೀಲಕಂಠದೀಕ್ಷಿತನ ಶತಕತ್ರಯ**	ಶತಾವಧಾನಿ ಡಾ. ಆರ್. ಗಣೇಶ್	ರೂ. 40
3.	ವಂಶೀಸಂದೇಶಂ (ಶ್ರೀಕೃಷ್ಣನನ್ನು ಕುರಿತ ಸಂದೇಶಕಾವ್ಯ)	ಶತಾವಧಾನಿ ಡಾ. ಆರ್. ಗಣೇಶ್	ರೂ. 25
4.	ಶ್ರೀಸೂಕ್ತ *	ಪ್ರೊ. ಸಾ. ಕೃ. ರಾಮಚಂದ್ರರಾವ್	ರೂ. 50
5.	ಕಲಾತತ್ತ್ವಮಹರ್ಷಿ ಆನಂದ ಕುಮಾರಸ್ವಾಮಿ (ಜೀವನಚರಿತ್ರೆ)	ಪ್ರೊ. ಸಾ. ಕೃ. ರಾಮಚಂದ್ರರಾವ್	ರೂ. 25
6.	ಪ್ರಥಮ ಸೋಪಾನ (ದೇವರು-ಪುನರ್ಜನ್ಮ-ವೇದಗಳನ್ನು ಕುರಿತ ಮೀಮಾಂಸೆ)	ಸ್ವಾಮೀ ಪರಮಾನಂದ ಭಾರತೀ	ರೂ. 45
7.	ನಿತ್ಯನೀತಿ (ಸುಭಾಷಿತಗಳ ಸಂಗ್ರಹ)	ಶತಾವಧಾನಿ ಡಾ. ಆರ್. ಗಣೇಶ್	ರೂ. 75
8.	ವಿಲಿಯಂ ಷೇಕ್ಸ್‌ಪಿಯರ್	ಪ್ರೊ. ಎಲ್. ಎಸ್. ಶೇಷಗಿರಿ ರಾವ್	ರೂ. 110
9.	ಮೆಲುಗಾಳಿಯ ಮಾತುಗಳು (ತೊಂಬತ್ತು ಚಿಂತನಗಳು)	ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ	ರೂ. 90
10.	ಅಣ್ಣಪ್ಪದೈವ	ಪ್ರೊ. ಸಾ. ಕೃ. ರಾಮಚಂದ್ರರಾವ್	ರೂ. 65
11.	ಶಾರದಾಪೀಠದ ಮಾಣಿಕ್ಯ	ಪ್ರೊ. ಸಾ. ಕೃ. ರಾಮಚಂದ್ರರಾವ್	ರೂ. 90
12.	Sankara and Adhyasa-bhashya	Prof. S. K. Ramachandra Rao	Rs. 100
13.	ಅಭಿನವಗುಪ್ತ	ಪ್ರೊ. ಸಾ. ಕೃ. ರಾಮಚಂದ್ರರಾವ್	ರೂ. 50

* ಪ್ರತಿಗಳು ಮುಗಿದಿವೆ; ** ಕೆಲವೇ ಪ್ರತಿಗಳು ಉಳಿದಿವೆ.